27 August 2026 Thursday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಬದುಕು ಕಲಿಸುವ ಪಾಠ ಉಸಿರಿರುವರೆಗೆ,
ದೇವರು ಕಲಿಸುವ ಪಾಠ
ಕರ್ಮಗಳು ಕಳೆಯುವರೆಗೆ!

-ಸ್ನೇಹಾ ಆನಂದ್

info.varthaman@gmail.com



ಕಾಲಕ್ಕೆ ತಕ್ಕಂತೆ ಕೌಶಲ್ಯ ವೃದ್ಧಿಸಿಕೊಳ್ಳಿ: ಕೆ.ದೀಪಕ್ ಕರೆ — ಪುಟ ಸಂ. 2



ಕನ್ನಡವನ್ನು ಕಡೆಗಣಿಸುತ್ತಿರುವ ಹೊಸ ಪರೀಕ್ಷಾ ನಿಯಮ — ಪುಟ ಸಂ. 3



ಹನೂರು ಶೂಟೌಟ್ ಪ್ರಕರಣ: ಸಿಬಿಐ ತನಿಖೆಗೆ ವಹಿಸಿ ಕೆ.ವೀರಭದ್ರಸ್ವಾಮಿ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 262 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಗಜಪಯಣಕ್ಕೆ ವಿದ್ಯುಕ್ತ ಚಾಲನೆ

## ಮೈಸೂರಿಗೆ ಬಂದಿಳಿದ 9 ಆನೆಗಳ ತಂಡ | ದಸರಾ ಸಂಭ್ರಮ ಆರಂಭ



**ಮೈಸೂರು:** ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ 2026ರ ಸಿದ್ಧತೆಗಳು ಅಧಿಕೃತವಾಗಿ ಆರಂಭಗೊಂಡಿದೆ. ಮೈಸೂರು ಉಸ್ತುವಾರಿ ಸಚಿವ ಡಾ ಯತೀಂದ್ರ ಸಿದ್ದರಾಮಯ್ಯ ಅವರು ದಸರಾ ಗಜಪಡೆಗೆ ಹುಣಸೂರಿನ ವೀರನಹೊಸಳ್ಳಿಯಲ್ಲಿ ಇಂದು ಬೆಳಗ್ಗೆ 10ರಿಂದ 10.28ರ ಶುಭ ತುಲಾ ಲಗ್ನದಲ್ಲಿ ಪೂಜೆಕಾರ್ಯ ನಡೆಸಿ ದಸರಾ ಗಜಪಡೆಗೆ ಫಲತಾಂಬೂಲ ನೀಡುವ ಮೂಲಕ ಚಾಲನೆ ನೀಡಿದರು.

ಮೈಸೂರು ದಸರಾಕ್ಕೆ ಗಜಪಡೆಯ ಮೊದಲ ಹಂತದಲ್ಲಿ ಧನಂಜಯ, ಮಹೇಂದ್ರ, ಏಕಲವ್ಯ, ಪ್ರಶಾಂತ, ಗೋಪಿ, ಶ್ರೀರಾಮ, ಸುಗ್ರೀವ, ಲಕ್ಷ್ಮೀ, ಕಾವೇರಿ ಸೇರಿ 9 ಆನೆಗಳು ನಾಡಿನತ್ತ ಆಗಮಿಸುತ್ತಿವೆ.

ನೂರಾರು ಮಂದಿ ಮಹಿಳೆಯರು ಪೂರ್ಣಕುಂಭ ಸ್ವಾಗತದಿಂದ ಮುಂದೆ ಸಾಗಿದರು. ಬಳಿಕ ವೀರಗಾಸೆ ಕುಣಿತ, ಕಂಸಾಳೆ ಜಾನಪದ, ನಗಾರಿ, ಡೊಳ್ಳು ಕುಣಿತ, ಚಂಡೆ ಮೇಳ ಹೀಗೆ 8ಕ್ಕೂ ಹೆಚ್ಚು ಕಲಾತಂಡಗಳು ಮುಂದೆ ಸಾಗಿದವು. ಅದರ ಹಿಂದೆ ಅಭಿಮನ್ಯು, ಕಾವೇರಿ, ಮಹೇಂದ್ರ, ಲಕ್ಷ್ಮಿ, ಗೋಪಿ, ಪ್ರಶಾಂತ, ದನಂಜಯ, ಶ್ರೀರಾಮ, ಶ್ರೀಕಂಠ, ಏಕಲವ್ಯ ಆನೆಗಳು ಸಾಲಿನಲ್ಲಿ ನಡೆದವು. ಬರೋಬ್ಬರಿ ಒಂದು ಕಿ.ಮೀ ದೂರ ಕಾಲ್ನಡಿಯಲ್ಲಿ ಸಾವಿರಾರ ಮಂದಿ ರಸ್ತೆ ಇಕ್ಕೆಲೆಗಳಲ್ಲಿ ಗಜಪಡೆಯ ನಡಿಗೆಯನ್ನು ನಿಂತು ನೋಡಿ ಸಂತಸ ಪಟ್ಟರು. ಮಕ್ಕಳು, ಯುವಕರು, ಮಹಿಳೆಯರೆನ್ನದೇ ಎಲ್ಲರೂ ಆನೆಗಳ ಚಿತ್ರ ತೆಗೆದು ಖುಷಿ ಪಟ್ಟರೆ, ಇನ್ನೂ ಅನೇಕರು ಅವಗಳೊಂದಿಗೆ ಸೆಲ್ಫಿ ಕ್ಲಿಕಿಸಿಕೊಳ್ಳಲು ಮುಗಿ ಬೀಳುತ್ತಿದ್ದ ದೃಶ್ಯ

ಪುಟ 2ಕ್ಕೆ

ಚಿತ್ರಗಳು: ಕೃಷ್ಣರಾವ್



### ನಾಳೆ ಅರಮನೆಗೆ ಪ್ರವೇಶ

ಹುಣಸೂರು ತಾಲೂಕಿನ ನಾಗರಹೊಳೆ ಅಭಯಾರಣ್ಯದ ವೀರನಹೊಸಹಳ್ಳಿಯಿಂದ ಮೊದಲ ಹಂತದ ಗಜಪಡೆ ಮೈಸೂರಿನ ಅರಣ್ಯ ಭವನಕ್ಕೆ ಆಗಮಿಸಿವೆ. ಆನೆಗಳು ಎರಡು ದಿನಗಳ ಕಾಲ ಅರಣ್ಯ ಭವನದ ಆವರಣದಲ್ಲಿ ತಂಗಲಿವೆ. ಅಲ್ಲಿ ಅವುಗಳಿಗೆ ವಿಶ್ರಾಂತಿ ಹಾಗೂ ಪ್ರಾಥಮಿಕ ಸತ್ಕಾರಗಳನ್ನು ನೀಡಲಾಗುತ್ತದೆ. ಗಜಪಡೆಯು ಸಾಂಪ್ರದಾಯಿಕ ಹಾಗೂ ರಾಜಮನೆತನದ ರೀತಿಯಲ್ಲಿ ಅರಮನೆ ಆವರಣವನ್ನು ಆಗಸ್ಟ್ 28ರಂದು ಪ್ರವೇಶಿಸಲಿದೆ. ಅರಮನೆ ಪ್ರವೇಶಿಸಿದ

ಪುಟ 2ಕ್ಕೆ

### ಕ್ಯಾಪ್ಟನ್ ಅಭಿಮನ್ಯುವಿಗೆ ಬೀಳ್ಕೊಡುಗೆ

ಜಂಬೂ ಸವಾರಿಯಲ್ಲಿ ಸತತ 6 ವರ್ಷಗಳ ಕಾಲ ನಿರ್ವಿಘ್ನವಾಗಿ ಚಿನ್ನದ ಅಂಬಾರಿಯಲ್ಲಿ ಚಾಮುಂಡೇಶ್ವರಿಯನ್ನು ಹೊತ್ತಿದ್ದ ಕ್ಯಾಪ್ಟನ್ ಅಭಿಮನ್ಯುವಿಗೆ ಅಭಿಮಾನದ ಬೀಳ್ಕೊಡುಗೆ ನೀಡಲಾಯಿತು.

ಮೈಮೇಲೆ ಬಣ್ಣ ಬಣ್ಣದ ಚಿತ್ತಾರ ಬಿಡಿಸಿಕೊಂಡು ಸಿಂಗಾರಗೊಂಡ ಅಭಿಮನ್ಯುವನ್ನು ಶಂಖ, ಚಕ್ರ, ಗಂಡಭೇರುಂಡ ಹೂವಿನ ಬಳ್ಳಿ ಬಿಡಿಸಿದ ದಾರಿಯುದ್ದಕ್ಕೂ ಹೂಮಳೆ ಸುರಿಸಿ ಸಿಬ್ಬಂದಿ ಕರೆತಂದರು. ಅರಣ್ಯ ಇಲಾಖೆ ಸಿಬ್ಬಂದಿಯ ಅಚ್ಚುಮೆಚ್ಚಿನ ಆನೆಯಾಗಿರುವ ಅಭಿಮನ್ಯುವಿಗೆ ಬೀಳ್ಕೊಡುಗೆ ನೀಡಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದರು. ಈ ಹಿನ್ನೆಲೆ ಗಜಪಯಣ ವೇಳೆ ಅಭಿಮನ್ಯುವಿಗೆ ಬೀಳ್ಕೊಡುಗೆ ನೀಡಲಾಯಿತು.

ಮೈಸೂರು ದಸರಾ ಮಹೋತ್ಸವದಲ್ಲಿ ಅಭಿಮನ್ಯು ಸತತ 25 ವರ್ಷ ಭಾಗವಹಿಸಿದ್ದಾನೆ. 6 ಬಾರಿ 750 ಕೆಜಿ ತೂಕದ ಚಿನ್ನದ ಅಂಬಾರಿಯನ್ನು ಅತ್ಯಂತ ಗಂಭೀರ ಹಾಗೂ ಗಜಗಾಂಭೀರ್ಯದಿಂದ ಹೊತ್ತು ಸಾಗಿದ್ದ ದಿಗ್ಗಜ ಆನೆ ಅಭಿಮನ್ಯು. ಈಗ ವಯೋಸಹಜವಾಗಿ ದಸರಾ ಸೇವೆಯಿಂದ ನಿವೃತ್ತಿಗೊಂಡಿದೆ. ಪ್ರಸ್ತುತ 60 ವರ್ಷ ತಲುಪಿರುವ ಅಭಿಮನ್ಯುವನ್ನು ಸರ್ಕಾರಿ ನಿಯಮಾವಳಿ ಪ್ರಕಾರ ದಸರಾದ ಸಕ್ರಿಯ ಕರ್ತವ್ಯಗಳಿಂದ ಮುಕ್ತಿಗೊಳಿಸಲಾಗಿದೆ.

ಅಭಿಮನ್ಯು ಕೇವಲ ಅಂಬಾರಿ ಹೊರುವುದಕ್ಕಷ್ಟೇ ಅಲ್ಲದೆ,



### ಮಹೇಂದ್ರನಿಗೆ ಅಂಬಾರಿ ಪಟ್ಟ?

**ಮೈಸೂರು:** ಈ ಬಾರಿಯ ದಸರಾ ಜಂಬೂಸವಾರಿಯಲ್ಲಿ ಪ್ರಮುಖ ಬದಲಾವಣೆಯಾಗಿದೆ. ಕಳೆದ ಆರು ವರ್ಷಗಳಲ್ಲಿ ಚಿನ್ನದ ಅಂಬಾರಿ ಹೊತ್ತಿದ್ದ 60 ವರ್ಷದ ಅಭಿಮನ್ಯು ಈ ಬಾರಿ ದಸರಾ ಕರ್ತವ್ಯದಿಂದ ನಿವೃತ್ತಿಯಾಗಿದ್ದಾನೆ. ಹೀಗಾಗಿ ಧನಂಜಯ, ಪ್ರಶಾಂತ, ಸುಗ್ರೀವ ಹಾಗೂ ಮಹೇಂದ್ರ ಸೇರಿ ನಾಲ್ಕು ಆನೆಗಳನ್ನು ಅಂಬಾರಿ ಹೊರುವ ಜವಾಬ್ದಾರಿಗಾಗಿ ಪರಿಗಣಿಸಲಾಗಿದೆ. ಅಂತಿಮವಾಗಿ ಯಾರಿಗೆ ಚಿನ್ನದ ಅಂಬಾರಿ ಹೊರುವ ಜವಾಬ್ದಾರಿ ಸಿಗಲಿದೆ ಎಂಬುದು ದಸರಾ ಸಿದ್ಧತೆಗಳ ಪ್ರಮುಖ ಕುತೂಹಲವಾಗಿದೆ. ಇನ್ನೂ ಈ ಬಗ್ಗೆ ಮುಂದಿನ ದಿನಗಳಲ್ಲಿ ತರಬೇತಿಯೊಂದಿಗೆ ತಿಳಿಸುವುದಾಗಿ ಅರಣ್ಯ ಇಲಾಖೆ ತಿಳಿಸಿ ತನ್ನ ಕೂತೂಹಲ ಉಳಿಸಿಕೊಂಡಿದೆ. ಸಂಪ್ರದಾಯದ ಪ್ರಕಾರ ಶ್ರೀರಂಗಪಟ್ಟಣ ದಸರೆಯಲ್ಲಿ ಭಾಗವಹಿಸುವ ಮಹೇಂದ್ರ ಆನೆಯೇ ಈ ಬಾರಿ ಅಂಬಾರಿ ಹೊರುವ ಪಟ್ಟ ಅಲಂಕರಿಸುವುದು ನಿಶ್ಚಿತ ಎಂದು ಮೂಲಗಳು ತಿಳಿಸುತ್ತಿವೆಯಾದರೂ ಅರಣ್ಯ ಇಲಾಖೆ ಅಂತಿಮ ನಿರ್ಧಾರ ಒಂದಷ್ಟು ದಿನಗಳಲ್ಲಿ ತಿಳಿಸಲಿವೆ.





## ರಾಜೀನಾಮೆ ಊಹಾಪೋಹಾ: ಸಚಿವ ನಾಗೇಂದ್ರ ನಿರಾಕರಣೆ



**ಬೆಂಗಳೂರು:** ಸರ್ಕಾರಕ್ಕೆ ಮುಜುಗರ ತಪ್ಪಿಸಲು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾಗಿದ್ದಾರೆ ಎಂಬ ಮಾಧ್ಯಮ ವರದಿಗಳನ್ನು ಸಚಿವ ಬಿ.ನಾಗೇಂದ್ರ ಬುಧವಾರ ನಿರಾಕರಿಸಿದರು.

ಯೋಜನೆ ಮತ್ತು ಸಾಂಖ್ಯಿಕ ಸಚಿವ ನಾಗೇಂದ್ರ ಅವರು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರನ್ನು ಭೇಟಿಯಾಗಿ ರಾಜೀನಾಮೆ ನೀಡಲಿದ್ದಾರೆ ಎಂದು ವ್ಯಾಪಕ ಊಹಾಪೋಹ ಹಬ್ಬಿದ್ದವು. ಬುಧವಾರ ಸಂಜೆಯೊಳಗೆ ಸ್ವಯಂ ಪ್ರೇರಿತರಾಗಿ ರಾಜೀನಾಮೆ ನೀಡಲು ಬಯಸುವುದಾಗಿ ನಾಗೇಂದ್ರ ತಿಳಿಸಿದ್ದಾರೆ ಎಂಬ ಮಾತು ಕೇಳಿಬಂದಿದ್ದವು.

ಈ ವರದಿಗಳನ್ನು ತಳ್ಳಿಹಾಕಿದ ನಾಗೇಂದ್ರ ಅವರು, 'ಸದ್ಯ

ಪುಟ 2ಕ್ಕೆ

## ಮತ್ತೊಂದು ವಿಕೆಟ್ ಪತನ?

### ಸಚಿವ ಸ್ಥಾನಕ್ಕೆ ನಾಗೇಂದ್ರ ರಾಜೀನಾಮೆ ಇಂಗಿತ

**ಬೆಂಗಳೂರು:** ವಾಲ್ಮೀಕಿ ನಿಗಮದ ಹಗರಣದಲ್ಲಿ ಆರೋಪಿ ಆಗಿರುವ ನಾಗೇಂದ್ರ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆಗೆ ಇಂಗಿತ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ಈ ಮೂಲಕ ರಾಜ್ಯ ಸರ್ಕಾರದ ಮತ್ತೊಂದು ವಿಕೆಟ್ ಪತನವಾಗುವ ಸಾಧ್ಯತೆ ಇದೆ.

ಸಚಿವ ಬಿ.ನಾಗೇಂದ್ರ ಅವರು ರಾಜೀನಾಮೆ ನೀಡಲು ಮುಂದಾಗಿದ್ದು, ಈ ಕುರಿತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೊತೆ ಚರ್ಚಿಸಿದ್ದಾರೆ ಎನ್ನಲಾಗಿದೆ. ಬಿಜೆಪಿಯವರು ನನ್ನನ್ನು ಅನಗತ್ಯವಾಗಿ ಟಾರ್ಗೆಟ್ ಮಾಡುತ್ತಿದ್ದಾರೆ. ನನ್ನಿಂದ ಪಕ್ಷಕ್ಕೆ ಮುಜುಗರ ಆಗೋದು ಬೇಡ ಎಂದು ನಾಗೇಂದ್ರ ಮುಖ್ಯಮಂತ್ರಿಗಳಿಗೆ ತಿಳಿಸಿದ್ದಾರೆ ಎನ್ನಲಾಗಿದೆ.

ಎಸ್ಐಟಿ ನಾಗೇಂದ್ರ ಅವರಿಗೆ ಕ್ಲೀನ್‌ಚಿಟ್ ನೀಡಿದ್ದರೂ, ಪಕ್ಷಕ್ಕೆ ಮುಜುಗರ ಉಂಟುಮಾಡಲು ತಾನು ಬಯಸುವುದಿಲ್ಲ ಎಂದು ನಾಗೇಂದ್ರ ಅವರು ಮುಖ್ಯಮಂತ್ರಿಗೆ ತಿಳಿಸಿದ್ದಾರೆ ಎನ್ನಲಾಗಿದೆ.

ಸಿಎಂ ಜೊತೆಗೆ 15 ನಿಮಿಷಗಳ ಕಾಲ ಸಚಿವ ನಾಗೇಂದ್ರ ದೂರವಾಣಿ ಸಂಭಾಷಣೆ ನಡೆಸಿದ್ದಾರೆ. ಆದರೆ ಹೈಕಮಾಂಡ್ ಜೊತೆ ಚರ್ಚಿಸಿ ತಿಳಿಸುವುದಾಗಿ ಸಿಎಂ

ಪುಟ 2ಕ್ಕೆ



### ಶಿಸ್ತಿನ ಸಿಪಾಯಿಗಳು: ಡಿಕೆಶಿ

**ಬೆಂಗಳೂರು:** ನಮ್ಮ ಪಕ್ಷದ ಎಲ್ಲಾ ಶಾಸಕರು, ಸಚಿವರು ಶಿಸ್ತಿನ ಸಿಪಾಯಿಗಳು. ಹೈಕಮಾಂಡ್ ನಿರ್ದೇಶನದಂತೆ ಪಕ್ಷದ ಒಳಿತಿಗೆ ಕೆಲಸ ಮಾಡುತ್ತೇವೆ. ಈ ಬಗ್ಗೆ ನಾನು ಹೇಳುವುದಿಷ್ಟೇ ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ತಮ್ಮ ನಿವಾಸದ ಮುಂದೆ ಮಾಧ್ಯಮ ಪ್ರತಿನಿಧಿಗಳಿಗೆ ಬುಧವಾರ ಪ್ರತಿಕ್ರಿಯಿಸಿದರು. ಗುರುವಾರ

ಪುಟ 2ಕ್ಕೆ

## ಕೆಪಿಎಸ್‌ಸಿ ಕರ್ಮಕಾಂಡ ಬಯಲು: ಒಎಂಆರ್ ಹಾರ್ಡ್ ಡಿಸ್ಕ್ ನಾಪತ್ತೆ!

**ಬೆಂಗಳೂರು:** ಕೆಪಿಎಸ್‌ಸಿಯಲ್ಲಿ ಮತ್ತೊಂದು ಕರ್ಮಕಾಂಡ ಬಯಲಾಗಿದೆ. ಒಎಂಆರ್ ಶೀಟ್‌ಗಳ ಸ್ಕ್ಯಾನ್ ಮಾಡಿರುವ ಹಾರ್ಡ್ ಡಿಸ್ಕ್ ನಾಪತ್ತೆಯಾಗಿದೆ.

ನೇಮಕಾತಿ ಹಗರಣ ಪ್ರಕರಣ ಸಂಬಂಧ ಕೆಪಿಎಸ್‌ಸಿ ಮೇಲೆ ಅಧಿಕಾರಿಗಳು ದಾಳಿ ಮಾಡಿದ ವೇಳೆ ಶಾಕಿಂಗ್ ವಿಚಾರ ಬಯಲಾಗಿದೆ. ಕೆಪಿಎಸ್‌ಸಿ ಕೇಂದ್ರ ಕಚೇರಿಯಲ್ಲಿಯೇ ಅತಿ ದೊಡ್ಡ ಅಕ್ರಮ ನಡೆದಿದ್ದು, ಒಎಂಆರ್ ಶೀಟ್‌ಗಳನ್ನು ಸ್ಕ್ಯಾನ್ ಮಾಡಿರುವ ಹಾರ್ಡ್ ಡಿಸ್ಕ್ ನಾಪತ್ತೆಯಾಗಿರುವುದು ಬೆಳಕಿಗೆ ಬಂದಿದೆ.

ಪರೀಕ್ಷೆ ಪ್ರಾರಂಭ ಆಗುವಾಗ ಸ್ಟ್ರಾಂಗ್ ರೂಂ ತೆರೆಯಬೇಕು. ಪ್ರಶ್ನೆ ಪತ್ರಿಕೆ ಒಎಂಆರ್ ಇಡುವಾಗ 24*7 ಸಿಸಿಟಿವಿ ಕಣ್ಗಾವಲು ಇಡಬೇಕು. ಕೆಪಿಎಸ್‌ಸಿ ಸ್ಟ್ರಾಂಗ್ ರೂಂ ಅಲ್ಲಿ ಸಿಸಿ ಟಿವಿ ಇದೆ. ಆದರೆ ಡೇಟಾ ಡಿಲೀಟ್ ಆಗಿದೆ. ಸ್ಟ್ರಾಂಗ್ ರೂಂನ ಸಿಸಿಟಿವಿ ಡೇಟಾ ಸಂಗ್ರಹ ಮಾಡಿ ಇಡಬೇಕು. ಪರೀಕ್ಷೆ ಮುಗಿದ ವರ್ಷದ ತನಕ ಡೇಟಾ ಇಟ್ಟಿರಬೇಕು. ಯಾವುದೇ ಆರೋಪ ಕೇಳಿಬರದೆ ಇದ್ದರೆ ಡೇಟಾ ಡಿಲೀಟ್ ಮಾಡಬಹುದು. ಆದರೆ 6 ತಿಂಗಳ ಡೇಟಾ ಸಂಗ್ರಹ ಕೂಡ ಮಾಡಿ ಇಟ್ಟಿಲ್ಲ.



ಪರೀಕ್ಷೆ ಮುಗಿದ ಮೇಲೆ ಒಎಂಆರ್ ಶೀಟ್ ಸ್ಕ್ಯಾನ್ ಮಾಡಲಾಗುತ್ತದೆ. ಆದರೆ ಪಶುವೈದ್ಯಾಧಿಕಾರಿ ನೇಮಕಾತಿ ಹಾರ್ಡ್ ಡಿಸ್ಕ್ ನಾಪತ್ತೆಯಾಗಿದೆ. ಇದರಿಂದ ಅತೀದೊಡ್ಡ ಅಕ್ರಮ ಕೇಂದ್ರ ಕಚೇರಿಯಲ್ಲಿಯೇ ನಡೆದಿರುವುದು ಸಾಬೀತಾಗಿದೆ. ಪ್ರಶ್ನೆ ಪತ್ರಿಕೆ ಲೀಕ್ ಮತ್ತು ಒಎಂಆರ್ ಟ್ಯಾಂಪರಿಂಗ್ ಆಗಿರೋದು ಸ್ಪಷ್ಟವಾಗಿದೆ ಎಂದು ಪೊಲೀಸರು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

### ಕೌಟುಂಬಿಕ ಕಲಹಕ್ಕೆ ತಾಯಿ, 5 ಮಕ್ಕಳು ಬಲಿ

**ವಿಜಯಪುರ:** ನಗರದ ಭೂತನಾಳ ಕೆರೆಯಲ್ಲಿ 6 ಜನರ ಶವ ಪತ್ತೆಯಾಗಿವೆ. ಕೌಟುಂಬಿಕ ಕಲಹಕ್ಕೆ ಕುಟುಂಬವೇ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ.

ತಾಯಿ ಶೋಭಾ ಜಾಲಗೇರಿ (45), ವಿದ್ಯಾ (16), ಸುವರ್ಣ (14), ಗೌಡೇಶ್ (10), ವಿಕಾಸ (5) ಸಾನಿಕಾ (7) ಮೃತಪಟ್ಟವರು ಎಂದು ಗುರುತಿಸಲಾಗಿದೆ. ಪತಿ ಮಲಕಾರಿ ಜೊತೆ ಶೋಭಾ ಜಗಳವಾಗಿತ್ತು. ಈ ವೇಳೆ ಆತ್ಮಹತ್ಯೆ ಮಾಡಿಕೊಳ್ಳೋದಾಗಿ ಮನೆಯಿಂದ ಹೊರಟಿದ್ದರು. ಆನಂತರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಮಿಸ್ಸಿಂಗ್ ಕೇಸ್ ದಾಖಲಾಗಿತ್ತು. ಬುಧವಾರ ಭೂತನಾಳ ಕೆರೆಯಲ್ಲಿ 6 ಜನರ ಶವ ಪತ್ತೆಯಾಗಿವೆ.

### ಕೆಆರ್‌ಎಸ್ ಒಳಹರಿವು ಹೆಚ್ಚಳ

**ಮೈಸೂರು:** ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆ ಕೆಆರ್‌ಎಸ್ ಜಲಾಶಯಕ್ಕೆ ನೀರಿನ ಒಳಹರಿವಿನಲ್ಲಿ ಭಾರೀ ಏರಿಕೆ ಕಂಡಿದೆ.

ಕಳೆದ 2 ದಿನಗಳಿಂದ ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಉತ್ತಮ ಮಳೆಯಾಗಿದೆ. ಕೆಆರ್‌ಎಸ್ ಜಲಾಶಯದ ಒಳಹರಿವಿನ ಪ್ರಮಾಣ 9,438 ಕ್ಯೂಸೆಕ್‌ಗೆ ಏರಿಕೆ ಆಗಿದೆ.

124.80 ಅಡಿ ಸಾಮರ್ಥ್ಯದ ಕೆಆರ್‌ಎಸ್

ಪುಟ 2ಕ್ಕೆ



### ಸಚಿವ ಸಂಪುಟದಲ್ಲಿ ಚರ್ಚಿಸಿ ಬರ ಘೋಷಣೆ: ಪರಂ

**ಬೆಂಗಳೂರು:** ರಾಜ್ಯದ ಬರ ಪರಿಸ್ಥಿತಿ ಬಗ್ಗೆ ಸಮಗ್ರ ಅವಲೋಕನ ನಡೆಯುತ್ತಿದೆ. 102 ತಾಲೂಕುಗಳ ಗ್ರೌಂಡ್ ಟ್ರೂಥಿಂಗ್ ವರದಿ ಬಂದಿದೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಬರ ಘೋಷಣೆ ಮಾಡುತ್ತೇವೆ ಎಂದು ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು.



ಸದಾಶಿವನಗರದ ಗೃಹಕಚೇರಿ ಬಳಿ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿ, ಕೇಂದ್ರ ಸರ್ಕಾರದ ಮಾನದಂಡ ಗಳಿಗೆ ಅನುಗುಣವಾಗಿ ಬರ ಘೋಷಿಸುತ್ತೇವೆ. ಪ್ರತಿ ವಾರವೂ ಬರ ಪರಿಶೀಲನೆ ನಡೆಸುತ್ತೇವೆ ಎಂದು ಹೇಳಿದರು. ಬರ ಪರಿಸ್ಥಿತಿಯನ್ನು ಅವಲೋಕಿಸಲು ಬಿಜೆಪಿ ಕೂಡ ತಂಡ ಮಾಡಿಕೊಂಡು ಹೋಗಿ ದ್ದರು. ಆದರೆ, ಆ ಬಗ್ಗೆ ಸದನದಲ್ಲಿ ಚರ್ಚೆಯೇ ಮಾಡಿಲ್ಲ. ಮುಖ್ಯಮಂತ್ರಿಯಾಗಲಿ, ಕಂದಾಯ ಸಚಿವನಾದ ನನಗಾಗಲಿ ವರದಿ ನೀಡಿಲ್ಲ. ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ರೈತರಿಗೆ ಬೆಳೆ ನಷ್ಟವಾಗಿದೆ. ವಿರೋಧ ಪಕ್ಷದವರು ಈ ಬಗ್ಗೆ ಚರ್ಚೆ ಗಳನ್ನು ಮಾಡಿ, ಸಲಹೆಗಳನ್ನು ಕೊಡಬೇಕು. ಆ ಕೆಲಸ ಮಾಡುವ ಬದಲು ಸದನದಲ್ಲಿ ಬರೀ ರಾಜಕೀಯ ಮಾಡಿದ್ದಾರೆ ಎಂದರು

### ತರಕಾರಿಗೆ ಕೆಮಿಕಲ್ ಸ್ಪ್ರೇ: ಸಚಿವ ಖಾದರ್ ಎಚ್ಚರಿಕೆ

**ಬೆಂಗಳೂರು:** ಆನ್‌ಲೈನ್‌ನಲ್ಲಿ ಮಾರಾಟ ಮಾಡುವ ತರಕಾರಿಗಳು ತಾಜಾ ಕಾಣಬೇಕು ಅಂತ ಕೆಮಿಕಲ್ ಸ್ಪ್ರೇ ಮಾಡುವ ಬಗ್ಗೆ ದೂರು ಕೇಳಿಬಂದಿದೆ. ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಯು.ಟಿ ಖಾದರ್ ಎಚ್ಚರಿಕೆ ನೀಡಿದರು.

ಬೆಂಗಳೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ

ಪುಟ 2ಕ್ಕೆ




## ಡಿಸಿಎಂ ಅಲ್ಲ, ನನ್ನ ಸಿಎಂ ಸ್ಥಾನಕ್ಕೇ ಸಿದ್ದು ಶಿಫಾರಸು!

### ಏಕೈಕ ಡಿಸಿಎಂ ಮಾಡಿಸಿದ್ದು ಸತ್ಯ: ಉಪಮುಖ್ಯಮಂತ್ರಿ ಪರಮೇಶ್ವರ್ ಬಹಿರಂಗ

**ಬೆಂಗಳೂರು:** ಸಿದ್ದರಾಮಯ್ಯ ನನ್ನ ಹೆಸರನ್ನು ಡಿಸಿಎಂ ಸ್ಥಾನಕ್ಕಷ್ಟೇ ಅಲ್ಲ, ಮುಖ್ಯಮಂತ್ರಿ ಹುದ್ದೆಗೆ ಶಿಫಾರಸು ಮಾಡಿದ್ದರು. ಆದರೆ ಹೈಕಮಾಂಡ್ ಯೋಜನೆ ಬೇರೆಯೇ ಇತ್ತು ಎಂದು ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ್ ಬಹಿರಂಗ ಪಡಿಸಿದರು.

ಬೆಂಗಳೂರಿನಲ್ಲಿ ಬುಧವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಪರಮೇಶ್ವರ್ ಅವರನ್ನು ಉಪಮುಖ್ಯಮಂತ್ರಿ ಮಾಡಿದ್ದು ನಾನು ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದರು.

ನನ್ನನ್ನು ಸಿಎಂ ಹುದ್ದೆಗೆ ಶಿಫಾರಸು ಮಾಡಿದ್ದೆ ಎಂದು ಸಿದ್ದರಾಮಯ್ಯ ಹೇಳಿದ್ದರಲ್ಲಿ ನನಗೆ ಆಶ್ಚರ್ಯವಿಲ್ಲ. ನಾಲ್ಕೈದು ಉಪಮುಖ್ಯ ಮಂತ್ರಿಗಳನ್ನು ಮಾಡುವ ಯೋಜನೆ ಹೈಕಮಾಂಡ್‌ಗೆ ಇತ್ತು. ಆದರೆ ಸಿದ್ದರಾಮಯ್ಯ ಅವರು ಕೇವಲ ಒಬ್ಬರಿಗೆ ಡಿಸಿಎಂ ಹುದ್ದೆ ನೀಡಬೇಕೆಂದು ಹೇಳಿ ನನ್ನ ಹೆಸರನ್ನು ಹೈಕಮಾಂಡ್ ಬಳಿ ಶಿಫಾರಸು ಮಾಡಿದ್ದಾರೆಂದು ತಿಳಿಸಿದ್ದಾರೆ. ಸಿದ್ದರಾಮಯ್ಯ ಮತ್ತು ನಾನು

ಪುಟ 2ಕ್ಕೆ



### ಒಳಮೀಸಲಾತಿ ಮುಗಿದ ಕಥೆ

ಅಸಮಾನತೆ ತೊಲಗಬೇಕಾದರೆ ಮೀಸಲಾತಿ ಮತ್ತು ಒಳಮೀಸಲಾತಿ ಇರಲೇಬೇಕು ಎಂಬ ಸಿದ್ದರಾಮಯ್ಯನವರ ಹೇಳಿಕೆಗೆ ಪ್ರತಿಕ್ರಿಯಿಸಿದ ಡಾ.ಜಿ.ಪರಮೇಶ್ವರ್ ಅವರು, ಒಳಮೀಸಲಾತಿ ಈಗ ಮುಗಿದ ಕಥೆ. ಬಹಳ ವರ್ಷಗಳಿಂದ ನಡೆಯುತ್ತಿದ್ದ ಹೋರಾಟದ ಹಿನ್ನೆಲೆಯಲ್ಲಿ ಒಳಮೀಸಲಾತಿಯನ್ನು ನಮ್ಮ ಸರ್ಕಾರ ಜಾರಿಗೊಳಿಸಿದೆ. ಒಟ್ಟು ಮೀಸಲಾತಿಯ ಪ್ರಮಾಣ ಶೇ 50 ಮೀರಬಾರದು ಎಂದು ಸುಪ್ರೀಂ ಕೋರ್ಟ್ ಆದೇಶ ಇರುವ ಕಾರಣ ಒಳಮೀಸಲಾತಿ ಜಾರಿಯನ್ನು ನ್ಯಾಯಾಲ ಯದಲ್ಲಿ ಪ್ರಶ್ನಿಸಲಾಗಿದೆ. ಈ ಇತಿಮಿತಿ ಯಲ್ಲಿ ಒಳಮೀಸಲಾತಿ ಜಾರಿಗೊಳಿಸಲಾಗಿದೆ ಎಂದು ತಿಳಿಸಿದರು.

## ನಮ್ಮ ಹೋರಾಟ ಹಗುರ ಪರಿಗಣಿಸಬೇಡಿ!

### ರಾಜ್ಯ ಸರ್ಕಾರಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಎಚ್ಚರಿಕೆ

**ಬೆಂಗಳೂರು:** ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಲೂಟಿ ಹಗರಣದ ಆರೋಪಿ, ಸಚಿವ ನಾಗೇಂದ್ರ ಅವರು ತನಿಖೆ ಬಳಿಕ ನಿರಪರಾಧಿ ಎಂದು ಸಾಬೀತಾದರೆ ಅವರನ್ನ ಮುಖ್ಯಮಂತ್ರಿ ಮಾಡಿಕೊಳ್ಳಲಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿಕಾರಿದರು.



ರಾಜ್ಯ ಬಿಜೆಪಿ ಕಚೇರಿಯಲ್ಲಿ ಬುಧವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಇ.ಡಿ ಚಾರ್ಜ್‌ಶೀಟ್‌ನಲ್ಲೂ ನಾಗೇಂದ್ರ ಹೆಸರು ಉಲ್ಲೇಖವಾಗಿದೆ. ಬಿಜೆಪಿ

ಪುಟ 2ಕ್ಕೆ

### ನಾಗೇಂದ್ರ ಸಣ್ಣ ಮೀನು

ವಾಲ್ಮೀಕಿ ಹಗರಣದಲ್ಲಿ ಸಚಿವ ನಾಗೇಂದ್ರ ಬಹಳ ಸಣ್ಣ ಮೀನು. ಬಹಳ ದೊಡ್ಡ ಮೀನುಗಳು, ತಿಮಿಂಗಿಲಗಳು ಇದರ ಹಿಂದಿವೆ. ಇವರೆಲ್ಲರನ್ನೂ ಹೇಗೆ ಬೀದಿಗೆ ತರಬೇಕು? ಹೇಗೆ ಹೋರಾಟ ಮಾಡಬೇಕೆಂಬ ನಿಟ್ಟಿನಲ್ಲಿ ಬಿಜೆಪಿ ಸಿದ್ಧವಾಗಿದೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಎಂದು ಹೇಳಿದರು. ಧ್ವನಿ ಇಲ್ಲದ ದಲಿತರ ಪರವಾಗಿ ಎಲ್ಲಿಯವರೆಗೂ ಅಗತ್ಯವೋ ಅಲ್ಲಿನವರೆಗೆ ಹೋರಾಟ ಮಾಡಲಿದ್ದೇವೆ. ಆ ಸಮುದಾಯಕ್ಕೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಬಿಜೆಪಿ ಕಟಿಬದ್ಧವಾಗಿದೆ. ಬಿಜೆಪಿ, ಸತ್ಯ ಬಿಚ್ಚಿಡುವ ಕೆಲಸ ಮಾಡಲಿದೆ ಎಂದರು.

# ಕಾಲಕ್ಕೆ ತಕ್ಕಂತೆ ಕೌಶಲ್ಯ ವೃದ್ಧಿಸಿಕೊಳ್ಳಿ: ಕೆ.ದೀಪಕ್ ಕರೆ




ಮೈಸೂರು: ಇಂದಿನ ಮೊಬೈಲ್ ಯುಗದಲ್ಲಿ ವೃತ್ತಿಪರ ಫೋಟೋಗ್ರಫರ್‌ಗಳು ಮತ್ತು ವಿಡಿಯೋಗ್ರಫರ್‌ಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದು ದೊಡ್ಡ ಸವಾಲಾಗಿದ್ದು, ಬದಲಾಗುತ್ತಿರುವ ತಂತ್ರಜ್ಞಾನಕ್ಕೆ ಅನುಗುಣವಾಗಿ ತಮ್ಮ ಕೌಶಲ್ಯವನ್ನು ವೃದ್ಧಿಸಿಕೊಳ್ಳಬೇಕೆಂದು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಕಿವಿಮಾತು ಹೇಳಿದರು.

187ನೇ ವಿಶ್ವ ಛಾಯಾಗ್ರಾಹಣ ದಿನಾಚರಣೆಯ ಅಂಗವಾಗಿ ನಗರದ ಚಿಕ್ಕಮ್ಮ ಅನಿಕೇತನ ಕಲ್ಯಾಣ ಮಂಟಪದಲ್ಲಿಂದು ಮೈಸೂರು ಜಿಲ್ಲಾ ಫೋಟೋಗ್ರಫರ್ಸ್ ಮತ್ತು ವಿಡಿಯೋಗ್ರಫರ್ಸ್ ಅಸೋಸಿಯೇಷನ್ ಆಯೋಜಿಸಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಫೋಟೋಗ್ರಫಿ ಮನುಷ್ಯನಲ್ಲಿ ಸೌಂದರ್ಯ ಪ್ರಜ್ಞೆ ಮತ್ತು ಶಿಸ್ತನ್ನು ವೃದ್ಧಿಸುವುದರ ಜೊತೆಗೆ ಇತಿಹಾಸದ ಮಹತ್ವ ದಾಖಲೆಗಳಾಗುವುದರಿಂದ ಛಾಯಾಗ್ರಹಣ ವೃತ್ತಿಗೆ ಅದರದೇ ಮಹತ್ವವಿರುತ್ತದೆ. ಆದರೆ, ಇಂದಿನ ಮೊಬೈಲ್ ಯುಗದಲ್ಲಿ ಪ್ರತಿಯೊಬ್ಬರೂ ಫೋಟೋಗ್ರಫ ರ್‌ಗಳಾಗಿದ್ದಾರೆ. ಇಂತಹ ಸಂದರ್ಭದಲ್ಲಿ ವೃತ್ತಿಪರ ಫೋಟೋಗ್ರಫರ್‌ಗಳು ವೇಗವಾಗಿ ಬದಲಾಗುತ್ತಿರುವ ತಂತ್ರಜ್ಞಾನಕ್ಕೆ ಅನುಗುಣವಾಗಿ ಕಾಲಕಾಲಕ್ಕೆ ಕೌಲಶ್ಯ ಮತ್ತು ಜ್ಞಾನವನ್ನು ಹೆಚ್ಚಿಸಿಕೊಳ್ಳುವುದು ಅನಿವಾರ್ಯವಾಗಿದೆ ಎಂದು ತಿಳಿಸಿದರು.

ಫೋಟೋಗ್ರಫಿ ಮತ್ತು ವಿಡಿಯೋಗ್ರಫಿಯು ಮಾಧ್ಯಮದ ಅವಿಭಾಜ್ಯ ಅಂಗವಾಗಿದೆ. ಎಂತಹ ವ್ಯಕ್ತಿಯನ್ನಾದರೂ ತನ್ನತ್ತ ತಿರುಗಿ ನೋಡುವಂತೆ ಮಾಡುವ ಶಕ್ತಿ ಛಾಯಾಗ್ರಹಣಕ್ಕೆ ಇದೆ. ಇಂದು ನೀವು ಕ್ಲಿಕ್ಕಿಸುವ ಪ್ರತಿಯೊಂದು ಚಿತ್ರಗಳೂ ಮುಂದೆ ಇತಿಹಾಸದ ಮಹತ್ವದ ದಾಖಲೆಗಳಾಗಿ ಹಾಗೂ ಮಧುರ ನೆನಪುಗಳಾಗಿ ಉಳಿದುಕೊಳ್ಳುವುದರಿಂದ ನಿಮ್ಮ ವೃತ್ತಿಯನ್ನು ಹೆಚ್ಚು ಪ್ರೀತಿಸಬೇಕೆಂದರು. ನಂತರ ಸೋನಿ ಕ್ಯಾಮರಾ ಕಾರ್ಯಾಗಾರವನ್ನು ಹಮ್ಮಿಕೊಳ್ಳಾಗಿತ್ತು. ಪ್ರಸ್ತುತ ಮಾರುಕಟ್ಟೆಗೆ ಬಂದಿರುವ ಹೊಸ ಮಾಡಲ್ ಕ್ಯಾಮರಾಗಳನ್ನು ಬಳಸುವ ವಿಧಾನ ಕುರಿತು ತರಬೇತಿ ನೀಡಲಾಯಿತು. ಹಾಗೂ ಕ್ಯಾಮರಾ ಮೆನ್ನಗಳಿಗೆ ಕಣ್ಣಿನ ತಪಾಸಣೆ ಮತ್ತು ಕ್ಯಾಮರಾ ಮಾಡಲ್ಗಳ ಪ್ರದರ್ಶನವನ್ನೂ ಆಯೋಜಿಸಲಾಗಿತ್ತು. ಜಿಲ್ಲೆ ಹಲವು ಭಾಗಗಳಿಂದ ವೃತ್ತಿಪರ ಛಾಯಾಗ್ರಾಹಕರು ಮತ್ತು ಫೋಟೋಗ್ರಫರ್‌ಗಳು ಭಾಗವಹಿಸಿದ್ದರು. ಸಂಜೆ ಸಮಾರಂಭದಲ್ಲಿ ಹಿರಿಯ ಫೋಟೋಗ್ರಫರ್‌ಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಮೈಸೂರು ಡಿಸ್ಟ್ರಿಕ್ಟ್ ಫೋಟೋಗ್ರಾಫರ್ಸ್ ಮತ್ತು ವಿಡಿಯೋಗ್ರಾಫರ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ. ವಿಜಯ್, ಉಪಾಧ್ಯಕ್ಷ ರಾಜಗೋಪಲ್, ಕಾರ್ಯದರ್ಶಿ ಧನಂಜಯ್, ಸಹ ಕಾರ್ಯದರ್ಶಿ ಉಮಾಶಂಕರ್, ಖಜಾಂಚಿ ಉಮೇಶ್, ಪಿಆರ್‌ಓ ಸಿದ್ದಲಿಂಗ ಪ್ರಸಾದ್, ನಿರ್ದೇಶಕರುಗಳಾದ ಮೋಹನ್, ಲೋಕೇಶ್, ಮಂಜುನಾಥ್ (ಕುಪ್ಪಣ್ಣ0, ಮಂಜುನಾಥ್ (ಬೆಳಕು), ವರ್ಗಿಸ್, ನಾಗರಾಜ್ ನಾಯ್ಡು, ನಾರಾಯಣಸ್ವಾಮಿ ಉಪಸ್ಥಿತರಿದ್ದರು.

# ಭಾವೈಕ್ಯತೆಯ ಈದ್ ಮಿಲಾದ್ ಆಚರಣೆ



ಮೈಸೂರು: ಮುಸ್ಲಿಂ ಸಮುದಾಯಕ್ಕೆ ಈದ್ ಮಿಲದ್ ಸಂಭ್ರಮವಾಗಿದ್ದು, ಈ ಅಂಗವಾಗಿ ಮಯೂರ ಕನ್ನಡ ಯುವಕರ ಬಳಗದವತಿಯಿಂದ ನಗರದ ಜೆಎಲ್ ಬಿ ರಸ್ತೆಯಲ್ಲಿರುವ ಚಾಮುಂಡೇಶ್ವರಿ ಅತಿಥಿ ಗೃಹದಲ್ಲಿ ಸೌಹಾರ್ದತೆ ಮತ್ತು ಭಾವೈಕ್ಯತೆಯ ಕಾರ್ಯಕ್ರಮ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಹಿಂದೂ ಹಾಗೂ ಮುಸ್ಲಿಂ ಬಾಂಧವರು ಒಟ್ಟಾಗಿ ವಿವಿಧ ಜಾತಿಯ ಗಿಡಗಳನ್ನು ನೆಟ್ಟು ಪರಿಸರ ಸಂರಕ್ಷಣೆಯ ಸಂದೇಶ ಸಾರಿದರು. ಬಳಿಕ ಪರಸ್ಪರ ಸಿಹಿ ಹಂಚಿಕೊಂಡು ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಹಿಂದೂ ಬಾಂಧವರು ಮುಸ್ಲಿಂ ಸಮುದಾಯದವರಿಗೆ ಈದ್ ಮಿಲಾದ್ ಹಬ್ಬದ ಶುಭಾಶಯ ಕೋರಿ, ಸೌಹಾರ್ದತೆ, ಸಹಬಾಳ್ವೆ ಹಾಗೂ ರಾಷ್ಟ್ರೀಯ ಏಕತೆಯ ಮಹತ್ವ ಪ್ರತಿಪಾದಿಸಿದರು. ಕಾರ್ಯಕ್ರಮದಲ್ಲಿ ಎರಡೂ ಸಮುದಾಯಗಳ ಮುಖಂಡರು, ಯುವಕರು ಹಾಗೂ ಸಾರ್ವಜನಿಕರು ಪಾಲ್ಗೊಂಡು ಭಾವೈಕ್ಯತೆಯ ಸಂದೇಶ ಸಾರಿದರು.

ಇದೇ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ನಜರ್ಬಾದ್ ನಟರಾಜ್, ಜಿ.ರಾಘವೇಂದ್ರ, ಉತ್ತನಹಳ್ಳಿ ಶಿವಣ್ಣ, ಕನಕ ಪತ್ತಿನ ಸಹಕಾರ ಸಂಘದ ನಿರ್ದೇಶಕ ರವಿಚಂದ್ರ, ದಿನೇಶ್, ಎಸ್.ಎನ್.ರಾಜೇಶ್, ಯತೀಂದ್ರ, ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಮೈನಾರಿಟಿ ಅಧ್ಯಕ್ಷ ಆರಿಫ್ ಪಾಷಾ, ಗುಲ್ಶನ್ ಪಾಷಾ, ಶಾಹಿದ್, ಮಹಮ್ಮದ್ ವಾಸಿಮ್, ಮಹಮ್ಮದ್ ಯೂನಿಸ್, ಮೊಹಮ್ಮದ್ ಜನ್ನೀದ್, ಪರ್ಕನ್, ಅಲ್ತಾಫ್, ಅಫ್ರೋಜ್, ಶಭಾಷ್ ಇನ್ನಿತರರು ಉಪಸ್ಥಿತರಿದ್ದರು.

ಮೊದಲ ಪುಟದಿಂದ

## ನಾಳೆ ಅರಮನೆಗೆ ಪ್ರವೇಶ

ದಿನದಿಂದ ಹಿಡಿದು ದಸರಾ ಮಹೋತ್ಸವದ ವಿಜಯದಶಮಿ ಜಂಬೂಸವಾರಿ ಮೆರವಣಿಗೆ ಸಂಪೂರ್ಣಗೊಳ್ಳುವವರೆಗೆ ಗಜಪಡೆ ಅರಮನೆ ಆವರಣದಲ್ಲೇ ಉಳಿದುಕೊಳ್ಳಲಿವೆ. ಅಲ್ಲಿಯೇ ಅವುಗಳಿಗೆ ತಾಲೀಮು, ತೂಕ ಪರೀಕ್ಷೆ ಮತ್ತು ವಿಶೇಷ ಪೌಷ್ಟಿಕ ಆಹಾರೋಪಚಾರಗಳನ್ನು ನೀಡಲಾಗುತ್ತದೆ.

## ಶಿಸ್ತಿನ ಸಿಪಾಯಿಗಳು: ಡಿಕೆಶಿ

ಸಿಎಂ ಡಿ.ಕೆ ಶಿವಕುಮಾರ್ ದೆಹಲಿಗೆ ಹೋಗಿ ಹೈಕಮಾಂಡ್ ಜೊತೆ ಮಹತ್ವದ ಚರ್ಚೆ ನಡೆಸಲಿದ್ದಾರೆ ಎನ್ನಲಾಗಿದೆ.

## ಡಿಸಿಎಂ ಅಲ್ಲ, ನನ್ನ ಸಿಎಂ ಸ್ಥಾನಕ್ಕೇ ಸಿದ್ದು ಶಿಫಾರಸು!

ಹಲವು ವರ್ಷಗಳಿಂದ ಒಟ್ಟಿಗೆ ಕೆಲಸ ಮಾಡುತ್ತಿದ್ದೇವೆ. ನಾನು 8 ವರ್ಷಗಳ ಕಾಲ ಪಿಸಿಸಿ ಅಧ್ಯಕ್ಷನಾಗಿದ್ದೆ. ನಾವು ಒಟ್ಟಿಗೆ ಕೆಲಸ ಮಾಡಿದ್ದೇವೆ. ನಂತರ ನಾನು 2015ರಲ್ಲಿ ಗೃಹ ಸಚಿವರಾಗಿ ಅವರ ಸಂಪುಟಕ್ಕೆ ಸೇರಿದೆ. 2023ರಲ್ಲಿ ನಾನು ಅವರ ಮಂತ್ರಿ ಮಂಡಲ ಸೇರಿದೆ. ನಾವು ಒಟ್ಟಿಗೆ ಕೆಲಸ ಮಾಡಿದ್ದೇವೆ. ಅವರಿಗೆ ನನ್ನ ಬಗ್ಗೆ ಚೆನ್ನಾಗಿ ತಿಳಿದಿದೆ ಎಂದು ಪರಮೇಶ್ವರ್ ಹೇಳಿದರು.

ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುವ ವೇಳೆ ಪರಮೇಶ್ವರ್ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎಂದು ಹೇಳಿದ್ದರು. ಅದನ್ನು ಹೈಕಮಾಂಡ್ ಪರಿಗಣನೆಗೆ ತೆಗೆದುಕೊಂಡಿಲ್ಲ. ಉಪ ಮುಖ್ಯಮಂತ್ರಿಯಾಗಿ ನನ್ನನ್ನು ಮಾಡಬೇಕು ಎಂದೂ ಅವರು ಹೇಳಿದ್ದಾರೆ. ಹಾಗಾಗಿ ಸಿದ್ದರಾಮಯ್ಯನವರು ಹೇಳಿರುವುದು ಸತ್ಯ ಎಂದರು. ನಾಗೇಂದ್ರ ಅವರ ರಾಜೀನಾಮೆ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಇಂದು ಅಥವಾ ನಾಳೆ ಮುಖ್ಯಮಂತ್ರಿ ಡಿಕೆಶಿ ದೆಹಲಿಗೆ ಹೋಗುತ್ತಾರೆ. ಹೈಕಮಾಂಡ್ ಭೇಟಿಯಾದರೆ ಅಲ್ಲಿ ಈ ಬಗ್ಗೆ ಚರ್ಚೆ ನಡೆಯಬಹುದು. ಸಂಪುಟ ಪುನರ್ ರಚನೆ ಊಹಾಪೋಹವಷ್ಟೇ. ಹೈಕಮಾಂಡ್ ತೀರ್ಮಾನದಂತೆ ಆಗುತ್ತದೆ ಎಂದು ತಿಳಿಸಿದರು.

ಯಾವ ಚಾರ್ಜ್‌ಶೀಟ್‌ನಲ್ಲೂ ನಾಗೇಂದ್ರ ಹೆಸರು ಇಲ್ಲ. ನಾನು ಗೃಹಸಚಿವನಾಗಿದ್ದವನು. ನನಗೆ ಮಾಹಿತಿ ಇದೆ. ಸಿಬಿಐ ತನಿಖೆ ಮಾಡುವ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ ತೀರ್ಮಾನ ಆಗುತ್ತದೆ. ಈ ವಿಚಾರದಲ್ಲಿ ಬಿಜೆಪಿ ಪಾದಯಾತ್ರೆ ಮಾಡುತ್ತಿರುವುದು ರಾಜಕೀಯವಷ್ಟೇ. ಸದನದಲ್ಲೂ ಪ್ರಶ್ನೆಗಳನ್ನು ಕೇಳಿ ಉತ್ತರಿಸಲು ನಾವು ಸಮರ್ಥರಿದ್ದೇವೆ ಎಂದು ಹೇಳಿದ್ದೆವು. ಆದರೆ ಈಗ ಪ್ರತಿಭಟನೆ ಮಾಡುತ್ತಿದ್ದಾರೆ ಎಂದು ಪ್ರತಿಕ್ರಿಯಿಸಿದರು.

## ಬೀಳ್ಕೊಡುಗೆ

300ಕ್ಕೂ ಹೆಚ್ಚು ಪುಂಡಾನೆಗಳನ್ನು ಹಿಡಿಯುವ ಹಾಗೂ 80ಕ್ಕೂ ಹೆಚ್ಚು ಹುಲಿ ಸೆರೆಹಿಡಿಯುವ ಅಪಾಯಕಾರಿ ಕಾರ್ಯಾಚರಣೆಗಳಲ್ಲಿ 'ಕಾಂಬಿಂಗ್ ಸ್ಪೆಷ ಆಗಿ ನಿಸ್ಸೀಮ ಸೇವೆ ಸಲ್ಲಿಸಿದ್ದಾನೆ.

## ಹಗುರ ಪರಿಗಣಿಸಬೇಡಿ!

ಎತ್ತಿದ ಪ್ರಶ್ನೆ ಗಂಭೀರವಾಗಿದೆ. ದಲಿತರ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಕಾಂಗ್ರೆಸ್ಸಿನವರು ಕೊಳ್ಳೆ ಹೊಡೆದಿದ್ದಾರೆ. ಯಾವುದೇ ಕಾರಣಕ್ಕೂ ಇಂಥ ಭ್ರಷ್ಟರನ್ನು ಮುಂದುವರೆಸಬಾರದು. ಸಚಿವ ಸ್ಥಾನದಿಂದ ತಕ್ಷಣ ಅವರನ್ನು ಕೈಬಿಡಿ ಎಂದು ಒತ್ತಾಯಿಸಿದರು. ಕೆಪಿಎಸ್ಸಿ ಹಗರಣದ ಕುರಿತು ಅಧಿವೇಶನದಲ್ಲಿ ಚರ್ಚೆ ಆಗಬೇಕಿದೆ. ನಾಗೇಂದ್ರ ರಾಜೀನಾಮೆ ಪಡೆಯಿರಿ ಎಂದು ಒತ್ತಾಯಿಸಿದರೆ ಭಂಡತನದಿಂದ ಮೆರೆಯುತ್ತಿದ್ದಾರೆ. ಅಧಿಕಾರದ ಮದದಿಂದ ಕಾಂಗ್ರೆಸ್ ಸರ್ಕಾರ ನಡೆದುಕೊಳ್ಳುತ್ತಿದೆ. ಈ ಮದವನ್ನು ಇಳಿಸುವ ಶಕ್ತಿ ಬಿಜೆಪಿಗೆ ಇದೆ ಎಂದು ಎಚ್ಚರಿಸಿದರು. ನಮ್ಮ ಹೋರಾಟವನ್ನು ಹಗುರವಾಗಿ ತೆಗೆದುಕೊಳ್ಳದಿರಿ. ಸದನದಲ್ಲಿ ಹೋರಾಟ ಮಾಡುತ್ತಿದ್ದರೆ ನಮಗೆ ಗೂಂಡಾಗಳೆಂದು ಹೇಳಿದ್ದಾರೆ. ದಲಿತರ ಪರವಾಗಿ ಧ್ವನಿ ಎತ್ತಿದ ಬಿಜೆಪಿ– ಜೆಡಿಎಸ್ ನವರನ್ನು ಗೂಂಡಾಗಳೆಂದು ಹೇಳುತ್ತೀರಾ ಎಂದು ಪ್ರಶ್ನಿಸಿದರು. 187 ಕೋಟಿ ಹಣ ಲೂಟಿ ಆಗಿದೆ. ದಲಿತರಿಗೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಆ ಹಣ ವಾಪಸ್ ಬರಬೇಕು. ಆ ಸಮುದಾಯದ ಅಭಿವೃದ್ಧಿಗೆ ಹಣ ಬಳಕೆ ಆಗಬೇಕು ಎಂದು ತಿಳಿಸಿದರು. ನಮ್ಮ ಉದ್ದೇಶ ನಾಗೇಂದ್ರ ತೇಜೋವಧೆ ಮಾಡುವುದಲ್ಲ. ದಲಿತ ಸಮುದಾಯಕ್ಕೆ ನ್ಯಾಯ ಕೊಡಿಸುವುದೇ ಉದ್ದೇಶ ಎಂದು ಸ್ಪಷ್ಟಪಡಿಸಿದರು.

## ಕೆಆರ್‌ಎಸ್ ಒಳಹರಿವು ಹೆಚ್ಚಳ

ಡ್ಯಾಂನಲ್ಲಿ 108.63 ಅಡಿ ನೀರು ಭರ್ತಿಯಾಗಿದೆ. ಸದ್ಯಕ್ಕೆ 30.367 ಟಿಎಂಸಿ ನೀರಿದೆ. ಡ್ಯಾಂ ನಿಂದ 4,478 ಕ್ಯೂಸೆಕ್ ನೀರು ಹರಿಸಲಾಗುತ್ತಿದೆ. ಇದೇ ರೀತಿ ಒಳಹರಿವು ಹೆಚ್ಚಾದರೆ ಶೀಘ್ರದಲ್ಲೇ ಡ್ಯಾಂ ಭರ್ತಿಯಾಗುವ ಸಾಧ್ಯತೆಯಿದೆ.

## ಸಚಿವ ಖಾದರ್ ಎಚ್ಚರಿಕೆ

ಅವರು, ದೊಡ್ಡ ದೊಡ್ಡ ಸೂಪರ್ ಮಾರ್ಕೆಟ್ ಮಾಲ್ ಕಂಪನಿಗಳಲ್ಲಿ ತರಕಾರಿ ಹಾಳಗಾದಂತೆ ಕಲರ್ ಕಲರ್ ಲೈಟ್ ಹಾಕಿ ತರಕಾರಿ ಹೊಳೆಯುವ ಹಾಗೆ ಇಡ್ತಾರೆ. ಜನ ಮರುಳಾಗಿ ತೆಗೆದುಕೊಳ್ತಾರೆ. ತರಕಾರಿ ತಾಜಾ ಕಾಣಬೇಕು ಅಂತ ಸ್ಪ್ರೇ ಮಾಡುವ ಬಗ್ಗೆ ಪರಿಶೀಲನೆ ಮಾಡ್ತಿದ್ದೇವೆ ಎಂದು ತಿಳಿಸಿದರು.

## ಗಜಪಯಣಕ್ಕೆ ವಿದ್ಯುಕ್ತ ಚಾಲನೆ

ಕಂಡು ಬಂದಿತು. ಗಜಪಯಣದ ವೀರನಹೊಸಹಳ್ಳಿಯಲ್ಲಿ ಇಡೀ ತಾಲ್ಲೂಕಿನ ಜನತೆ ಸೇರಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಅಲ್ಲದೆ, ವೇದಿಕೆ ಕಾರ್ಯಕ್ರಮದ ಸುತ್ತಾ ಜಾತ್ರೆ ಸಡಗರ ಹೆಚ್ಚಿಸುವ ಮೂಲಕ ದಸರೆ ಸಂಭ್ರಮ ಇಮ್ಮಡಿಗೊಳಿಸಿದ್ದು ವಿಶೇಷ

## ಸಚಿವ ನಾಗೇಂದ್ರ ನಿರಾಕರಣೆ

ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವ ವರದಿಗಳು ಸಂಪೂರ್ಣವಾಗಿ ಸತ್ಯಕ್ಕೆ ದೂರವಾಗಿವೆ. ಮುಖ್ಯಮಂತ್ರಿ ಕಚೇರಿಯಿಂದ ನನಗೆ ಯಾವುದೇ ಕರೆ ಬಂದಿಲ್ಲ. ರಾಜೀನಾಮೆಗೆ ಸಂಬಂಧಿಸಿದಂತೆ ಯಾವುದೇ ಚರ್ಚೆ ನಡೆದಿಲ್ಲ ಎಂದು ಹೇಳಿದ್ದಾರೆಂದು ಅವರ ಕಚೇರಿ ಹೇಳಿಕೆ ತಿಳಿಸಿದೆ.

## ಮತ್ತೊಂದು ವಿಕೆಟ್ ಪತನ?

ಡಿಕೆ ಶಿವಕುಮಾರ್ ತಿಳಿಸಿದ್ದಾರೆ, ಹೈಕಮಾಂಡ್‌ನೊಂದಿಗೆ ಚರ್ಚಿಸುವವರೆಗೆ ಯಾವುದೇ ನಿರ್ಧಾರ ಕೈಗೊಳ್ಳದಂತೆ ಮುಖ್ಯಮಂತ್ರಿಗಳು ನಾಗೇಂದ್ರ ಅವರಿಗೆ ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

# ತನ್ವೀರ್ ಸೇಠ್ ಬಗ್ಗೆ ಮಾತನಾಡುವ ಯೋಗ್ಯತೆ ನಿನಗಿಲ್ಲ: ಎನ್.ಕೆ.ಫರೀದ್



ಮೈಸೂರು: ತಂದೆ ಮೂರು ಬಾರಿ ಹಾಗೂ ಸ್ವತಃ ತನ್ವೀರ್ ಸೇಠ್ ಮೂರು ಬಾರಿ ಸೇರಿ ಆರು ಬಾರಿಯಿಂದಲೂ ನರಸಿಂಹರಾಜ ಕ್ಷೇತ್ರದ ಜನಸೇವೆಯಲ್ಲಿ ತೊಡಗಿಸಿಕೊಂಡಿರುವ ಶಾಸಕ ತನ್ವೀರ್ ಸೇಠ್ ಅವರ ಕುರಿತು ಮಾತನಾಡುವ ಯೋಗ್ಯತೆ ಪುನೀತ್ ಕೆರೆಹಳ್ಳಿಗೆ ಇಲ್ಲ ಎಂದು ಸಮಾಜ ಸೇವಕ ಎನ್.ಕೆ.ಫರೀದ್ ತಿಳಿಸಿದರು.

ಮೈಸೂರಿನಲ್ಲಿ ಪುನೀತ್ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, ಮೈಸೂರಿನಲ್ಲಿ ಅತಿಹೆಚ್ಚು ಹಿಂದೂಗಳ ಮತಗಳಿಂದಲೇ ಶಾಸಕ ತನ್ವೀರ್ ಸೇಠ್ ಅವರು ಗೆಲುವು ಸಾಧಿಸುತ್ತಿದ್ದಾರೆ. ಆದರೆ, ಯಾವ ಕಾರಣಕ್ಕೆ ನೀವು ಮೈಸೂರಿಗೆ ಬಂದೂ ಶಾಸಕರ ಮೇಲೆ ಈ ರೀತಿ ಹೇಳಿಕೆ ನೀಡಿದ್ದೀರಿ ಎಂಬುದನ್ನು ನೀವೇ ಸ್ಪಷ್ಟಪಡಿಸಬೇಕು. ಅಲ್ಲದೆ, ನಿಮ್ಮೊಟ್ಟಿಗೆ ಪೊಲೀಸರು ಮಾತನಾಡಿದ್ದಾರೆಂದು ನೀವು ಹೇಳಿಕೊಂಡಿದ್ದೀರಿ. ಆ ಪೊಲೀಸ್ ಯಾರೆಂಬುದನ್ನು ಸ್ಪಷ್ಟಪಡಿಸಬೇಕು. ಅಲ್ಲದೆ, ಅಂತಹ ಸಮಸ್ಯೆ ಏನೆಂಬುದನ್ನು ಹೇಳಬೇಕು. ನರಸಿಂಹರಾಜ ಕ್ಷೇತ್ರದಲ್ಲಿ ಧರ್ಮಾತೀತ ರಾಜಕಾರಣಕ್ಕೆ ಶಾಸಕರು ಹೆಸರುವಾಗಿ ಆಗಿದ್ದಾರೆ. ಇದಾವುದರ ಅರಿವಿಲ್ಲದ ನೀನೂ ಇನ್ನೂ ಬಾಲಕ ಹೀಗಾಗಿ ಸಮಾಜದಲ್ಲಿ ಕಂದಕ ತರುವ ಕೆಲಸ ಬೇಡ ಎಂದರು.

ಕ್ಷೇತ್ರದಲ್ಲಿ ಶಾಸಕ ತನ್ವೀರ್ ಸೇಠ್ ಅವರು ಹಿಂದೂ ಧರ್ಮಕ್ಕೆ ನೀಡಿರುವ ಗೌರವದ ಬಗ್ಗೆ ಅರಿತು ಮಾತನಾಡುವ ಕೆಲಸವನ್ನು ಮೊದಲು ಮಾಡಬೇಕಿದೆ. ಅದನ್ನು ಅರಿಯದೇ ಇಂತಹ ಮಾತುಗಳನ್ನು ಆಡುವ ಕೆಲಸವನ್ನು ಕೇವಲ ಪ್ರಚಾರದ ಗೀಳಿಗೆ ಮಾಡುವುದು ಸರಿಯಲ್ಲ. ಇಂತಹ ಹೇಳಿಕೆಯಿಂದ ನಿನ್ನ ಯೋಗ್ಯತೆ ಏನೂ ಎಂಬುದು ತಿಳಿಯುತ್ತದೆಯೇ ಹೊರತು ಶಾಸಕರಿಗೆ ಏನೂ ಆಗುವುದಿಲ್ಲ. ಮುಂದಿನ ದಿನಗಳಲ್ಲಿಯೂ ಇಂತಹ ಹೇಳಿಕೆ ಮುಂದುವರೆಸಿದರೆ ಅದಕ್ಕೆ ತಕ್ಕ ಉತ್ತರ ನೀಡುವ ಕೆಲಸವನ್ನು ನಾವೇ ಮಾಡುತ್ತೇವೆ ಎಂದು ಹೇಳಿದರು. ಕಾಂಗ್ರೆಸ್ ಮುಖಂಡರಾದ ಅಬ್ದುಲ್ ಗಫೂರ್, ಮುಹಮ್ಮದ್ ಅಮೀನ್, ಸಮಾಜ ಸೇವಕ ಸುಹೇಲ್ ಪಾಷ ಜತೆಗಿದ್ದರು.

# ರೂಪಗೆ ಪಿಎಚ್‌ಡಿ ಪ್ರದಾನ



ಮೈಸೂರು: ಡಾ. ಛಾಯಾ ಆರ್ ಅವರ ಮಾರ್ಗದರ್ಶನದಲ್ಲಿ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಸಂಶೋಧನೆ ನಡೆಸಿದ ಬೆಂಗಳೂರು ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರೂಪ ಡಿ. ಸಾದರಪಡಿಸಿದ ಚಾಲೆಂಜಸ್ ಅಂಡ್ ಆಪರ್ಚುನಿಟಿಸ್ಸ್ ಆಫ್‌ಎಂ.ಎಸ್.ಎಂ.ಇ . ಇನ್ ದಿ ಆಟೋಮೊಬೈಲ್ ಸೆಕ್ಟರ್: ಎ ಸ್ಟಡಿಇನ್ ಬೆಂಗಳೂರು ಎಂಬ ಮಹಾ ಪ್ರಬಂಧಕ್ಕೆ ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾನಿಲಯ ಪಿ.ಎಚ್.ಡಿ ಪದವಿ ನೀಡಿ ಗೌರವಿಸಿದೆ.

# ದೇಶವ್ಯಾಪಿ ಶುದ್ಧೀಕರಣ ಮಾಡಿ: ಎನ್.ಭಾಸ್ಕರ್



ಮೈಸೂರು: ಉತ್ತರಾಖಂಡದ ಹಲ್ದಾನಿಯಲ್ಲಿ ಎಐಸಿಸಿ ಅಧ್ಯಕ್ಷರಾದ ಹಿರಿಯ ರಾಜಕಾರಣಿ ಮಲ್ಲಿಕಾರ್ಜುನ ಖರ್ಗೆಯವರು ಪಾಲ್ಗೊಂಡಿದ್ದ ಸ್ಥಳವನ್ನು ಶುದ್ಧೀಕರಣ ಮಾಡಿರುವುದನ್ನು ಖಂಡಿಸಿರುವ ಕೆಪಿಸಿಸಿ ಸಂಯೋಜಕ ಎನ್. ಭಾಸ್ಕರ್, ದೇಶವ್ಯಾಪಿ ಶುದ್ಧೀಕರಣ ಮಾಡುವಂತೆ ಒತ್ತಾಯಿಸಿದರು.

ಭಾರತದ ಬಹುಸಂಖ್ಯಾತರು ಅಸ್ಪೃಶ್ಯರು. ಯಾವುದೇ ಒಂದು ಪ್ರದೇಶಕ್ಕೆ ಸೀಮಿತವಾಗದೇ ಎಲ್ಲೆಡೆ ನೆಲೆಸಿದ್ದಾರೆ. ಅವರು ನೆಲೆಸಿರುವ ಕಡೆಗಳೆಲ್ಲ ಶುದ್ಧೀಕರಣ ಮಾಡುವ ಸವಾಲನ್ನು ಸನಾತನವಾದಿಗಳು, ಹಿಂದುತ್ವ ಸಂಘಟನೆಗಳ ಕಾರ್ಯಕರ್ತರು ಸ್ವೀಕರಿಸಬೇಕು. 21ನೇ ಶತಮಾನದಲ್ಲಿ ವೈಜ್ಞಾನಿಕವಾಗಿ ತಾಂತ್ರಿಕವಾಗಿ ಮುಂದುವರೆದಿದ್ದರೂ ಈ ಸನಾತನವಾದಿಗಳು ಮನುಸ್ಮತಿ ಕಾಲದಲ್ಲಿಯೇ ಇದ್ದಾರೆ. ಶುದ್ಧೀಕರಣ ಮತ್ತು ಮಡಿವಂತಿಕೆಯ ರೋಗದಿಂದ ಅವರೆಲ್ಲ ಬಳಲುತ್ತಿದ್ದಾರೆ. ರಾಷ್ಟ್ರ ರಾಜಕಾರಣಿ ಮಲ್ಲಿಕಾರ್ಜುನ ಖರ್ಗೆಯವರು ಪಾಲ್ಗೊಂಡ ಸ್ಥಳವನ್ನು ಶುದ್ಧೀಕರಿಸುವ ಮನಸ್ಸುಗಳಿಗೆ ತಕ್ಕ ಶಿಕ್ಷೆ ವಿಧಿಸಬೇಕು. ಶುದ್ಧೀಕರಣದ ಮನಸ್ಥಿತಿಯಿಂದ ಹೊರಬರದಿದ್ದರೆ ಭಾರತ ಭವಿಷ್ಯದಲ್ಲಿ ಸಂಕಷ್ಟಗಳಿಗೆ ಸಿಲುಕುತ್ತದೆ ಎಂದು ಎಚ್ಚರಿಕೆ ನೀಡಿದರು.




ಮೈಸೂರಿನ ಹೂಟಗಳ್ಳಿ ಕೆ.ಎಚ್.ಬಿ.ಬಡಾವಣೆಯ ಗಾಯತ್ರಿ ವಿಪ್ರ ಸಂಘದ ಆಶ್ರಯದಲ್ಲಿ ಬುಧವಾರ ಅನಂತೇಶ್ವರ ಭವನದಲ್ಲಿ ಋಗ್ವೇದ ಉಪಾಕರ್ಮ ವೇದಬ್ರಹ್ಮಶ್ರೀ ಶಶಿಭೂಷಣ್ ಅವರ ಮಾರ್ಗದರ್ಶನದಲ್ಲಿ ನಡೆಯಿತು. ಸಂಘದ ಗೌರವಾಧ್ಯಕ್ಷ ನಾಗರಾಜ್ ಭೈರಿ, ಅಧ್ಯಕ್ಷ ಜಗದೀಶ ಪ್ರಸಾದ್, ಕಾರ್ಯದರ್ಶಿ ಮಹೇಶಕುಮಾರ್, ಪದಾಧಿಕಾರಿಗಳಾದ ಮಂಜುನಾಥ ಜೋಯಿಸ್, ಸಂಘದ ಸದಸ್ಯರಾದ ವಿದ್ಯಾಧರ್, ಬಾಬು, ಫಣಿ ಅವರು ಉಪಸ್ಥಿತರಿದ್ದರು.

# ಡಿಸಿ ವಿರುದ್ಧ ಆರೋಪ ನಿಲ್ಲದಿದ್ದರೆ ಹೋರಾಟ



**ಮೈಸೂರು:** ದಲಿತ ಸಮುದಾಯದ ಪರಿಶಿಷ್ಟ ವರ್ಗಕ್ಕೆ ಸೇರಿದ ಹಾಸನ ಮಹಿಳಾ ಜಿಲ್ಲಾಧಿಕಾರಿಯಾದ ಲತಾಕುಮಾರಿ ವಿರುದ್ಧ ಮಾಜಿ ಸಚಿವ ಹಾಗೂ ಶಾಸಕ ಎಚ್.ಡಿ.ರೇವಣ್ಣ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದೇ ಸುಳ್ಳು ಆರೋಪ ಮಾಡುವುದನ್ನು ಕೂಡಲೇ ನಿಲ್ಲಿಸಬೇಕು. ಇಲ್ಲದಿದ್ದಲ್ಲಿ ರಾಜ್ಯಾದ್ಯಂತ ರೇವಣ್ಣ ವಿರುದ್ಧ ಸಮುದಾಯ ತೀವ್ರ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ರಾಜ್ಯ ನಾಯಕರು ಹಿತರಕ್ಷಣಾ ವೇದಿಕೆ ಸಂಸ್ಥಾಪಕ ಅಧ್ಯಕ್ಷ ದ್ಯಾವಪ್ಪನಾಯಕ ಎಚ್ಚರಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ರೇವಣ್ಣ ಮಹಿಳಾ ಅಧಿಕಾರಿಗೆ ತೇಜೋವಧೆ ಮಾಡುವುದನ್ನು ಕೂಡಲೇ ನಿಲ್ಲಿಸಬೇಕು. ರಾಜಕೀಯ ಕಾರಣಗಳಿಗಾಗಿ ಅಧಿಕಾರಿಗಳ ಮೇಲೆ ಅನಗತ್ಯ ಆರೋಪ ಮಾಡುವುದನ್ನು ನಿಲ್ಲಿಸಿ, ಸತ್ಯಾಸತ್ಯತೆ. ಪರಿಶೀಲಿಸಿ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು. ಅಧಿಕಾರಿಗಳು ಕಾನೂನು ಮತ್ತು ಆಡಳಿತಾತ್ಮಕ ಜವಾಬ್ದಾರಿಯ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸುವಾಗ, ಅವರ ಕರ್ತವ್ಯಕ್ಕೆ ಅಡ್ಡಿಪಡಿ ಸುವ ಅಥವಾ ವೈಯಕ್ತಿಕವಾಗಿ ನಿಂದಿಸುವ ಪ್ರವೃತ್ತಿ ಪ್ರಜಾಪ್ರಭುತ್ವದ ಆರೋಗ್ಯಕ್ಕೆ ಒಳ್ಳೆಯದಲ್ಲ ಎಂದರು.

ವಿಶೇಷವಾಗಿ ತಳ ಸಮುದಾಯದಿಂದ ಬಂದಿರುವ ಮಹಿಳಾ ಅಧಿಕಾರಿಗಳು ದಕ್ಷತೆ, ಪ್ರಾಮಾಣಿಕತೆ ಮತ್ತು ಆತ್ಮವಿಶ್ವಾಸದಿಂದ ಆಡಳಿತ ನಡೆಸುತ್ತಿರುವುದನ್ನು ಸಹಿಸದೆ ಅವರ ಮೇಲೆ ದರ್ಪ. ಒತ್ತಡ ಹಾಗೂ ರಾಜಕೀಯ ಪ್ರಭಾವ ಬೀರುವ ಪ್ರಯತ್ನಗಳು ನಡೆಯಬಾರದು. ಸ್ವತಂತ್ರವಾಗಿ ಮತ್ತು ನಿಸ್ಪಕ್ಷಪಾತವಾಗಿ ಕರ್ತವ್ಯ ನಿರ್ವಹಿಸಲು ಸೂಕ್ತ ವಾತಾವರಣ ಕಲ್ಪಿಸುವಂತೆ ಸಂಘಟನೆ ಒತ್ತಾಯಿಸುವುದಾಗಿ ತಿಳಿಸಿದರು. ಓರ್ವ ಹೆಣ್ಣು ಮಗಳ ಮಾನಕ್ಕೆ ಅಗೌರವ ಮಾಡುವ ಇಂತಹ ನೀಚ ರಾಜಕಾರಣಿಗಳಿಗೆ ತಕ್ಕ ಬುದ್ದಿ ಕಲಿಸಬೇಕಿದೆ. ನಿಷ್ಠೆಯಿಂದ ಕೆಲಸ ಮಾಡುತ್ತಿರುವ ಜಿಲ್ಲಾಧಿಕಾರಿ ಲತಾಕುಮಾರಿ ಅವರಿಗೆ ಮಾನಸಿಕವಾಗಿ ಧೈರ್ಯ ತುಂಬುವ ಕೆಲಸ ಆಗಬೇಕಿದೆ. ಮಾಜಿ ಎಚ್.ಡಿ. ರೇವಣ್ಣರವರು ತಮ್ಮ ವರ್ತನೆ ಇಲ್ಲಿಗೆ ಕೈಬಿಟ್ಟು ಸರ್ಕಾರಿ ಅಧಿಕಾರಿಗಳಿಗೆ ಗೌರವ ತೋರುವುದನ್ನು ರೂಢಿಸಿಕೊಳ್ಳಬೇಕಿದೆ. ಹಾಗೂ ಲತಾಕುಮಾರಿ ಅವರ ವಿಚಾರವಾಗಿ ನಿಮ್ಮ ವರ್ತನೆ ಇದೇ ರೀತಿ ಮುಂದುವರೆದರೆ ಇಡೀ ವಾಲ್ಮೀಕಿ ಸಮುದಾಯ ಹಾಗೂ ಮಹಿಳೆಯರು ರೇವಣ್ಣ ವಿರುದ್ಧ ತಿರುಗಿಬಿದ್ದು ರಾಜ್ಯಾದ್ಯಂತ ಹೋರಾಟ ನಡೆಸಬೇಕಾಗುತ್ತದೆಂದರು. ಇನ್ನಿತರ ಪದಾಧಿಕಾರಿಗಳಾದ ಸುರೇಶ್ ಕುಮಾರಬೀಡು, ವೆಂಕಟೇಶ್ ಡಿ. ನಾಯಕ್, ಎಂ. ದಾಸಪ್ಪ ಅಗತ್ತೂರು, ನಾಗಲಿಂಗಪ್ಪ, ಅನಂತು ಸಿದ್ದಲಿಂಗಪುರ ಇದ್ದರು.

# ನಾನಾ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಪ್ರತಿಭಟನೆ




ಮೈಸೂರು: ಗೌರವ ಧನ ಹೆಚ್ಚಳದ ಆರನೇ ಗ್ಯಾರಂಟಿ ಜಾರಿ ಸೇರಿ ಹಲವು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಎಐಟಿಯುಸಿ ಸಂಯೋಜಿತ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಫೆಡರೇಷನ್ ಜಿಲ್ಲಾ ಸಮಿತಿ ಪ್ರತಿಭಟಿಸಿತು.

ನಗರದ ನೂತನ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟಿಸಿ ನಾನಾ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. 2011ರಿಂದ ನಿವೃತ್ತರಾದವರೆಲ್ಲರಿಗೂ ಗ್ರಾಚ್ಯುಯಿಟಿ ನೀಡುವಂತೆ ಒತ್ತಾಯಿಸಿ ಬಲವಂತವಾಗಿ ಬಿ.ಎಲ್.ಓ ಜವಾಬ್ದಾರಿ ಹೊರೆಸುತ್ತಿರುವುದನ್ನು ವಿರೋಧಿಸಿದರು.

ಅಂಗನವಾಡಿ ಕಾರ್ಯಕರ್ತೆಯರಿಗೆ 15ಸಾವಿರ ರೂ., ಸಹಾಯಕಿಯರಿಗೆ 10ಸಾವಿರ ರೂ. ಗೌರವಧನ ನೀಡಬೇಕು. ಎಸ್‌ಐಆರ್ ಸಮೀಕ್ಷೆ ಕಾರ್ಯದಲ್ಲಿ ಉಂಟಾಗಿರುವ ಸಮಸ್ಯೆಗಳನ್ನು ಬಗೆಹರಿಸಬೇಕು. ಗೃಹಲಕ್ಷ್ಮಿ ಸರ್ವೇ ಕಾರ್ಯ, ಜಾತಿ ಪ್ರಮಾಣ ಪತ್ರ ವಿತರಣೆ ಕಾರ್ಯದಿಂದ ಬಿಡುಗಡೆಗೊಳಿಸಬೇಕು. ಮೊಟ್ಟೆ ದರ ಏರಿಕೆ ಮಾಡಬೇಕು. ನಿವೃತ್ತ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಪಿಂಚಣಿ ಸೌಲಭ್ಯ ಕಲ್ಪಿಸಬೇಕೆಂದು ಒತ್ತಾಯಿಸಿದರು.

ನೇಮಕಾತಿಯಲ್ಲಿ ವಯೋಮಿತಿ ಸಡಿಲಿಕೆ ಮಾಡಿ, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಬಿಪಿಎಲ್ ಕಾರ್ಡ್ ಕಡಿತ ಕೈ ಬಿಡಬೇಕು. ನಿವೃತ್ತಿ ವಯಸ್ಸು 65ವರ್ಷಕ್ಕೆ ಏರಿಕೆ ಮಾಡಬೇಕು. ಋತುಚಕ್ರ ರಜೆ ಘೋಷಣೆ ಮಾಡಬೇಕು. ಅಂಗನವಾಡಿಗೆ ಗುಣಮಟ್ಟದ ಆಹಾರ ಪೂರೈಕೆ ಮಾಡಬೇಕೆಂಬುದು ಸೇರಿ ಸೇರಿ ತಮ್ಮ ಹಲವು ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿದರು. ಜಿಲ್ಲಾಸಮಿತಿಯ ಜಿಲ್ಲಾಧ್ಯಕ್ಷೆ ಪಿ.ಎಂ.ಸರೋಜಮ್ಮ, ಜಿಲ್ಲಾ ಕಾರ್ಯದರ್ಶಿ ವೈ. ಮಹದೇವಮ್ಮ, ಖಜಾಂಚಿ ಸಿ.ಗಿರಿಜಾ, ಗೌರವಾಧ್ಯಕ್ಷ ಡಿ. ಜಗನ್ನಾಥ, ಉಪಾಧ್ಯಕ್ಷರಾದ ಜಯಮ್ಮ, ನಜರತ್ ಉನ್ನೀಸಾ, ವನಜಾಕ್ಷಿ, ತಾಲ್ಲೂಕು ಅಧ್ಯಕ್ಷರಾದ ಭುವನೇಶ್ವರಿ, ಸುಮ, ಭಾಗ್ಯ, ನಗರ ಖಜಾಂಚಿ ಗೀತಾ ಇನ್ನಿತರರು ಇದ್ದರು.

# ಆ.29ಕ್ಕೆ ಜಿಲ್ಲಾಮಟ್ಟದ ಪತ್ರಿಕಾ ದಿನಾಚರಣೆ, ಸನ್ಮಾನ

ಮೈಸೂರು: ಜಿಲ್ಲಾ ಪತ್ರಕರ್ತರ ಸಂಘದಿಂದ ಪತ್ರಿಕಾ ದಿನಾಚರಣೆ, ಪತ್ರಕರ್ತರ ನೂತನ ಭವನ ನಿರ್ಮಾಣದ ಕಾಮಗಾರಿಗೆ ಚಾಲನೆಯನ್ನು ಆ.29ರಂದು ಹಮ್ಮಿಕೊಳ್ಳಲಾಗಿದ್ದು, ಈ ವರ್ಷದ ಹಿರಿಯ ಪತ್ರಕರ್ತ ಪ್ರಶಸ್ತಿ ಹಾಗೂ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ.

ನಗರದ ಊಟಿ ರಸ್ತೆಯ (ಜೆಎಸ್‌ಎಸ್ ಕಾಲೇಜು ಹತ್ತಿರ) ಕೆಎನ್‌ಎಸ್ ಬಡಾವಣೆಯ ಪತ್ರಕರ್ತ ಸಂಘದ ನಿವೇಶನದಲ್ಲಿ ಜರುಗುವ ಪತ್ರಿಕಾ ದಿನಾಚರಣೆಯಲ್ಲಿ ನೂತನ ಪತ್ರಕರ್ತರ ಭವನದ ಕಾಮಗಾರಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದು, ಸಮಾರಂಭವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸುವರು. ಸಂಘದ ಅಧ್ಯಕ್ಷ ಕೆ.ದೀಪಕ್ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತರಿಗೆ ಮಾಜಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅಭಿನಂದಿಸಿದರೆ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ವಾರ್ಷಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವರು.

ಸಮಾರಂಭದಲ್ಲಿ ಮೈಸೂರು ಜಿಲ್ಲೆಯ ಶಾಸಕ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ, ಕೆ.ಹರೀಶ್ ಗೌಡ, ಅನಿಲ್ ಚಿಕ್ಕಮಾದು, ಡಿ. ರವಿಶಂಕರ್, ದರ್ಶನ್ ಧ್ರುವನಾರಾಯಣ್, ಜಿ.ಡಿ.ಹರೀಶ್ ಗೌಡ, ವಿಧಾನ ಪರಿಷತ್ ವಿಧಾನ ಪರಿಷತ್ತಿನ ಸದಸ್ಯರಾದ ಡಾ.ತಿಮ್ಮಯ್ಯ ಸಿ.ಎನ್.ಮಂಜೇಗೌಡ, ರಘು (ಕೌಟಿಲ್ಯ), ವಿವೇಕಾನಂದ, ಮಧು ಮಾದೇಗೌಡ ಹಾಗೂ ಡಾ. ಕೆ.ಶಿವಕುಮಾರ್, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ನಗರಪಾಲಿಕೆ ಆಯುಕ್ತೆ ಕೆ.ಎಲ್.ಸವಿತಾ, ಜೆಎಸ್‌ಎಸ್ ಸಮೂಹ ಸಂಸ್ಥೆಯ ಮುಖ್ಯಸ್ಥ ಶ್ರೀಹರಿ ದ್ವಾರಕನಾಥ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷರಾದ ಅಂಶಿ ಪ್ರಸನ್ನ ಕುಮಾರ್, ಸಿ.ಕೆ.ಮಹೇಂದ್ರ, ಎಸ್.ಟಿ. ರವಿಕುಮಾರ್ ಮೊದಲಾದವರು ಭಾಗವಹಿಸುವರು.

ಹಿರಿಯ ಪತ್ರಕರ್ತರಿಗೆ ಅಭಿನಂದನೆ: ಈ ಸಾಲಿನ ಹಿರಿಯ ಪತ್ರಕರ್ತರಾದ ಹಲೋ ಮೈಸೂರ್ ಪತ್ರಿಕೆಯ ಸಂಪಾದಕ ಟಿ.ಗುರುರಾಜ್ (ನಗರ), ಮೈಸೂರು ಮಿತ್ರ ಪತ್ರಿಕೆಯ ಹಿರಿಯ ವರದಿಗಾರ ಪಿ.ಎಸ್.ವೀರೇಶ್ (ಗ್ರಾಮಾಂತರ), ಉಪ– ಸಂಪಾದಕ ವಿಭಾಗದಿಂದ ರಾಜ್ಯಧರ್ಮ ಪತ್ರಿಕೆಯ ಬಿ.ಎಂ.ಲವಕುಮಾರ್, ಛಾಯಾಗ್ರಾಹಕರ ವಿಭಾಗದಿಂದ ಸಿಟಿ ಹೈ ಲೈಟ್ಸ್ ಪತ್ರಿಕೆಯ ಹಂಪಾ ನಾಗರಾಜ್, ವಿದ್ಯುನ್ಮಾನ ಮಾಧ್ಯಮದಿಂದ ಕನ್ನಡ ಚಾನಲ್ ಸಂಪಾದಕ ಸೂರ್ಯ (ವೈರಮುಡಿ), ವಿಡಿಯೋಗ್ರಾಫರ್ ವಿಭಾಗದಿಂದ ಜೀ ಟಿವಿಯ ಎಂ.ಅರುಣ್ ದೇವ್ ಅವರನ್ನು ಆಯ್ಕೆ ಮಾಡಲಾಗಿದೆ.

### ವಾರ್ಷಿಕ ಪ್ರಶಸ್ತಿಗೆ ಆಯ್ಕೆ

ವರ್ಷದ ಅತ್ಯುತ್ತಮ ಕನ್ನಡ ವರದಿಗೆ ಉದಯವಾಣಿ ಪತ್ರಿಕೆಯ ಆರ್.ವೀರೇಂದ್ರ ಪ್ರಸಾದ್ ಮತ್ತು ವಿಜಯವಾಣಿ ಪತ್ರಿಕೆಯ ಅವಿನಾಶ್ ಜೈನಹಳ್ಳಿ ಹಾಗೂ ಅತ್ಯುತ್ತಮ ಇಂಗ್ಲಿಷ್ ವರದಿಗೆ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಪಿ.ಶಿಲ್ಪ ಮತ್ತು ಇಂಡಿಯನ್ ಎಕ್ಸ್ ಪ್ರೆಸ್ ಪತ್ರಿಕೆಯ ಕೆ.ಕೆ. ಕಾರ್ತಿಕ್ ಆಯ್ಕೆಯಾಗಿ ಪ್ರಶಸ್ತಿ ಹಂಚಿಕೊಂಡಿದ್ದಾರೆ. ಅತ್ಯುತ್ತಮ ಛಾಯಾಚಿತ್ರ ಪ್ರಶಸ್ತಿಯನ್ನು ಸ್ಟಾರ್ ಆಫ್ ಮೈಸೂರ್ ಮತ್ತು ಮೈಸೂರು ಮಿತ್ರ ಪತ್ರಿಕೆಯ ಎಂ.ಎನ್.ಲಕ್ಷ್ಮೀನಾರಾಯಣ ಯಾದವ್ ಹಾಗೂ ವಿದ್ಯುನ್ಮಾನ ಮಾಧ್ಯಮ ವಿಭಾಗದಿಂದ ನ್ಯೂಸ್ –18ನ ಕೆ.ಎಸ್.ಆನಂದ್, ಪಿ.ರಾಹುಲ್ ಅವರು ಅತ್ಯುತ್ತಮ ವರದಿಗಾರಿಕೆ ಪ್ರಶಸ್ತಿ ಪಡೆದಿದ್ದು ಕಾರ್ಯಕ್ರಮದಲ್ಲಿ ಅಭಿನಂದನೆ ಸಲ್ಲಿಸುವುದಾಗಿ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್ ತಿಳಿಸಿದ್ದಾರೆ.

# ಚುನಾವಣೆಗೆ ಪ್ರತಿಯೊಬ್ಬ ಕಾರ್ಯಕರ್ತರು ಸಜ್ಜಾಗಿ




ಕೊಳ್ಳೇಗಾಲ: ಮುಂಬರುವ ನವೆಂಬರ್– ಡಿಸೆಂಬರ್‌ನಲ್ಲಿ ನಡೆಯಲಿರುವ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ನಾವು ಗೆದ್ದು ಬರಬೇಕು. ಅದಕ್ಕೆ ಈಗಿನಿಂದಲೇ ಪ್ರತಿಯೊಬ್ಬ ಕಾರ್ಯಕರ್ತರು ತಮ್ಮ ತಮ್ಮ ಬೂತ್‌ಗಳಲ್ಲಿ ಸಜ್ಜಾಗಬೇಕು ಎಂದು ಜಿಲ್ಲಾ ಬಿಜೆಪಿ ಓಬಿಸಿ ಮೋರ್ಚಾ ಅಧ್ಯಕ್ಷ ಜನಧ್ವನಿ ವೆಂಕಟೇಶ್ ಅವರು ಕರೆ ನೀಡಿದರು.

ಹನೂರು ಪಟ್ಟಣದಲ್ಲಿ ಬಿಜೆಪಿ ವತಿಯಿಂದ ಹನೂರು ವಿಧಾನಸಭಾ ಕ್ಷೇತ್ರದ ಪರಿಶೀಲನಾ ಸಭೆ ಹಾಗೂ ಕಾರ್ಯಾಗಾರದಲ್ಲಿ ಮಾತನಾಡಿದ ಅವರು ಸೆಪ್ಟೆಂಬರ್ 14 ರ ಮೊದಲು ಮತ್ತು ನಂತರ ಪ್ರತಿ ಬೂತ್‌ಗೂ ನಾವು ಭೇಟಿ ನೀಡುವ ಕೆಲಸ ಮಾಡುತ್ತೇವೆ. ಮಂಡಲಾಧ್ಯಕ್ಷರು ಸೇರಿದಂತೆ ಎಲ್ಲರೂ ಬೂತ್ ಕಮಿಟಿ ಮೀಟಿಂಗ್ ಮಾಡಿ ಬೂತ್‌ಗಳನ್ನು ಹೇಗೆ ಗಟ್ಟಿಗೊಳಿಸಬೇಕು ಎಂಬ ಬಗ್ಗೆ ಚರ್ಚೆ ಮಾಡಲಾಗುವುದು ಎಂದರು.

### ಗಡಿ ಕಾಯುವ ಸಿಪಾಯಿಯಂತೆ ಕೆಲಸ ಮಾಡಬೇಕು

ನಾವು ಬರಲಿಲ್ಲ, ಯಾರು ಬಂದರು ಎಂಬ ಅಪೇಕ್ಷೆ ಬೇಡ. ಭಾರತೀಯ ಜನತಾ ಪಾರ್ಟಿಯ ಒಂದು ಮತವೂ ಕಡಿಮೆಯಾಗಬಾರದು ಎಂಬುದನ್ನು ತಲೆಯಲ್ಲಿ ಇಟ್ಟುಕೊಳ್ಳಿ ಎಂದು ಸೂಚಿಸಿದರು. ನಾವೆಲ್ಲ ಇವತ್ತು ಭಾರತೀಯ ಜನತಾ ಪಾರ್ಟಿ ನಮಗೆ ಒಂದು ಅವಕಾಶ ಕೊಟ್ಟಿದೆ. ಇಡೀ ಜಗತ್ತಿನ ಅತಿದೊಡ್ಡ ಪಕ್ಷದ ಅಡಿಯಲ್ಲಿ ಸೇವೆ ಮಾಡಿ ಜನರಿಗೆ ತಲುಪಿಸುವ ಅವಕಾಶ ನಮಗೆ ಸಿಕ್ಕಿದೆ ಎಂದರು.

ಮುಂಬರುವ ಸೆಪ್ಟೆಂಬರ್: 14 ರಂದು ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದ ಪ್ರಯುಕ್ತ ಹಮ್ಮಿಕೊಳ್ಳಲಾಗುವ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಬಿಜೆಪಿ ಬೂತ್ ಮಟ್ಟದ ಸಿದ್ಧತೆಗಳನ್ನು ಚುರುಕುಗೊಳಿಸಿದೆ. ಪ್ರಧಾನಿ ಮೋದಿ ಅವರ ಜನ್ಮದಿನದ ಪ್ರಯುಕ್ತ ಪ್ರತಿ ಬೂತ್‌ಗೂ ಭೇಟಿ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮಂಡಲಾಧ್ಯಕ್ಷರು ಸೇರಿದಂತೆ ಎಲ್ಲರೂ ಬೂತ್ ಕಮಿಟಿ ಮೀಟಿಂಗ್ ಮಾಡಿ ಬೂತ್‌ಗಳನ್ನು ಹೇಗೆ ಗಟ್ಟಿಗೊಳಿಸ ಬೇಕು ಎಂಬುದರ ಬಗ್ಗೆ ನಿರ್ಧರಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಎಸ್‌ಐಆರ್ ವಿಭಾಗದ ಪ್ರಭಾರಿಗಳು ಅಶ್ವಿನಿ ಶಂಕರ್, ವಿಧಾನಪರಿಷತ್ ಮಾಜಿ ಸದಸ್ಯ ಮಲ್ಲಿಕಾರ್ಜುನಪ್ಪ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ಮರುಳಾಪುರ ಸ್ವಾಮಿ, ಬಾಲಸುಬ್ರಮಣ್ಯಂ, ರೇವಣ್ಣ, ಹನೂರು ಮಂಡಲ ಅಧ್ಯಕ್ಷ ವರ್ಷವೇಂದ್ರಸ್ವಾಮಿ, ಮುರುಗ, ಕಾರ್ಯದರ್ಶಿ ವರಪ್ರಸಾದ್, ಜಗನ್ನಾಥ್ ನಾಯ್ಡು, ಅನಂತ ಪದ್ಮನಾಭ ಗುಪ್ತ, ಬಿಎಲ್‌ಒ–2 ಲೋಕೇಶ್ ಶೆಟ್ಟಿ, ಪೊನ್ನಾಚಿ ಜಯಪ್ರಕಾಶ್, ಮಂಜುನಾಥ ಸ್ವಾಮಿ ಸೇರಿದಂತೆ ಇನ್ನಿತರರು ಇದ್ದರು.

# ನಿತ್ರಾಣಗೊಂಡಿದ್ದ ಹೆಣ್ಣು ಹುಲಿ ಸೆರೆ



ಗುಂಡ್ಲುಪೇಟೆ: ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗುಂಡ್ಲುಪೇಟೆ ಉಪ ವಿಭಾಗದ ಮದ್ದೂರು ವನ್ಯಜೀವಿ ವಲಯ ವ್ಯಾಪ್ತಿಯ ಮದ್ದೂರು ಕಾಲೋನಿ ಸಮೀಪದ ಜುಡುಗಟ್ಟೆ ಕೆರೆಯ ಬಳಿ ನಿತ್ರಾಣಗೊಂಡು ಮಲಗಿದ್ದ ಹೆಣ್ಣು ಹುಲಿಯನ್ನು ಅರಣ್ಯ ಇಲಾಖೆ ಮಂಗಳವಾರ ಸಂಜೆ ಸುರಕ್ಷಿತವಾಗಿ ಸೆರೆ ಹಿಡಿದಿದೆ.

ಹುಲಿಯು ಮೇಲ್ನೋಟಕ್ಕೆ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವಂತೆ ಕಂಡುಬಂದಿದ್ದು, ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಹುಲಿಯ ಚಲನವಲನವನ್ನು ಗಮನಿಸಿದರು. ಸೆರೆ ಹಿಡಿಯುವ ಸಂದರ್ಭದಲ್ಲಿಯೂ ಹುಲಿಯ ಚಲನ–ವಲನ ಕಡಿಮೆಯಾಗಿರುವುದು ಕಂಡುಬಂ ದಿದೆ. ಸುಮಾರು 10ರಿಂದ 12 ವರ್ಷ ವಯಸ್ಸಿನ ಹೆಣ್ಣು ಹುಲಿ ಇದಾಗಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ. ಬಂಡೀಪುರ ಹುಲಿ ಯೋಜನೆಯ ನಿರ್ದೇಶಕ ಶುಭಂ ಸಿಂಗ್ ತನ್ವರ್ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು. ಗುಂಡ್ಲುಪೇಟೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುರೇಶ್ ಕೆ., ಮದ್ದೂರು ವಲಯ ಅರಣ್ಯಾಧಿಕಾರಿ ಶೈಲೇಂದ್ರ ಕುಮಾರ್ ಎನ್., ಕುಂದುಕೆರೆ ವಲಯ ಅರಣ್ಯಾಧಿಕಾರಿ ನಿಸಾರ್ ಅಹಮದ್, ಎಸ್‌ಟಿಪಿಎಫ್ ವಲಯ ಅರಣ್ಯಾಧಿಕಾರಿ ವೆಂಕಟೇಶ್ ಸೇರಿದಂತೆ ಅರಣ್ಯ ಇಲಾಖೆ ಸಿಬ್ಬಂದಿ, ಪಶುವೈದ್ಯಾಧಿಕಾರಿ ಡಾ. ವಾಸಿಂ ಮಿರ್ಜಾ, ಪೊಲೀಸ್ ಇಲಾಖೆ ಸಿಬ್ಬಂದಿ ಹಾಗೂ ಇಲಾಖೆಯ ಡ್ರೋಣ್ ತಂಡದ ಸಹಯೋಗದಲ್ಲಿ ಕಾರ್ಯಾಚರಣೆ ಕೈಗೊಳ್ಳಲಾಯಿತು.

ಅರವಳಿಕೆ ಚುಚ್ಚುಮದ್ದು ನೀಡಿ ಹುಲಿಯನ್ನು ಸುರಕ್ಷಿತವಾಗಿ ಸೆರೆ ಹಿಡಿಯುವಲ್ಲಿ ಸಿಬ್ಬಂದಿ ಯಶಸ್ವಿಯಾಗಿದ್ದಾರೆ. ಬಳಿಕ ಸೆರೆ ಹಿಡಿದ ಹುಲಿಗೆ ಪಶುವೈದ್ಯಾಧಿಕಾರಿಗಳಿಂದ ತಪಾಸಣೆ ಹಾಗೂ ಅಗತ್ಯ ಚಿಕಿತ್ಸೆಯನ್ನು ನೀಡಿ, ಹೆಚ್ಚಿನ ಆರೈಕೆ ಮತ್ತು ಮೇಲ್ವಿಚಾರಣೆಗಾಗಿ ಮೈಸೂರಿನ ಕೂರ್ಗಳ್ಳಿ ಪುನರ್ವಸತಿ ಕೇಂದ್ರಕ್ಕೆ ಸುರಕ್ಷಿತವಾಗಿ ಸಾಗಿಸಲಾಗಿದೆ. ಹೆಣ್ಣು ಹುಲಿ ಸದ್ಯ ಸುರಕ್ಷಿತವಾಗಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.



## ಕೃಷ್ಣ ವಂದನ

**ಸ್ನೇಹಾ ಆನಂದ್**



### ಹೇ ಕೃಷ್ಣಾ !

**ಬದುಕ ಕಲಿಸು ಕೃಷ್ಣ ಭಕುತಿಯನು ಕೊಟ್ಟು ,**
**ಧರ್ಮವನು ಕೊಡು ತಂದೆ ಕರ್ಮವನು**
**ಕಳೆವುದಕೆ!**

**ಕರಿರಾಜ ಕರೆದರೆ ತ್ವರಿತದಿಂದಲಿ ಪೋದೆ!**
**ದ್ರೌಪದಿ ಪರಿತಾಪಕೆ ಮರುಗಿ ನೀ ನಿಂದೆ,**
**ಪ್ರಲ್ಹಾದನ ಮೊರೆಗೆ ಕಂಬ ಒಡೆದು ಬಂದೆ,**
**ನಿನ್ನ ಮಹಿಮೆಯ ನಾ ಪೊಗಳಲೆಂತು**
**ಹರಿಯೇ!**

**ಪಾರ್ಥನ ರಥಕೆ ನೀ ಸಾರಥಿಯಾದೆ,**
**ದುರಳ ದುಶ್ಯಾಸನನ ದುರಭಿಮಾನವ**
**ಮುರಿದೆ,**
**ಧರ್ಮದ ಪಥವನ್ನು ಜಗಕೆ ಸಾರಿದೆ**
**ಹರಿಯೇ,**
**ಹೇಮಗಿರೀಶನೆ ನಿನ್ನ ಪೊಗಳಲೆಂತು**
**ದೊರೆಯೆ!**

## ಕನ್ನಡವನ್ನು ಕಡೆಗಣಿಸುತ್ತಿರುವ ಹೊಸ ಪರೀಕ್ಷಾ ನಿಯಮ

# ಕನ್ನಡ ಸಂಘಟನೆಗಳ ಆಕ್ರೋಶ

**ಶಿವಕುಮಾರ ತುಂಬಸೋಗೆ**



ಎಚ್.ಡಿ.ಕೋಟೆ: ಕರ್ನಾಟಕ ನಾಗರಿಕ ಸೇವೆಗಳ ಲಿಪಿಕ ಹುದ್ದೆಗಳ ನೇರ ನೇಮಕಾತಿಗಳಿಗೆ ಸಂಬಂಧಿಸಿದ 1978ರ ನಿಯಮಗಳಿಗೆ 2026ರಲ್ಲಿ ತರಲಾಗಿರುವ ತಿದ್ದುಪಡಿಯಿಂದ ಕನ್ನಡದ ಮೇಲೆ ಸರ್ಕಾರಕ್ಕಿರುವ ಪ್ರೀತಿಯನ್ನು ಪ್ರಶ್ನಿಸುವಂತಾಗಿದ್ದು, ಕನ್ನಡ ಭಾಷೆಯನ್ನು ಕಡೆಗಣಿಸಿದಂತಾಗಿದೆ.

ಕರ್ನಾಟಕದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಘೋಷಿಸಿ ಎಲ್ಲ ವ್ಯವಹಾರಗಳು ಕನ್ನಡದಲ್ಲಿಯೇ ನಡೆಯುವಂತೆ ಮಾಡಲಾಗಿದೆ. ಅಂಗಡಿ ಮುಂಗಟ್ಟುಗಳ ನಾಮಫಲಕದಲ್ಲಿಯೂ ಕನ್ನಡಕ್ಕೆ ಮೊದಲ ಆದ್ಯತೆ ನೀಡುವಂತೆ ಆದೇಶಿಸಲಾಗಿದೆ. ಆದರೆ, ಗ್ರೂಪ್–ಸಿ ಹುದ್ದೆಗಳ ಪರೀಕ್ಷಾ ನೇಮಕಾತಿಯಲ್ಲಿ ಒಂದು ಪತ್ರಿಕೆಯ 100 ಅಂಕಗಳಿದ್ದ ಕನ್ನಡ ಪ್ರಶ್ನೆಗಳನ್ನು ಕೇವಲ 35ಕ್ಕೆ ಇಳಿಸಿರುವುದು ಗ್ರಾಮೀಣ ಭಾಗದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದೆ.

ಸರ್ಕಾರಿ ಕಚೇರಿಗಳಲ್ಲಿ ಕನ್ನಡವೇ ಪ್ರಮುಖ ಆಡಳಿತ ಭಾಷೆಯಾಗಿರುವ ಸಂದರ್ಭದಲ್ಲಿ ಕನ್ನಡ ಭಾಷಾ ಜ್ಞಾನಕ್ಕೆ ಕನಿಷ್ಠ ಪ್ರಾಮುಖ್ಯತೆ ನೀಡಿ, ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸುವುದು ಎಷ್ಟು ಸರಿ ? ಸರ್ಕಾರಿ ಉದ್ಯೋಗಕ್ಕೆ ಆಯ್ಕೆಯಾಗುವ ಅಧಿಕಾರಿ ಹಾಗೂ ನೌಕರರು ಜನರೊಂದಿಗೆ ಸ್ಥಳೀಯ ಭಾಷೆಗೆ ಪ್ರಾಮುಖ್ಯತೆ ಕೊಟ್ಟೇ ವ್ಯವಹರಿಸಬೇಕಿದೆ. ಈ ನಿಟ್ಟಿನಲ್ಲಿ ಕನ್ನಡ ಭಾಷಾ ಸಾಮರ್ಥ್ಯವನ್ನು ಬಲಪಡಿಸುವ ಕೆಲಸ ಮಾಡುವ ಬದಲು, ಕನ್ನಡವನ್ನು ದುರ್ಬಲಗೊಳಿಸುತ್ತಿರುವುದು ಕಾಣುತ್ತಿದೆ.

ಸರ್ಕಾರ ತಂದಿರುವ ಈ ನೂತನ ನಿಯಮದಿಂದ ಗ್ರಾಮೀಣ ಭಾಗದ ಉದ್ಯೋಗಾಕಾಂಕ್ಷಿಗಳು ಆರಂಭದಲ್ಲಿಯೇ ಹೊರಗುಳಿಯುವ ಸಾಧ್ಯತೆ ದಟ್ಟವಾಗಿದೆ. ಹೊಸ ಪರೀಕ್ಷಾ ವಿಧಾನ ಜಾರಿಗೆ ತರುವ ಮೊದಲು ಸಾಧಕ, ಬಾಧಕಗಳನ್ನು ಚರ್ಚಿಸುವ ಸಾಮಾನ್ಯ ಪ್ರಕ್ರಿಯೆಯನ್ನು ಸರ್ಕಾರ ಮಾಡದಿರುವುದು ಉದ್ದೇಶ ಪೂರ್ವಕವಾಗಿ ಹಳ್ಳಿಗಾಡಿನ ಅಭ್ಯರ್ಥಿಗಳನ್ನು ಹೊರಗಿಡಲು ಮಾಡಿರುವ ಹುನ್ನಾರ ಎಂದು ಹಲವಾರು ವಿಶ್ಲೇಷಿಸುತ್ತಿದ್ದಾರೆ.

### ಹಳೆ ಪದ್ಧತಿಯಲ್ಲಿಯೇ ಅಭ್ಯಸಿರುವ ಆಕಾಂಕ್ಷಿಗಳು

**ಸಾಮಾನ್ಯವಾಗಿ ಗ್ರೂಪ್–ಸಿ ಹುದ್ದೆಗಳ ಭರ್ತಿ ನಡೆಯುವುದು ತೀರಾ ಕಡಿಮೆಯಾಗಿದ್ದು, ಅಲ್ಪಪ್ರಮಾಣದಲ್ಲಿ ಉದ್ಯೋಗ ನೀಡಲಾಗುತ್ತದೆ. 2019ರಲ್ಲಿ ನಡೆದಿದ್ದ ಎಫ್.ಡಿ.ಎ, ಎಸ್.ಡಿ.ಎಗಳ ನೇಮಕ, ಏಳು ವರ್ಷಗಳ ನಂತರ ಇದೀಗ ಪ್ರಾರಂಭವಾಗಿದೆ. ಈ ಹುದ್ದೆಗಳ ಮೇಲೆ ಕಣ್ಣಿಟ್ಟಿದ್ದ ಕೆಲವರು ಹಳೆ ಪರೀಕ್ಷಾ ಪದ್ಧತಿಯ ಪಠ್ಯ ಕ್ರಮದಲ್ಲಿಯೇ ಅಭ್ಯಾಸ ಮಾಡಿದ್ದಾರೆ. ಪ್ರಸ್ತುತ ಸರ್ಕಾರ ಕೈಗೊಂಡಿರುವ ಈ ದಿಢೀರ್ ನಿರ್ಧಾರದಿಂದ ಆಕಾಂಕ್ಷಿಗಳಿಗೆ ತೀರಾ ಸಂಕಷ್ಟವಾಗಿದೆ.**



ಕನ್ನಡ ಪ್ರಶ್ನೆಗಳನ್ನು ಕಡಿತ ಮಾಡಿರುವುದು ಕನ್ನಡಕ್ಕೆ ಮಾಡಿದ ಅಪಮಾನ. ನೂತನ ನಿಯಮ ತಂದು ಕನ್ನಡಕ್ಕೆ ಅನ್ಯಾಯ, ದ್ರೋಹ ಬಗೆಯಲಾಗಿದೆ. ಸರ್ಕಾರ ಕನ್ನಡಕ್ಕೆ ಅಗೌರವ ಸೂಚಿಸುವ ಕೆಲಸ ಮಾಡಿದೆ. ಯಾವುದೇ ಕಾರಣಕ್ಕೆ ಹೊಸ ನಿಯಮ ಜಾರಿ ಆಗಬಾರದು.

**ವಾಟಾಳ್ ನಾಗರಾಜು** ಕನ್ನಡಪರ ಹೋರಾಟಗಾರರು



ಗ್ರಾಮೀಣ ಭಾಗದ ಮಕ್ಕಳು ಪ್ರಾಥಮಿಕ ಶಿಕ್ಷಣ ಪೂರ್ವದಿಂದಲೇ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿರುತ್ತಾರೆ. ಇಂಗ್ಲೀಷ್, ಕಂಪ್ಯೂಟರ್ ಬಗ್ಗೆ ಅಷ್ಟೇನು ತಿಳಿದಿರುವುದಿಲ್ಲ. ನೂತನ ಪರೀಕ್ಷಾ ವಿಧಾನ, ಸರ್ಕಾರದ ವಿರುದ್ಧ ಧ್ವನಿ ಎತ್ತಲಾಗುವುದು.

**ಪ್ರವೀಣ್ ಶೆಟ್ಟಿ** ಸಂಸ್ಥಾಪಕ ರಾಜ್ಯಾಧ್ಯಕ್ಷ, ಕರವೇ(ಪ್ರವೀಣ್ ಶೆಟ್ಟಿ ಬಣ)



ಈ ನಿಯಮ ಗ್ರಾಮೀಣ ಬಡ ಮಕ್ಕಳಿಗೆ ನುಂಗಲಾರದ ತುತ್ತಾಗಿ ಪರಿಣಮಿಸಲಿದೆ. ರಾಜ್ಯದ ಬಹು ತೇಕ ರಾಜಕಾರಣಿಗಳು ಖಾಸಗೀ ಶಿಕ್ಷಣ ಸಂಸ್ಥೆಗಳನ್ನು ಹೊಂದಿದ್ದಾರೆ. ಅವುಗಳ ಉಳಿವು ಹಾಗೂ ಲಾಭಗೋಸ್ಕರ ಈ ರೀತಿ ನಿಯಮ ತಂದು, ಈ ನಾಡಿನ ಕನ್ನಡದ ಮಕ್ಕಳಿಗೆ, ಗ್ರಾಮೀಣ ಮಕ್ಕಳಿಗೆ ದ್ರೋಹ ಬಗೆದಿದ್ದಾರೆ. ಮಾಜಿ ಸಿಎಂ ಸಿದ್ದರಾಮಯ್ಯ ಅವರು ಅನ್ನರಾಮಯ್ಯ, ಹಿಂದುಳಿದವರ ನಾಯಕ, ಬಡವರ ಮೇಲಿನ ಕಾಳಜಿ ಇರುವ ರಾಮಯ್ಯ, ಕನ್ನಡ ರಾಮಯ್ಯ ಆಗಿದ್ದರೆ ಈ ಆದೇಶ ತೆರವು ಮಾಡಿಸಲು ಮುಂದಾಗಲಿ.

**ಡಿ.ಪಿ.ಕೆ.ಪರಮೇಶ್** ಸಂಸ್ಥಾಪಕ ರಾಜ್ಯಾಧ್ಯಕ್ಷ, ಹೃದಯವಂತ ಕನ್ನಡಿಗರ ಬಳಗ, ಮೈಸೂರು



ಸರ್ಕಾರದ ಏಕಪಕ್ಷೀಯ ನಿರ್ಧಾರ ತರವಲ್ಲ. ಹುದ್ದೆ ಭರ್ತಿಯ ನಂತರವೂ ನೌಕರರಿಗೆ ತರಬೇತಿ ನೀಡಬಹುದು. ಸೇವೆಯಲ್ಲಿರುವ ಶಿಕ್ಷಕರು ಟಿಇಟಿ ಪಾಸ್ ಮಾಡುವಂತೆ ಅವಕಾಶ ನೀಡಿರಲಿಲ್ಲವೇ? ಇಲಾಖೆಗಳಲ್ಲಿ ನಿರ್ಣಯ ಕೈಗೊಳ್ಳುವ ಅಧಿಕಾರ ಉನ್ನತ ಅಧಿಕಾರಿಗಳಿಗಿದೆ. ಸಿ ವೃಂದದರು ನೌಕರರು ಅವರಿಗೇಕೆ ಈ ಶಿಕ್ಷೆ ?

**–ಅರವಿಂದ ಶರ್ಮ** ಸಾಮಾಜಿಕ ಹೋರಾಟಗಾರರು

# ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಸಾಮೂಹಿಕ ಋಗ್ವೇದ ಉಪಾಕರ್ಮ



ಮಂಡ್ಯ : ಅದ್ವೈತ ಸಂಸ್ಥಾನಂ (ರಿ), ಬ್ರಾಹ್ಮಣ ಯುವ ಸೇವಾ ಟ್ರಸ್ಟ್ (ರಿ) ಇವರ ಆಶ್ರಯದಲ್ಲಿ ವೇದ ಬ್ರಹ್ಮಶ್ರೀ ಉಪೇಂದ್ರ ಶರ್ಮಾ ಅವರ ಸಾರಥ್ಯದಲ್ಲಿ ಬುಧವಾರ ಬೆಳಗ್ಗೆ 7 ಗಂಟೆಗೆ ಸಾಮೂಹಿಕ ಋಗ್ವೇದ ಉಪಾಕರ್ಮವನ್ನು ಮಂಡ್ಯ ನಗರದ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಈ ದಿನ ಆಚರಿಸಲಾಯಿತು.

ಉಪಾಕರ್ಮ ಕಾರ್ಯಕ್ರಮದಲ್ಲಿ ಅದ್ವೈತ ಸಂಸ್ಥಾನಂ ಕಾರ್ಯದರ್ಶಿ ಎನ್ .ಗೋಪಿನಾಥ್ , ಬ್ರಾಹ್ಮಣ ಯುವ ಸೇವಾ ಟ್ರಸ್ಟ್ ಕಾರ್ಯದರ್ಶಿ ಬಾಲಾಜಿ ಕೆ ಆರ್, ರವಿಶಂಕರ್, ಶ್ರೀಪತಿ ಭಾರದ್ವಾಜ್, ಹುಲಿವಾನ ಸುಬ್ಬಣ್ಣ, ಚಂದ್ರು ಸೇರಿದಂತೆ ಮುಂತಾದವರು ಭಾಗವಹಿಸಿದ್ದರು



## ಮೊದಲನೇ ತಂಡದ ತರಬೇತಿ ಕಾರ್ಯಕ್ರಮ

# ವಿದ್ಯುತ್ ಸುರಕ್ಷತೆ, ಅಪಘಾತ ತಡೆ ತರಬೇತಿ



ಮೈಸೂರು: ವಿದ್ಯುತ್ ಸುರಕ್ಷತಾ ಕ್ರಮಗಳು, ವಿದ್ಯುತ್ ಅಪಘಾತ ತಡೆಯುವಿಕೆ ಹಾಗೂ ಅಂದಾಜು ಪಟ್ಟಿ ತಯಾರಿಸುವ ಕುರಿತಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ವತಿಯಿಂದ ನಿಗಮದ ವಿವಿಧ ಕಾರ್ಯ ಮತ್ತು ಪಾಲನಾ ಶಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಶಾಖಾಧಿಕಾರಿಗಳಿಗೆ ಒಂದು ದಿನದ ತರಬೇತಿ ನೀಡಲಾಯಿತು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ನಡೆದ ಮೊದಲನೇ ತಂಡದ ತರಬೇತಿ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡಿದ್ದ ಬೆಸ್ಕಾಂ ನಿವೃತ್ತ ಉಪ ಪ್ರಧಾನ ವ್ಯವಸ್ಥಾಪಕರಾದ ಎ. ರಮೇಶ್ ಅವರು, "ಸ್ವಯಂ ಸುರಕ್ಷತೆಯೊಂದಿಗೆ ವಿದ್ಯುತ್ ಗ್ರಾಹಕರು, ಸಾರ್ವಜನಿಕರು, ಪ್ರಾಣಿಗಳು ಹಾಗೂ ಸೆಸ್ಕ್‌ನ ಆಸ್ತಿಗಳ ಸುರಕ್ಷತೆಯನ್ನು ಹೇಗೆ ಕಾಪಾಡಬೇಕು ಹಾಗೂ ಇದಕ್ಕೆ ಸೆಸ್ಕ್‌ನ ಶಾಖಾಧಿಕಾರಿಗಳು ಹೆಚ್ಚಿನ ನಿಗಾವಹಿಸುಬೇಕೆಂದು ತಿಳಿಸಿದರು. ಹಿಂದಿನ ವರ್ಷಗಳ ಅಂಕಿ ಅಂಶಗಳನ್ನು ಅವಲೋಕಿಸಿದಾಗ, ಇತ್ತೀಚಿನ ದಿನಗಳಲ್ಲಿ ವಿದ್ಯುತ್ ಅಪಘಾತಗಳ ಪ್ರಮಾಣದಲ್ಲಿ ಗಣನೀಯವಾಗಿ ಇಳಿಕೆಯಾಗಿದ್ದರೂ ಸಹ ವಿದ್ಯುತ್ ಅವಘಡಗಳನ್ನು ಶೂನ್ಯವಾಗಿಸಲು ಸಾಧ್ಯವಾಗಿಲ್ಲ. ಈ ನಿಟ್ಟಿನಲ್ಲಿ ಸುರಕ್ಷತಾ ವಿಧಾನಗಳನ್ನು ಸರಿಯಾಗಿ ಪಾಲನೆ ಮಾಡಬೇಕಿದ್ದು, ಸ್ವಯಂ ಸುರಕ್ಷತೆಯ ಜೊತೆಗೆ ಗ್ರಾಹಕರು, ಸಾರ್ವಜನಿಕರು, ಸಹೋದ್ಯೋಗಿಗಳು, ಪ್ರಾಣಿಗಳ ಸುರಕ್ಷತೆಯೊಂದಿಗೆ ಕಂಪನಿಯ ಸುರಕ್ಷತೆಯ ಬಗ್ಗೆ ನಿಗಾವಹಿಸಬೇಕಿದೆ ಎಂದು ತಿಳಿಸಿದರು.

ವಿದ್ಯುತ್ ಅವಘಡಗಳ ಪ್ರಮಾಣವನ್ನು ತಡೆಗಟ್ಟುವ ನಿಟ್ಟಿನಲ್ಲಿ ಅನುಸರಿಸಬೇಕಾದ ಕ್ರಮಗಳೊಂದಿಗೆ ಗ್ರಾಹಕರಿಗೆ ಸ್ಟಾರ್ ರೇಟಿಂಗ್ ಹೊಂದಿರುವ ಗುಣಮಟ್ಟದ ವಿದ್ಯುತ್ ಉಪಕರಣಗಳ ಬಳಕೆ ಬಗ್ಗೆ ತಿಳುವಳಿಕೆ ಹಾಗೂ ಅದರಿಂದಾಗುವ ಅನುಕೂಲದ ಬಗ್ಗೆ ಜಾಗೃತಿ ಮೂಡಿಸಬೇಕಿದೆ. ವಿದ್ಯುತ್ ಸುರಕ್ಷತೆ ಕಾಪಾಡುವುದರೊಂದಿಗೆ ಅಂದಾಜು ಪಟ್ಟಿಯನ್ನು ಸಮರ್ಪಕ ರೀತಿಯಲ್ಲಿ ಮಾಡಬೇಕಿದೆ, ಇದಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ಪ್ರಾತ್ಯಕ್ಷಿಕೆಯ ಮೂಲಕ ಮಾಹಿತಿ ನೀಡಿದರು.

ಸೆಸ್ಕ್ ತರಬೇತಿ ಶಾಖೆಯ ಉಪ ಪ್ರಧಾನ ವ್ಯವಸ್ಥಾಪಕರಾದ ಎಂ.ವೈ. ಹೇಮಾ ಅವರು ಮಾತನಾಡಿ, ಅಪಘಾತಗಳು ಸಂಭವಿಸಿದ ಬಳಿಕ ಪರಿಹಾರ ಕಂಡುಕೊಳ್ಳುವುದಕ್ಕಿಂತ, ಅಪಘಾತಗಳು ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸುವುದು ಅತೀ ಮುಖ್ಯ. ಈ ತತ್ವವನ್ನು ಪ್ರತಿಯೊಬ್ಬರೂ ತಮ್ಮ ಕಾರ್ಯವೈಖರಿಯಲ್ಲಿ ಅಳವಡಿಸಿಕೊಳ್ಳಬೇಕಿದೆ. ವಿದ್ಯುತ್ ಕಾಮಗಾರಿಗಳ ಸಂದರ್ಭದಲ್ಲಿ ವೇಗಕ್ಕಿಂತಲೂ ಸುರಕ್ಷತೆಗೆ ಆದ್ಯತೆ ನೀಡಿ, ಅಗತ್ಯ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದರು. ಅದೇ ರೀತಿಯಲ್ಲಿ ಅಂದಾಜು ಪಟ್ಟಿಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಅಂದಾಜು ಪಟ್ಟಿ ಪ್ರಮಾಣಕ್ಕಿಂತ ನಿಖರತೆಗೆ ಹೆಚ್ಚಿನ ಮಹತ್ವ ನೀಡಬೇಕಿದೆ. ಅಂದಾಜು ಪಟ್ಟಿ ರೂಪಿಸುವಾಗ ಸಣ್ಣ ವ್ಯತ್ಯಾಸವಾದರೂ ನಿಗಮಕ್ಕೆ ಕೋಟ್ಯಂತರ ರೂ.ಗಳ ವ್ಯತ್ಯಾಸ ಉಂಟಾಗಲಿದೆ, ಹೀಗಾಗಿ ಇದನ್ನು ಪರಿಶೀಲಿಸುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಸೆಸ್ಕ್ ತರಬೇತಿ ಶಾಖೆಯ ಸಹಾಯಕ ಪ್ರಧಾನ ವ್ಯವಸ್ಥಾಪಕಿ ಎನ್.ಜ್ಯೋತಿ ಇನ್ನಿತರರು ಉಪಸ್ಥಿತರಿದ್ದರು.

## ನಟ ಚೇತನ್ ಅಹಿಂಸಾ ಹೇಳಿಕೆ । 'ಸಮ ಸಮಾಜಕ್ಕಾಗಿ ಸಮಾನತೆ' ರಾಜಕೀಯ ಮುನ್ನೋಟ ಸಭೆ

# ಅಂಬೇಡ್ಕರ್,ಪೆರಿಯಾರ್.ಕಾನ್ಶೀರಾಂ ಸಿದ್ಧಾಂತದಡಿ ಹೊಸ ಪಕ್ಷ



ಗುಂಡ್ಲುಪೇಟೆ: ರಾಜ್ಯದ ನೆಲ, ಜಲ ಹಾಗೂ ರಾಜ್ಯದ ಹಿತಾಸಕ್ತಿಗಳ ವಿಚಾರದಲ್ಲಿ ಹಿಂದಿ ರಾಜ್ಯಗಳ ಪಕ್ಷಗಳು ಆಸಕ್ತಿ ತೋರುತ್ತಿಲ್ಲ.ಇದರಿಂದ ಕರ್ನಾಟಕ್ಕೆ ತೀವ್ರ ಅನ್ಯಾಯವಾಗುತ್ತಿದೆ. ನಮ್ಮ ರಾಜ್ಯದ ರಾಜಕಾರಣದಲ್ಲಿ ರಾಷ್ಟ್ರೀಯ ಪಕ್ಷಗಳ ಪ್ರಾಬಲ್ಯ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ರಾಜ್ಯದ ಜನರ ಹಿತಾಸಕ್ತಿಗಾಗಿ ಹೊಸ ಪ್ರಾದೇಶಿಕ ಪಕ್ಷದ ಅಗತ್ಯವಿದೆ ಎಂದು ನಟ ಚೇತನ್ ಅಹಿಂಸಾ ಹೇಳಿದರು.

ಪಟ್ಟಣದ ಹೊಸ ಪ್ರವಾಸಿ ಮಂದಿರದಲ್ಲಿ ನಡೆದ 'ಸಮ ಸಮಾಜಕ್ಕಾಗಿ ಸಮಾನತೆ' ರಾಜಕೀಯ ಮುನ್ನೋಟ ಸಭೆಯಲ್ಲಿ ಮಾತನಾಡುತ್ತಿದ್ದ ಅವರು, ಡಾ. ಬಿ.ಆರ್. ಅಂಬೇಡ್ಕರ್, ತಂದೆ ಪೆರಿಯಾರ್ ಹಾಗೂ ಕಾನ್ಶೀರಾಂ ಅವರ ವಿಚಾರಧಾರೆ ಮತ್ತು ಸಿದ್ಧಾಂತಗಳನ್ನು ಆಧಾರವಾಗಿಟ್ಟುಕೊಂಡು ಸಾಮಾಜಿಕ ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಸಂವಿಧಾನದ ಆಶಯಗಳಿಗಾಗಿ ಹೊಸ ರಾಜಕೀಯ ಚಳವಳಿ ರೂಪಿಸುವ ಅಗತ್ಯವಿದೆ ಎಂದರು. ಜಾತಿ, ಧರ್ಮ, ಲಿಂಗ ಹಾಗೂ ಆರ್ಥಿಕ ಅಸಮಾನತೆಗಳಿಂದ ಮುಕ್ತವಾದ ಸಮಾಜ ನಿರ್ಮಾಣವಾಗಬೇಕು. ಪ್ರತಿಯೊಬ್ಬರಿಗೂ ಸಮಾನ ಹಕ್ಕು, ಅವಕಾಶ ಹಾಗೂ ಗೌರವ ದೊರೆಯಬೇಕು. ಸಂವಿಧಾನದ ಆಶಯಗಳನ್ನು ಜನರ ಬದುಕಿನಲ್ಲಿ ಅನುಷ್ಠಾನಗೊಳಿಸಲು ಸಂಘಟಿತ ಹೋರಾಟ ಅಗತ್ಯವಾಗಿದೆ. ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯ ಮತ್ತು ಸಂವಿಧಾನಿಕ ಮೌಲ್ಯಗಳು, ಪೆರಿಯಾರ್ ಅವರ ಸ್ವಾಭಿಮಾನ ಹಾಗೂ ವೈಚಾರಿಕ ಚಿಂತನೆ ಮತ್ತು ಕಾನ್ಶೀರಾಂ ಅವರ ಸಂಘಟನಾ ರಾಜಕಾರಣದ ಆಶಯಗಳನ್ನು ಮುಂದಿಟ್ಟುಕೊಂಡು ರಾಜ್ಯದಲ್ಲಿ ಹೊಸ ರಾಜಕೀಯ ಶಕ್ತಿಯನ್ನು ಕಟ್ಟುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ರಾಜ್ಯದ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಹಾಗೂ ಶೋಷಿತ, ಹಿಂದುಳಿದ ಮತ್ತು ಅವಕಾಶ ವಂಚಿತ ವರ್ಗಗಳ ಪರವಾಗಿ ಧ್ವನಿ ಎತ್ತುವ ಹೊಸ ಪ್ರಾದೇಶಿಕ ಪಕ್ಷವನ್ನು ಸ್ಥಾಪಿಸುವ ಚಿಂತನೆ ನಡೆಯುತ್ತಿದೆ. ಪಕ್ಷದ ಸಿದ್ಧಾಂತ, ಚಿಹ್ನೆ, ಸಂಘಟನೆಯ ರೂಪುರೇಷೆಗಳನ್ನು ಮುಂದಿನ ದಿನಗಳಲ್ಲಿ ಅಂತಿಮಗೊಳಿಸಲಾಗುವುದು

ಈ ಹಿನ್ನೆಲೆಯಲ್ಲಿ 2027ರ ಜನವರಿಯಲ್ಲಿ ಹುಬ್ಬಳ್ಳಿಯಲ್ಲಿ ರಾಜ್ಯಮಟ್ಟದ ಬೃಹತ್ ಸಮಾವೇಶ ಆಯೋಜಿಸಲು ಉದ್ದೇಶಿಸಲಾಗಿದೆ. ಸಮಾವೇಶದಲ್ಲಿ ಹೊಸ ಪ್ರಾದೇಶಿಕ ಪಕ್ಷದ ಸಂಘಟನೆ, ಸಿದ್ಧಾಂತ, ಪಕ್ಷದ ಚಿಹ್ನೆ ಹಾಗೂ ಮುಂದಿನ ರಾಜಕೀಯ ಕಾರ್ಯತಂತ್ರದ ಕುರಿತು ಮಹತ್ವದ ಘೋಷಣೆ ಮಾಡುವ ನಿರೀಕ್ಷೆಯಿದೆ. ಯುವಕರು, ಸಾಮಾಜಿಕ ಕಾರ್ಯಕರ್ತರು ಹಾಗೂ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಪರವಾಗಿರುವವರು ಹೆಚ್ಚಿನ ಸಂಖ್ಯೆಯಲ್ಲಿ ಸಂಘಟಿತರಾಗಿ ಹೊಸ ರಾಜಕೀಯ ಪರ್ಯಾಯ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಕರೆ ನೀಡಲಾಯಿತು. ಅರ್. ಸೋಮಣ್ಣ, ಮುತ್ತಣ್ಣ, ಗೋವಿಂದ ನಾಯಕ್, ಅಬ್ದುಲ್ ಮಾಲಿಕ್, ರಾಜೇಂದ್ರ ಎಸ್. ಎಂ., ನಾಗರಾಜ್ ಮದ್ದಯ್ಯನಹುಂಡಿ, ರವೀಶ್ ಬೆಳವಾಡಿ, ಗಿರೀಶ್, ಪುಟ್ಟ ಚನ್ನವಡೆಯನಪುರ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು, ಸಾಮಾಜಿಕ ಕಾರ್ಯಕರ್ತರು, ಯುವಕರು ಉಪಸ್ಥಿತರಿದ್ದರು.

# ಭಾವೈಕ್ಯತೆ ಕದಡುವ ಕೆಲಸ ಬೇಡ: ಇಕ್ಬಾಲ್ ಎಚ್ಚರಿಕೆ

ಮೈಸೂರು: ನರಸಿಂಹ ರಾಜಕ್ಷೇತ್ರದಲ್ಲಿ ಹಿಂದೂ–ಮುಸ್ಲಿಂ ಸಮುದಾಯ ಅಣ್ಣ–ತಮ್ಮಂದಿರಂತೆ ಸಹಭಾಳ್ವೆಯಿಂದ ಬದುಕುತ್ತಿದ್ದು ಇಲ್ಲಿ ಸಮಾಜದ ಸ್ವಾಸ್ಥ್ಯ ಕದಡುವ ಕೆಲಸ ಬೇಡ ಎಂದು ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಇಕ್ಬಾಲ್ ಎಚ್ಚರಿಸಿದರು.

ಮೈಸೂರಿನಲ್ಲಿ ಹಿಂದೂಪರ ಕಾರ್ಯಕರ್ತ ಪುನೀತ್ ಕೆರೆಹಳ್ಳಿ ಪ್ರತಿಭಟನೆ ವೇಳೆ ಸ್ಥಳೀಯ ಶಾಸಕ ತನ್ವೀರ್ ಸೇಠ್ ಕುರಿತು ಹೇಳಿಕೆ ಕುರಿತು ಪ್ರತಿಕ್ರಯಿಸಿದ ಅವರು, ಶಾಸಕರ ಸ್ಥಾನಕ್ಕೆ ಚ್ಯುತಿ ತರುವ ನಿಟ್ಟಿನಲ್ಲಿ ಮಾತನಾಡುವುದು ಸರಿಯಲ್ಲ. ಅವರ ಬಗ್ಗೆ ಮಾತನಾಡುವ ಯೋಗ್ಯತೆ ಪುನೀತ್ ಕೆರೆಹಳ್ಳಿಗೆ ಇಲ್ಲ. ಅವರಿಗೆ ಕರೆ ಮಾಡಿ ಸವಾಲು ಹಾಕಿದ ವ್ಯಕ್ತಿ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲಿ. ಅದನ್ನು ಬಿಟ್ಟು ಜನಪ್ರತಿನಿಧಿಗಳು, ಅಧಿಕಾರಿಗಳನ್ನು ಏಕವಚನದಲ್ಲಿ ನಿಂದಿಸಿ ಈ ಭಾಗದಲ್ಲಿ ಶಾಂತಿ ಕದಡುವ ಕೆಲಸ ಯಾರು ಸಹ ಮಾಡಬಾರದು. ಪುನೀತ್ ಕೆರೆಹಳ್ಳಿ ಓರ್ವ ಬ್ಲಾಕ್ ಮೇಲರ್ ಆಗಿದ್ದು, ಆತನಿಂದ ನೊಂದವರು ಹೀಗೆ ಕರೆ ಮಾಡಿರಬಹುದು. ಅದನ್ನು ಕಾನೂನು ಚೌಕಟ್ಟಿನಲ್ಲಿ ಪೊಲೀಸರು ಕ್ರಮ ಜರುಗಿಸುತ್ತಾರೆ. ಹೀಗಿರುವಾಗಿ ಶಾಸಕರನ್ನು ಮತ್ತೊಮ್ಮೆ ನಿಂದಿಸಿದರೆ ಪುನೀತ್ ವಿರುದ್ಧವೇ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು. ಕಾಂಗ್ರೆಸ್ ಮುಖಂಡ ಅಫ್ರೋಜ್ ಇದ್ದರು.

# ಹನೂರು ಶೂಟೌಟ್ ಪ್ರಕರಣ: ಸಿಬಿಐ ತನಿಖೆಗೆ ವಹಿಸಿ ಅಧ್ಯಕ್ಷ ಕೆ.ವೀರಭದ್ರಸ್ವಾಮಿ

**ಚಾಮರಾಜನಗರ:** ಹನೂರು ಶೂಟೌಟ್ ಪ್ರಕರಣದ ಸತ್ಯಾಸತ್ಯತೆ ಹೊರಬರಲು ಸಿಬಿಐ ತನಿಖೆಗೆ ವಹಿಸಬೇಕು ಎಂದು ಕರ್ನಾಟಕ ಅಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಕೆ.ವೀರಭದ್ರಸ್ವಾಮಿ ಆಗ್ರಹಿಸಿದರು.

ಜಿಲ್ಲೆಯ ಹನೂರು ತಾಲ್ಲೂಕಿನ ಕಾವೇರಿ ವನ್ಯಜೀವಿ ಧಾಮ ವ್ಯಾಪ್ತಿಯಲ್ಲಿ ನಡೆದ ಶೂಟೌಟ್ ಪ್ರಕರಣದಲ್ಲಿ ಮೂವರು ಮೃತಪಟ್ಟಿರುವ ಘಟನೆ ಅತ್ಯಂತ ಗಂಭೀರವಾಗಿದೆ. ಈ ಘಟನೆಯ ಬಗ್ಗೆ ಸರ್ಕಾರದ ಅಧಿಕೃತ ಹೇಳಿಕೆ ಹಾಗೂ ಮೃತರ ಕುಟುಂಬಸ್ಥರು ಮತ್ತು ಸ್ಥಳೀಯರ ಹೇಳಿಕೆಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತಿರುವ ಹಿನ್ನೆಲೆಯಲ್ಲಿ ಸಂಪೂರ್ಣ ಸತ್ಯಾಸತ್ಯತೆ ಸಾರ್ವಜನಿಕರಿಗೆ ತಿಳಿಯಬೇಕಾಗಿದೆ. ಈ ನಿಟ್ಟಿನಲ್ಲಿ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ತನಿಖೆಯಲ್ಲಿ ಘಟನೆ ನಡೆದ ಸ್ಥಳದ ಸಂಪೂರ್ಣ ಪರಿಶೀಲನೆ, ಬಳಸಲಾದ ಶಸ್ತ್ರಾಸ್ತ್ರಗಳು ಮತ್ತು ಗುಂಡುಗಳ ವೈಜ್ಞಾನಿಕ ಪರಿಶೀಲನೆ, ಮರಣೋತ್ತರ ಪರೀಕ್ಷೆ ಹಾಗೂ ಫಾರೆನ್ಸಿಕ್ ವರದಿಗಳ ಪರಿಶೀಲನೆ, ಅರಣ್ಯ ಸಿಬ್ಬಂದಿಯ ಹೇಳಿಕೆಗಳು, ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆಗಳು ಮತ್ತು ಘಟನೆಯ ಸಂಪೂರ್ಣ ಹಿನ್ನೆಲೆಯನ್ನು ಪರಿಶೀಲಿಸಬೇಕು. ಅರಣ್ಯ ಸಿಬ್ಬಂದಿ ಆತ್ಮರಕ್ಷಣೆಗಾಗಿ ಗುಂಡು ಹಾರಿಸಿದ್ದರೆ ಅದರ ಸಂಪೂರ್ಣ ಸತ್ಯವೂ ತನಿಖೆಯಿಂದ ಹೊರಬರಬೇಕು. ಅದೇ ರೀತಿ ಯಾವುದೇ ನಿಯಮ ಉಲ್ಲಂಘನೆ ಅಥವಾ ಅಧಿಕಾರದ ದುರುಪಯೋಗ ನಡೆದಿದ್ದರೆ ಸಂಬಂಧಪಟ್ಟವರ ವಿರುದ್ಧ ಕಾನೂನುಬದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.



ಈ ಪ್ರಕರಣದಲ್ಲಿ ತಪ್ಪಿತಸ್ಥರನ್ನು ರಕ್ಷಿಸುವುದು ಅಥವಾ ನಿರಪರಾಧಿಗಳನ್ನು ಆರೋಪಿಗಳನ್ನಾಗಿ ಮಾಡುವುದನ್ನು ನಾವು ಒಪ್ಪುವುದಿಲ್ಲ. ಹಾಗೂ 8 ಕಳ್ಳ ಬೇಟೆ ತಡೆಯುವ ಶಿಬಿರಗಳು ಮತ್ತು 10 ವಸತಿಗೃಹಗಳ ಧ್ವಂಸವಾಗಿರುವುದರ ತನಿಖೆಗೆ ರಾಷ್ಟ್ರೀಯ ತನಿಖಾ ದಳದಿಂದ ತನಿಖೆ ಮಾಡಿಸಬೇಕು ಧ್ವಂಶವಾಗಿರುವ ಸ್ಥಳದಿಂದ 60 ರಿಂದ 70 ಕಿಲೋ ಮೀಟರ್ ಅಂತರದಲ್ಲಿ ಮೈಸೂರಿನ ಅರಮನೆ, ಪಾರಂಪರಿಕ ಕಟ್ಟಡಗಳು ಹಾಗೂ ಡ್ಯಾಮ್‌ಗಳು ಇದ್ದು ಅನಾವುತವಾಗುವ ಸಂಭವ ಇತ್ತು ಆದ್ದರಿಂದ ಸತ್ಯ ಹೊರಬಂದು, ನ್ಯಾಯ ಸಿಗುವುದು ನಮ್ಮ ಪ್ರಮುಖ ಬೇಡಿಕೆಯಾಗಿದೆ ಎಂದರು.

ಹನೂರು ಶೂಟೌಟ್ ಪ್ರಕರಣದ ಬಗ್ಗೆ ನಿಷ್ಪಕ್ಷಪಾತ ಹಾಗೂ ಪಾರದರ್ಶಕ ತನಿಖೆ ಯಾಗಲೂ ಸಿಬಿಐ ಗೆ ವಹಿಸಿ ಹಾಗೂ 8 ಕಳ್ಳ ಬೇಟೆ, ತಡೆಯುವ ಶಿಬಿರ ಮತ್ತು 10 ವಸತಿಗೃಹಗಳ ಧ್ವಂಸ ಮಾಡಿರುವುದನ್ನೂ ರಾಷ್ಟ್ರೀಯ ತನಿಖಾ ದಳಕ್ಕೆ ವಹಿಸಬೇಕು. ತಪ್ಪಿತಸ್ತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ತನಿಖೆಯ ಅಂತಿಮ ವರದಿಯನ್ನು ಸಾರ್ವಜನಿಕರಿಗೆ ಬಹಿರಂಗಪಡಿಸಬೇಕು. ಅರಣ್ಯ ಇಲಾಖೆಯಲ್ಲಿ ಪಾರದರ್ಶಕತೆಯನ್ನು ಕಾಪಾಡಲು ಸಿಬ್ಬಂದಿಗಳಿಗೆ ಬಾಡಿ ಕ್ಯಾಮರಾ ಹಾಗೂ ಆಧುನಿಕ ಶಸ್ತ್ರಾಸ್ತ್ರ ಗಳನ್ನು ಬಳಸಬೇಕು ಎಂದು ಒತ್ತಾಯಿಸಿದರು.

ಗೋಷ್ಠಿಯಲ್ಲಿ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಮಲ್ಲೇಶ್, ಕಾನೂನು ಸಲಹೆಗಾರ ಜಿ.ಮಹಾದೇವಸ್ವಾಮಿ, ಸಂಘಟನಾ ಕಾರ್ಯದರ್ಶಿ ಗಿರೀಶ್, ಕಾರ್ಯದರ್ಶಿ ವಿ.ವೀರಭದ್ರಸ್ವಾಮಿ, ಚಂದ್ರು, ವೇದವಲ್ಲಭ ಹಾಜರಿದ್ದರು.

## ವಿಭಾಗ ಒಂದರಲ್ಲೇ 300ಕ್ಕೂ ಹೆಚ್ಚು ಪ್ರಕರಣಗಳು ದಾಖಲು

**2011ರಿಂದ ಇಲ್ಲಿಯವರೆಗೆ ಚಾಮರಾಜನಗರ ಅರಣ್ಯ ವಿಭಾಗ ಒಂದರಲ್ಲೇ 300ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ ಮತ್ತು 66 ಬಾರಿ ಗುಂಡಿನ ಚಕಮಕಿ ನಡೆದಿರುವುದಕ್ಕೆ ಅರಣ್ಯ ಇಲಾಖೆಯ ಏನು ಕ್ರಮ ಕೈಗೊಂಡಿದೆ ಎಂಬುದರ ಮಾಹಿತಿ ತಿಳಿಸಬೇಕು ಕಳ್ಳಬೇಟೆ ಸಂಪೂರ್ಣ ತಡೆಗಟ್ಟಲು ಂಟಣು-ಕಂಚಿಛಿಘುಟಿರ ಅಚಿಟಃಿ ಮತ್ತು ರಾತ್ರಿ ಗಸ್ತು ಹೆಚ್ಚಿಸಬೇಕು. ಖಾಲಿ ಇರುವ ಅರಣ್ಯ ಸಿಬ್ಬಂದಿ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು. ಬಂಡೀಪುರದಲ್ಲಿ ಖಖಿಕಈ (ಖಠಿಜಛಿಚಿಟ ಖಿರಜಡಿ ಕಡಿಂಣಜಛಿಣುಂಟಿ ಈಂಡಿಛಿಜ) ಅನ್ನು ಇನ್ನಷ್ಟು ಬಲಪಡಿಸಬೇಕು. ಕಾಡ್ಗಿಚ್ಚು ತಡೆಗೆ ಈಬಡಿಜ ಐಟಿಛ, ನೀರಿನ ಮೂಲಗಳು ಮತ್ತು ಮುಂಚಿತ ಎಚ್ಚರಿಕಾ ವ್ಯವಸ್ಥೆ ಬಲಪಡಿಸಬೇಕು ಎಂದು ಆಗ್ರಹಿಸಿದರು.**

# ಸುಳ್ಳು ಸುದ್ದಿ, ಪ್ರಚೋದನಕಾರಿ ಪೋಸ್ಟ್‌ಗಳಿಗೆ ಕಡಿವಾಣ: ಚಾಮರಾಜನಗರ ಪೊಲೀಸರ ಎಚ್ಚರಿಕೆ

**ಚಾಮರಾಜನಗರ:** ಹನೂರು ಪೊಲೀಸ್ ಠಾಣಾ ವ್ಯಾಪ್ತಿಯ ಹೊಳೆಮುರಿ ದೊಡ್ಡಿ ಮತ್ತು ಕರಡಿಗುಡ್ಡ ಘಟನೆಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ, ಆಡಿಯೋ ಹಾಗೂ ಪ್ರಚೋದನಕಾರಿ ಹೇಳಿಕೆಗಳನ್ನು ಹರಿಬಿಡುವವರಿಗೆ ಚಾಮರಾಜನಗರ ಜಿಲ್ಲಾ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.



ಆ.14 ಮತ್ತು 15ರಂದು ನಡೆದ ಘಟನೆಗೆ ಸಂಬಂಧಿಸಿದಂತೆ ಈಗಾಗಲೇ ಪ್ರಕರಣ ದಾಖಲಿಸಿ, ಸರ್ಕಾರದ ಆದೇಶದಂತೆ ತನಿಖೆ ನಡೆಸಲಾಗುತ್ತಿದೆ. ಈ ನಡುವೆ ಕೆಲವರು ಘಟನೆ ಕುರಿತು ಪರ ಹಾಗೂ ವಿರೋಧವಾಗಿ ಪ್ರಚೋದನಕಾರಿ ಪೋಸ್ಟ್‌ಗಳು ಮತ್ತು ಸುಳ್ಳು ಸುದ್ದಿಗಳನ್ನು ಹರಡುತ್ತಿರುವುದು ಪೊಲೀಸರ ಗಮನಕ್ಕೆ ಬಂದಿದೆ.

ಇಂತಹ ಪೋಸ್ಟ್‌ಗಳಿಂದ ಜನರಲ್ಲಿ ದ್ವೇಷ ಹಾಗೂ ಅಶಾಂತಿ ಉಂಟಾಗುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ಪೊಲೀಸ್ ಕಚೇರಿಯ ಸೋಶಿಯಲ್ ಮೀಡಿಯಾ ಮಾನಿಟರಿಂಗ್ ಸೆಲ್ ಮೂಲಕ ಸಾಮಾಜಿಕ ಜಾಲತಾಣಗಳ ಮೇಲೆ ನಿರಂತರ ನಿಗಾ ವಹಿಸಲಾಗಿದೆ.

ಸುಳ್ಳು ಸುದ್ದಿ, ಪ್ರಚೋದನಕಾರಿ ಆಡಿಯೋ ಅಥವಾ ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆ ತರುವಂತಹ ಪೋಸ್ಟ್‌ಗಳನ್ನು ಹಾಕುವವರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು. ಅಗತ್ಯವಿದ್ದರೆ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು.ಎಂ ಎಚ್ಚರಿಕೆ ನೀಡಿದ್ದಾರೆ.

# ಪರಿಷ್ಕೃತ ಕನಿಷ್ಠ ವೇತನ ಜಾರಿಗೆ ಆಗ್ರಹಿಸಿ ಸೆ.2 ರಿಂದ ರಾಜ್ಯ ಮಟ್ಟದ ಅಹೋರಾತ್ರಿ ಪ್ರತಿಭಟನಾ ಧರಣಿ




**ಚಾಮರಾಜನಗರ:** ರಾಜ್ಯ ಸರ್ಕಾರ ಉದ್ಯಮಿಗಳಿಗೆ ಮಣಿಯದೇ ಪರಿಷ್ಕೃತ ಕನಿಷ್ಠ ವೇತನ ಕೂಡಲೇ ಜಾರಿಗೊಳಿಸುವಂತೆ ಒತ್ತಾಯಿಸಿ ಸೆ.2 ರಿಂದ ರಾಜ್ಯಮಟ್ಟದ ಅಹೋರಾತ್ರಿ ಪ್ರತಿಭಟನಾ ಧರಣಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಎಐಯುಟಿಯುಸಿ ರಾಜ್ಯ ಉಪಾಧ್ಯಕ್ಷ ಚಂದ್ರಶೇಖರ್ ಮೇಟಿ ತಿಳಿಸಿದರು.

ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ರಾಜ್ಯ ಮಟ್ಟದ ಅಹೋರಾತ್ರಿ ಧರಣಿಯನ್ನು ಹಮ್ಮಿಕೊಳ್ಳಲಾಗಿದೆ. ದಿನಾಂಕ 22.5.2026 ರ ಪರಿಷ್ಕೃತ ಕನಿಷ್ಠ ವೇತನ ಅಧಿಸೂಚನೆಯನ್ನು ಯಾವುದೇ ವಿಳಂಬವಿಲ್ಲದೆ ತಕ್ಷಣವೇ ಜಾರಿಗೊಳಿಸಬೇಕು. ಕೇವಲ ಜಾರಿಯನ್ನು ತಡೆಯುವ ಉದ್ದೇಶದಿಂದ ರಚಿಸಲಾದ ಸಚಿವ ಸಂಪುಟ ಸಮಿತಿಯನ್ನು ತಕ್ಷಣವೇ ರದ್ದುಗೊಳಿಸರ್ಬೇಕು. ಬಾಕಿ ಇರುವ ವೇತನ ವ್ಯತ್ಯಾಸವನ್ನು ತಕ್ಷಣವೇ ಕಾರ್ಮಿಕರಿಗೆ ಪಾವತಿಸಬೇಕು ಎಂಬ ಪ್ರಮುಖ ಆಗ್ರಹಗಳೊಂದಿಗೆ ಧರಣಿ ಹಮ್ಮಿಕೊಳ್ಳಲಾಗಿದೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕಾರ್ಮಿಕರ ಸುದೀರ್ಘ ಹೋರಾಟದ ಫಲವಾಗಿ ಹೊರಡಿಸಲಾದ ಪರಿಷ್ಕೃತ ಕನಿಷ್ಠ ವೇತನ ಅಧಿಸೂಚನೆಯನ್ನು ಜಾರಿಗೊಳಿಸದೆ, ಉದ್ಯಮಪತಿಗಳ ಒತ್ತಡಕ್ಕೆ ಮಣಿದು ಪುನಃ ಪರಿಶೀಲನಾ ಸಮಿತಿ ರಚಿಸಿರುವ ಸರ್ಕಾರದ ಕಾರ್ಮಿಕ ವಿರೋಧಿ ಧೋರಣೆಯನ್ನು ಎಐಯುಟಿಯುಸಿ ಕರ್ನಾಟಕ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸುತ್ತದೆ. ಈ ತಡೆಯಾಜ್ಞೆ ಹಾಗೂ ವಿಳಂಬ ನೀತಿಯನ್ನು ವಿರೋಧಿಸಿ, ಪರಿಷ್ಕೃತ ವೇತನ ತಕ್ಷಣ ಜಾರಿಗೊಳಿಸುವಂತೆ ಒತ್ತಾಯಿಸಿ ಸೆಪ್ಟೆಂಬರ್ 2 ರಿಂದ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಮಟ್ಟದ ಬೃಹತ್ ಅಹೋರಾತ್ರಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಎಲ್ಲಾ ಜಿಲ್ಲೆ ಗಳಿಂದ ಸಹಸ್ರಾರು ಕಾರ್ಮಿಕರು ಮತ್ತು ನೌಕರರು ಈ ಹೋರಾಟದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಗೋಷ್ಠಿಯಲ್ಲಿ ಎಐಯುಟಿಯುಸಿ ಉಪಾಧ್ಯಕ್ಷರಾದ ಉಮಾದೇವಿ, ಬಣ್ಣಾರಿ ಅಮ್ಮಾನ್ ಕಾರ್ಮಿಕರ ಸಂಘದ ಅಧ್ಯಕ್ಷ ಭೃಂಗೇಶ್, ದಡದಹಳ್ಳಿ ಕುಮಾರ್, ಸೋಮವಾರಪೇಟೆ ಕುಮಾರ್ ಹಾಜರಿದ್ದರು

# ವಚನ ಮಾಂಗಲ್ಯದ ಮೂಲಕ ಸರಳ ಜೀವನ

## ಸುತ್ತೂರು ಶ್ರೀಕ್ಷೇತ್ರದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಹೇಳಿಕೆ

**ಗುಂಡ್ಲುಪೇಟೆ:** ವಚನ ಮಾಂಗಲ್ಯದ ಮೂಲಕ ಸರಳ ಜೀವನದ ಸಂದೇಶ ಸಾರುವುದರ ಜತೆಗೆ ಪರಿಸರ ಕಾಳಜಿ ಸೇರಿದಂತೆ ಹಲವು ಸಮಾಜಮುಖಿ ಕಾರ್ಯಗಳನ್ನು ನಡೆಸುತ್ತಿರುವ ಮೂಡುಗೂರು ಇಮ್ಮಡಿ ಉದ್ದಾನಸ್ವಾಮೀಜಿಯವರು ಜನಮೆಚ್ಚುಗೆಗೆ ಪಾತ್ರರಾಗಿದ್ದಾರೆ ಎಂದು ಸುತ್ತೂರು ಶ್ರೀಕ್ಷೇತ್ರದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಹೇಳಿದರು.

ತಾಲೂಕಿನ ಮೂಡುಗೂರು ಗ್ರಾಮದಲ್ಲಿ ಶ್ರೀ ಉದ್ದಾನೇಶ್ವರ ವಿರಕ್ತ ಮಠದ ವತಿಯಿಂದ ನಿರ್ಮಿಸಿರುವ 'ಚಿನ್ಮಯಜ್ಞಾನಿ ಚನ್ನಬಸವಣ್ಣನವರ ದಾಸೋಹ ಭವನ' ಲೋಕಾರ್ಪಣೆ ಕಾರ್ಯಕ್ರಮದ ಅಂಗವಾಗಿ ಬುಧವಾರ ನಡೆದ ಶಿವಾನುಭವ ಸಮ್ಮೇಳನದ ಸಾನಿಧ್ಯ ವಹಿಸಿ ಮಾತನಾಡಿದರು.

ಜ್ಞಾನಾರ್ಜನೆಯ ಜತೆಗೆ ಶಿಸ್ತು ಮತ್ತು ಸಂಸ್ಕಾರವನ್ನು ಕಲಿಸುವುದರಿಂದ ವ್ಯಕ್ತಿಯು ತನ್ನ ಭೌಗೋಳಿಕ ವ್ಯಾಪ್ತಿಯನ್ನು ಮೀರಿ ಬೆಳೆಯಲು ಸಾಧ್ಯವಾಗುತ್ತದೆ. ಚಾಮರಾಜನಗರದಿಂದ ಬೀದರ್‌ವರೆಗೆ ಹಲವು ಮಠಗಳು ಇಂತಹ ಸಮಾಜಮುಖಿ ಕಾರ್ಯಗಳನ್ನು ನಡೆಸುತ್ತಿವೆ. ಇದರಿಂದ ರಾಜ್ಯದ ಪ್ರತಿಭಾವಂತರು ದೇಶ-ವಿದೇಶಗಳಲ್ಲಿ ಉದ್ಯೋಗ ಪಡೆಯಲು ಹಾಗೂ ಉನ್ನತ ಹುದ್ದೆಗಳನ್ನು ಅಲಂಕರಿಸಲು ಸಾಧ್ಯವಾಗಿದೆ ಎಂದರು.

ತಪಸ್ವಿಗಳಾದ ಉದ್ದಾನೇಶ್ವರರಿಂದ ಸ್ಥಾಪಿತವಾದ ಮೂಡುಗೂರು ಮಠದಲ್ಲಿ ಧರ್ಮ, ಸಂಸ್ಕಾರ, ಇಷ್ಟಲಿಂಗ ಪೂಜೆ ಸೇರಿದಂತೆ ಹಲವು ಸಮಾಜಮುಖಿ ಕಾರ್ಯಗಳು ಚಿನ್ಮಯಜ್ಞಾನಿ ಚನ್ನಬಸವಣ್ಣನವರ ದಾಸೋಹ ಭವನದ ಮೂಲಕ ನಡೆಯಲಿವೆ. ಮೂಡುಗೂರು ಇತಿಹಾಸದಲ್ಲಿ ಈ ಕಾರ್ಯಕ್ರಮ ಸ್ಮರಣೀಯವಾಗಿದ್ದು, ಭಕ್ತರು ಶ್ರದ್ಧೆ ಮತ್ತು ಆಸಕ್ತಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿರುವುದು ಸಂತಸ ತಂದಿದೆ ಎಂದು ಹೇಳಿದರು.

ಗುಂಡ್ಲುಪೇಟೆ ತಾಲೂಕು ಭಕ್ತಿಪಾರಮ್ಯಕ್ಕೆ ಹೆಸರುವಾಸಿಯಾಗಿದ್ದು, ಮಠಗಳ ಧಾರ್ಮಿಕ ಹಾಗೂ ಸಮಾಜಮುಖಿ ಕಾರ್ಯಗಳಿಗೆ ಇಲ್ಲಿನ ಜನರು ಸದಾ ಉದಾರವಾಗಿ ಸ್ಪಂದಿಸುತ್ತಾರೆ. ಮಠಗಳಿಗೆ ಕೇಳದೆಯೇ ನೆರವು ನೀಡುವ ತಾಲೂಕು ಎಂಬ ಹೆಮ್ಮೆ ಇಲ್ಲಿನ ಜನರದ್ದಾಗಿದೆ ಎಂದರು.



### ಶ್ರೀಗಳ ಸಮಾಜಮುಖಿ ಕಾರ್ಯ ಶ್ಲಾಘನೀಯ

**ಭವನವನ್ನು ಉದ್ಘಾಟಿಸಿದ ಶಾಸಕ ಎಚ್.ಎಂ. ಗಣೇಶ್‌ಪ್ರಸಾದ್ ಮಾತನಾಡಿ, ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳ ಜತೆಗೆ ಪರಿಸರ ಕಾಳಜಿಯಂತಹ ಜವಾಬ್ದಾರಿಯುತ ಕಾರ್ಯಗಳನ್ನು ನಡೆಸುತ್ತಿರುವ ಮೂಡುಗೂರು ಶ್ರೀಗಳು ಕಿರಿಯ ವಯಸ್ಸಿನಲ್ಲೇ ಹಿರಿದಾದ ಸಾಧನೆ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.**

ಇಂದಿನ ದಿನಗಳಲ್ಲಿ ವಿಭಕ್ತ ಕುಟುಂಬಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಜನರಲ್ಲಿ ಒಗ್ಗಟ್ಟಿನ ಭಾವನೆ ಮೂಡಿಸುವ ಕೆಲಸವನ್ನು ಶ್ರೀಮಠ ಮಾಡುತ್ತಿದೆ. ಸ್ವಾಮೀಜಿಯವರ ಮೇಲಿನ ಅಭಿಮಾನದಿಂದ ಸಾವಿರಾರು ಜನರು ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ಸಂತಸದ ವಿಚಾರವಾಗಿದೆ ಎಂದರು.

ಚಾಮರಾಜನಗರ ಜಿಲ್ಲೆ ಸಾಂಸ್ಕೃತಿಕವಾಗಿ ಶ್ರೀಮಂತವಾಗಿದ್ದು, ಬೆಟ್ಟದಮಾದಹಳ್ಳಿ ಗ್ರಾಮಸ್ಥರು ಪ್ರದರ್ಶಿಸಿದ 'ಪ್ರಭುಲಿಂಗ ಲೀಲೆ' ನಾಟಕ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ತಾಲೂಕಿನ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಜನರು ಸದಾ ಸಹಕಾರ, ಪ್ರೀತಿ ಮತ್ತು ವಿಶ್ವಾಸ ನೀಡಬೇಕು ಎಂದು ಮನವಿ ಮಾಡಿದರು.

ಮಾಜಿ ಶಾಸಕ ಸಿ.ಎಸ್. ನಿರಂಜನ್‌ಕುಮಾರ್, ಚಾಮುಲ್ ನಿರ್ದೇಶಕ ಎಂ.ಪಿ. ಸುನೀಲ್ ಮಾತನಾಡಿದರು. ಪಡುಗೂರು ಶಿವಲಿಂಗೇಂದ್ರಸ್ವಾಮೀಜಿ ನೇತೃತ್ವ ವಹಿಸಿದ್ದರು. ದೇವನೂರು ಮಹಾಂತಸ್ವಾಮೀಜಿ ಅಧ್ಯಕ್ಷತೆ ವಹಿಸಿ ಆಶೀರ್ವಚನ ನೀಡಿದರು. ಕನಕಪುರ ಚನ್ನಬಸವಸ್ವಾಮೀಜಿ ಸಮಾರಂಭ ಉದ್ಘಾಟಿಸಿದರು.

ಮೂಡುಗೂರು ಇಮ್ಮಡಿ ಉದ್ದಾನಸ್ವಾಮೀಜಿ, ಜಿಲ್ಲೆಯ ಹಾಗೂ ಹೊರ ಜಿಲ್ಲೆಗಳ ವಿವಿಧ ಮಠಾಧೀಶರು, ಜಂಗಮಮೂರ್ತಿಗಳು, ಜನಪ್ರತಿನಿಧಿಗಳು ಹಾಗೂ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಸೇರಿದಂತೆ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಭಕ್ತರಿಗೆ ಮಠದ ತೋಟದಲ್ಲಿ ದಾಸೋಹದ ವ್ಯವಸ್ಥೆ ಮಾಡಲಾಗಿತ್ತು.

# ಕರ್ನಾಟಕ ವಿಶ್ವರತ್ನ ಜೈಭೀಮ್ ಸಂಘಟದ ಸಭೆ

**ಚಾಮರಾಜನಗರ:** ನೊಂದ ಶೋಷಿತ ಸಮುದಾಯಗಳ ಧ್ವನಿಯಾಗಿ ಕೆಲಸ ಮಾಡುವುದೇ ಕರ್ನಾಟಕ ವಿಶ್ವರತ್ನ ಜೈಭೀಮ್ ಸಂಘಟನಾ ಸಮಿತಿಯ ಉದ್ದೇಶವಾಗಿದೆ ಎಂದು ಸಮಿತಿಯ ರಾಜ್ಯಾಧ್ಯಕ್ಷ ಡಿ.ಸಿದ್ಧಪ್ಪ ದೇವಲರಸನಹಳ್ಳಿ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಕರ್ನಾಟಕ ವಿಶ್ವರತ್ನ ಜೈಭೀಮ್ ಸಂಘಟನಾ ಸಮಿತಿ ಪದಾಧಿಕಾರಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಜಿಲ್ಲಾ ಸಮಿತಿಯ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಆದೇಶಪತ್ರ ವಿತರಿಸಿ ಮಾತನಾಡಿದರು.

ರಾಜ್ಯಾದ್ಯಂತ ದಲಿತರ ಮೇಲೆ ದೌರ್ಜನ್ಯ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿವೆ. ಅರ್ಹರಿಗೆ ಸರ್ಕಾರದ ಸೌಕರ್ಯಗಳನ್ನು ಸರಿಯಾಗಿ ತಲುಪುತ್ತಿಲ್ಲ. ಇದರಿಂದ ಅರ್ಹರಿಗೆ ಅನ್ಯಾಯವಾಗುತ್ತಿದೆ. ಆಗಾಗಿ ನೊಂದ ಶೋಷಿತ ಸಮುದಾಯಗಳ ಪರ ನಿಲ್ಲಬೇಕು. ಅವರಿಗೆ ಸರ್ಕಾರ ಸವಲತ್ತುಗಳನ್ನು ತಲುಪಿಸಬೇಕು ಎಂಬ ಉದ್ದೇಶವನ್ನಿಟ್ಟುಕೊಂಡು ಕರ್ನಾಟಕ ವಿಶ್ವರತ್ನ ಜೈಭೀಮ್ ಸಂಘಟನಾ ಸಮಿತಿಯನ್ನು ರಾಜ್ಯದಲ್ಲಿ ಅಸ್ತಿತ್ವಕ್ಕೆ ತರಲಾಗಿದ್ದು, ಗಡಿಜಿಲ್ಲೆಯಲ್ಲಿ ಚಾಮರಾಜನಗರದಲ್ಲಿ ಮೊಟ್ಟಮೊದಲಿಗೆ ಜಿಲ್ಲಾ ಸಮಿತಿ ರಚನೆ ಮಾಡಿ ಪದಾಧಿಕಾರಿಗಳ ನೇಮಕ ಮಾಡಿ ಆದೇಶ ಪತ್ರ ನೀಡಲಾಗಿದ್ದು, ನೂತನ ಪದಾಧಿಕಾರಿಗಳು ಬುದ್ಧ, ಬಸವಣ್ಣ, ಅಂಬೇಡ್ಕರ್ ಅವರ ತತ್ವ, ಸಿದ್ಧಾಂತಗಳನ್ನು ಅಳವಡಿಸಿಕೊಂಡು ಸಂಘಟನೆಯನ್ನು ಬಲಪಡಿಸುವಂತೆ ಸಲಹೆ ನೀಡಿದರು.



ಪುರ, ನಿರ್ದೇಶಕರಾಗಿ ಶಶಿಕುಮಾರ್ ಬೇಡರಪುರ, ಚಂದಯ್ಯ, ನಾಗರಾಜು ನಂಜುಂಡಸ್ವಾಮಿ, ಜಯಸ್ವಾಮಿ, ರಂಗಸ್ವಾಮಿ ರವಿಕುಮಾರ್, ಜಿಲ್ಲಾ ಮಹಿಳಾ ಅಧ್ಯಕ್ಷರಾಗಿ ಜ್ಯೋತಿ ರಾಮಸಮುದ್ರ ಅವರನ್ನು ಸಭೆಯಲ್ಲಿ ಆಯ್ಕೆ ಮಾಡಿ ನೇಮಕಾತಿ ಆದೇಶಪತ್ರ ವಿತರಿಸಲಾಯಿತು.

ರಾಜ್ಯಾ ಗೌರವಾಧ್ಯಕ್ಷ ಮಹೇಶ್ ಕೋಚನಹಳ್ಳಿ, ರಾಜ್ಯಾಧ್ಯಕ್ಷ ಡಿ.ಸಿದ್ದಪ್ಪ ದೇವಲರಸನಹಳ್ಳಿ, ರಾಜ್ಯ ಕಾರ್ಯದರ್ಶಿ ಗುರುಸ್ವಾಮಿ ಕೆ.ಎಸ್. ಕೆರಹಳ್ಳಿ, ರಾಜ್ಯ ಉಪಾಧ್ಯಕ್ಷ ರಾಜಣ್ಣ, ನಿರ್ದೇಶಕರಾದ ದೊಡ್ಡ ಕಾಯಮ್ಮ, ಕಮಲ, ಪ್ರಕಾಶ್. ಮರಿಸ್ವಾಮಿ, ಹಾಜರಿದ್ದರು.

# ಕಾವೇರಿ ನೀರು ನಿರ್ವಹಣಾ ಸಮಿತಿ ವಿರುದ್ಧ ಪ್ರತಿಭಟನೆ



**ಚಾಮರಾಜನಗರ:** ಕಾವೇರಿ ನೀರು ನಿರ್ವಹಣಾ ಸಮಿತಿಯು ಕರ್ನಾಟಕದ ಪಾಲಿಗೆ ಸತ್ತು ಹೋಗಿದೆ ಎಂದು ಆರೋಪಿಸಿ ಕರ್ನಾಟಕ ಸೇನಾಪಡೆ ವತಿಯಿಂದ ಎಳ್ಳು, ನೀರು, ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಲಾಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ್ದ ಪ್ರತಿಭಟನಾನಿರತರು ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಕಾವೇರಿ ನೀರು ನಿರ್ವಹಣಾ ಸಮಿತಿಯು ಕರ್ನಾಟಕದ ಪಾಲಿಗೆ ಸತ್ತು ಹೋಗಿದೆ ಎಂದು ಎಳ್ಳು, ನೀರು ಬಿಟ್ಟು, ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ಕರ್ನಾಟಕದ ಪಾಲಿಗೆ ಕಾವೇರಿ ನೀರು ನಿರ್ವಹಣಾ ಮಂಡಳಿ ಸತ್ತು ಹೋಗಿದೆ ಎಂದು ಎಳ್ಳು, ನೀರು ಬಿಟ್ಟು, ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಲಾಗಿದೆ. ನಿರ್ವಹಣಾ ಸಮಿತಿಯ ಒಬ್ಬ ಸದಸ್ಯರು ಕರ್ನಾಟಕಕ್ಕೆ ಭೇಟಿ ನೀಡಿ ಇಲ್ಲಿನ ಜಲಾಶಯಗಳ ಸ್ಥಿತಿಗತಿಗಳನ್ನು ಪರಿಶೀಲಿಸಿಲ್ಲ. ಅಧ್ಯಯನ ಮಾಡಿಲ್ಲ. ಕರ್ನಾಟಕದಲ್ಲಿ ಮಳೆ ಆಗಿದೆಯೋ, ಇಲ್ಲವೋ ಪರಿಶೀಲನೆ ಮಾಡಿಲ್ಲ ಅದನ್ನು ಬಿಟ್ಟು ದೆಹಲಿಯಲ್ಲಿ ಕುಳಿತು ನೀರು ಬಿಡಿ, ನೀರು ಬಿಡಿ ಎಂದರೆ ಎಲ್ಲಿಂದ ನೀರು ಬಿಡುವುದು ಎಂದು ಕಿಡಿಕಾರಿದರು.

ತಮಿಳುನಾಡಿನವರು ಕಾವೇರಿ ನೀರಿನ ವಿಚಾರದಲ್ಲಿ ಪದೇಪದೇ ಖ್ಯಾತೆ ತೆಗೆಯುವುದು ಸರಿಯಲ್ಲ. ಇದು ಮುಂದುವರೆದರೆ ಮುಂದಿನ ದಿನಗಳಲ್ಲಿ ಪುಣಜನೂರು ಗೇಟ್ ಬಂದ್ ಮಾಡಿ ತಮಿಳುನಾಡಿನ ವಾಹನ, ಉತ್ಪನ್ನ, ಸಿನಿಮಾ ಪ್ರದರ್ಶನ ತಡೆಯಬೇಕಾಗುತ್ತದೆ ಎಂದು ಎಚ್ಚರಿಸಿದರು.

ಶಾ.ಮುರಳಿ, ನಿಜಧ್ವನಿ ಗೋವಿಂದರಾಜು, ಪಣ್ಯದಹುಂಡಿ ರಾಜು, ರಾಚಪ್ಪ, ಜಗದೀಶ್, ತಾಂಡವಮೂರ್ತಿ, ಆಟೋ ಲಿಂಗರಾಜು, ನಂಜುಂಡಸ್ವಾಮಿ, ಮುತ್ತಿಗೆ ಗೋವಿಂದ ರಾಜು, ಇತರರು ಭಾಗವಹಿಸಿದ್ದರು.

# ಸರ್ವರ್ ಸಮಸ್ಯೆ ಬಗೆಹರಿಸಿ ಪಡಿತರ ವಿತರಣೆಗೆ ಅವಕಾಶ ಮಾಡುವಂತೆ ಆಹಾರ ಇಲಾಖೆ ಉಪನಿರ್ದೇಶಕರಿಗೆ ಮನವಿ



**ಚಾಮರಾಜನಗರ:** ಸರ್ವರ್ ಸಮಸ್ಯೆ ಬಗೆಹರಿಸಿ ಪಡಿತರ ವಿತರಣೆಗೆ ಅವಕಾಶ ಮಾಡಿಕೊಡುವಂತೆ ಜಿಲ್ಲಾ ಪಡಿತರ ವಿತರಕರ ಸಂಘದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಉಪನಿರ್ದೇಶಕಿ ಡಾ.ವಸುಂದರ ಹೆಗ್ಗಡೆ ಅವರಿಗೆ ಮನವಿ ಸಲ್ಲಿಸಲಾಯಿತು.

ಆಗಸ್ಟ್ 2026ರ ಮಾಹೆಯ ಪಡಿತರ ವಿತರಣೆಯು ಕೇಂದ್ರ ಸರ್ಕಾರದ ಆಗಸ್ಟ್ ಮತ್ತು ಸೆಪ್ಟೆಂಬರ್ ಎರಡು ತಿಂಗಳ ಪಡಿತರ ವಿತರಣೆ ಮಾಡಬೇಕಾಗಿರುತ್ತದೆ.

ಈ ಸಂದರ್ಭದಲ್ಲಿ ಜಿಲ್ಲಾ ಪಡಿತರ ವಿತರಕರ ಸಂಘದ ಜಿಲ್ಲಾ ಖಜಾಂಚಿ ಚೆಂಗುಮಣಿ, ಆರ್.ಎಂ.ಸಿದ್ದರಾಜು, ಕಿಟ್ಟಿ, ಹೆಗ್ಗೋಠಾರ ಮಹದೇವಸ್ವಾಮಿ, ವಿನೋದ್ ಹೊನ್ನಳ್ಳಿ, ನಂದೀಶ್ ಹೊಸಹಳ್ಳಿ ಇತರರು ಹಾಜರಿದ್ದರು.

**ಜಿಲ್ಲೆಯಿಂದ ಬಸ್ ವ್ಯವಸ್ಥೆ । ನೌಕರರ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಮನವಿ**

# 28ರಂದು ಎಸ್‌ಸಿ/ಎಸ್‌ಟಿ ಜಾಗೃತ ನೌಕರರ 6ನೇ ರಾಜ್ಯ ಮಟ್ಟದ ಐಕ್ಯತಾ ಸಮಾವೇಶ: ಸಿ.ಕೆ.ರಾಮಸ್ವಾಮಿ

**ಚಾಮರಾಜನಗರ:** ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ/ಎಸ್‌ಟಿ ನೌಕರರ ಸಮನ್ವಯ ಸಮಿತಿ ಕೇಂದ್ರ ನಮಿತಿ ಬೆಂಗಳೂರು ನೇತೃತ್ವದಲ್ಲಿ ಆ. 28 ರಂದು ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ/ಎಸ್‌ಟಿ ಜಾಗೃತ ನೌಕರರ 6ನೇ ರಾಜ್ಯ ಮಟ್ಟದ ಐಕ್ಯತಾ ಸಮಾವೇಶ ನಡೆಯಲಿದೆ ಎಂದು ಸಮಿತಿಯ ಜಿಲ್ಲಾಧ್ಯಕ್ಷ ಸಿ.ಕೆ. ರಾಮಸ್ವಾಮಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಅಂದು ಬೆಂಗಳೂರಿನ ಅರಮನೆ ಮೈದಾನದ ಗೇಟ್ ನಂ.8, ಶೃಂಗಾರ್ ಪ್ಯಾಲೇನ್‌ನಲ್ಲಿ ಬೆಳಿಗ್ಗೆ 10:30 ಗಂಟೆಗೆ ಆರಂಭವಾಗುವ ಸಮಾರಂಭದಲ್ಲಿ ದಿವ್ಯ ಸಾನಿಧ್ಯವನ್ನು ಕೊಳ್ಳೇಗಾಲ ಜೇತವನ ವಿಹಾರದ ಬೌದ್ಧ ಬಿಕ್ಕು ಮನೋರಕ್ಷಿತ ಬಂತೇಜಿ ವಹಿಸುವವರು, ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ಉಪಮುಖ್ಯಮಂತ್ರಿಗಳಾದ ಡಾ.ಜಿ.ಪರಮೇಶ್ವರ್ ಅಧ್ಯಕ್ಷತೆ ವಹಿಸುವವರು, ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಘನ ಉಪಸ್ಥಿತಿ ವಹಿಸಲಿದ್ದಾರೆ. ಸಚಿವರಾದ ಕೆ.ಚ್.ಮುನಿಯಪ್ಪ, ಸತೀಶ್ ಜಾರಕಿಹೊಳಿ, ಪ್ರಿಯಾಂಕ್‌ಖರ್ಗೆ, ಶಿವರಾಜ್ ತಂಗಡಗಿ ಪಿ.ಎಂ.ನರೇಂದ್ರಸ್ವಾಮಿ.ಬಿ. ನಾಗೇಂದ್ರ ರುದ್ರಪ್ಪ ಲಮಾಣಿ, ಕೆ.ಎಸ್. ಬಸವಂತಪ್ಪ, ಟಿ.ರಘುಮೂರ್ತಿ ಮುಖ್ಯ ಅತಿಥಿಯಾಗಿ ಭಾಗವಹಿಸುವವರು. ಈ ಕಾರ್ಯಕ್ರಮಕ್ಕೆ ಜಿಲ್ಲೆಯಿಂದ 5 ಬಸ್‌ಗಳಲ್ಲಿ ಹೊರಡಲು ವ್ಯವಸ್ಥೆ. ಮಾಡಲಾಗಿದೆ. ಚಾಮರಾಜೇಶ್ವರ ದೇವಸ್ಥಾನ ಮುಂಭಾಗ, ಹೌಸಿಂಗ್ ಬೋರ್ಡ್ ಹತ್ತಿರ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಎಸ್‌ಸಿ, ಎಸ್‌ಟಿ ನೌಕರರು ಭಾಗವಹಿಸಿ ಯಶಸ್ವಿಗೊಳಿಸಿಕೊಡುವಂತೆ ಮನವಿ ಮಾಡಿದರು.



ಸಮಿತಿಯ ಜಿಲ್ಲಾ ಕಾರ್ಯದರ್ಶಿ ನಂಜುಂಡಸ್ವಾಮಿ, ಹಿರಿಯ ಉಪಾಧ್ಯಕ್ಷ ಶ್ರೀನಿವಾಸಮೂರ್ತಿ, ಕಾರ್ಯಾಧ್ಯಕ್ಷ ಶಿವಕುಮಾರಯ್ಯ, ಜಿಲ್ಲಾ ದಲಿತ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ, ವಾಸು, ಎಸ್‌ಸಿ, ಎಸ್ ಟಿ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಉಪಾಧ್ಯಕ್ಷ ನಂಜುಂಡಸ್ವಾಮಿ ಹಾಜರಿದ್ದರು.

**‘ ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ/ಎಸ್‌ಟಿ ನೌಕರರ ಸಮನ್ವಯ ಸಮಿತಿಯು ಕಳೆದ 20 ವರ್ಷಗಳಿಂದಲ್ಲೂ ನಿರಂತರವಾಗಿ ಸಮುದಾಯಕ್ಕೆ ಆಗುವ ಎಲ್ಲ ಅನ್ಯಾಯಗಳನ್ನು ತಮ್ಮ ಧ್ವನಿಯ ಮುಖಾಂತರ, ಸಮಾವೇಶಗಳ ಮುಖಾಂತರ ಎಲ್ಲರಿಗೂ ನ್ಯಾಯವನ್ನು ಕಲ್ಪಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ನಮ್ಮ ಸಂಘಟನೆಗಳ ವತಿಯಿಂದ ಎಲ್ಲ ರೀತಿ ಸಹಕಾರ, ಬೆಂಬಲ ನೀಡುತ್ತರೆ.**

**▸▸ ಜಿಲ್ಲಾಧ್ಯಕ್ಷ ಉಮೇಶ್ ಕುದರ್** ಡಾ. ಬಿ.ಆರ್. ಅಂಬೇಡ್ಕರ್ ಮಹಾಸಭಾ

## ಆ.29ಕ್ಕೆ ನೂತನ ಪತ್ರಕರ್ತರ ಭವನದ ಕಾಮಗಾರಿಗೆ ಚಾಲನೆ.

# ಪತ್ರಿಕಾ ದಿನಾಚರಣೆಯಲ್ಲಿ ಹಿರಿಯ ಪತ್ರಕರ್ತರಿಗೆ ಅಭಿನಂದನೆ

**ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದ ಮೈಜಿಪಸಂ.**

**ಮೈಸೂರು:** ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪತ್ರಕರ್ತರ ನೂತನ ಭವನ ನಿರ್ಮಾಣದ ಕಾಮಗಾರಿಗೆ ಚಾಲನೆ ಮತ್ತು ಪತ್ರಿಕಾ ದಿನಾಚರಣೆಯನ್ನು ಆಗಸ್ಟ್ 29ರಂದು ಹಮ್ಮಿಕೊಳ್ಳಲಾಗಿದ್ದು ಈ ವರ್ಷದ ಹಿರಿಯ ಪತ್ರಕರ್ತ ಪ್ರಶಸ್ತಿ ಹಾಗೂ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ.

ನಗರದ ಊಟಿ ರಸ್ತೆಯ (ಜೆಎಸ್ಎಸ್ ಕಾಲೇಜು ಹತ್ತಿರ) ಕೆಎನ್ಎಸ್ ಬಡಾವಣೆಯ ಪತ್ರಕರ್ತ ಸಂಘದ ನಿವೇಶನದಲ್ಲಿ ಜರುಗುವ ಪತ್ರಿಕಾ ದಿನಾಚರಣೆಯಲ್ಲಿ ನೂತನ ಪತ್ರಕರ್ತರ ಭವನದ ಕಾಮಗಾರಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಲಿದ್ದು ಸಮಾರಂಭವನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸುವರು. ಸಂಘದ ಅಧ್ಯಕ್ಷ ಶ್ರೀ ಕೆ.ದೀಪಕ್ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತರಿಗೆ ಮಾಜಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅವರು ಅಭಿನಂದಿಸಿದರೆ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ವಾರ್ಷಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವರು.

ಸಮಾರಂಭದಲ್ಲಿ ಮೈಸೂರು ಜಿಲ್ಲೆಯ ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಟಿ.ಎಸ್. ಶ್ರೀವತ್ಸ, ಶ್ರೀ ಕೆ.ಹರೀಶ್ ಗೌಡ, ಅನಿಲ್ ಚಿಕ್ಕಮಾದು, ಡಿ. ರವಿಶಂಕರ್, ದರ್ಶನ್ ಧ್ರುವನಾರಾಯಣ್, ಜಿ.ಡಿ. ಹರೀಶ್ ಗೌಡ, ವಿಧಾನ ಪರಿಷತ್ ವಿಧಾನ ಪರಿಷತ್ತಿನ ಸದಸ್ಯರಾದ ಡಾ. ತಿಮ್ಮಯ್ಯ ಶ್ರೀ ಸಿ.ಎನ್. ಮಂಜೇಗೌಡ, ರಘು (ಕೌಟಿಲ್ಯ) ವಿವೇಕಾನಂದ, ಮಧು ಮಾದೇಗೌಡ ಹಾಗೂ ಡಾ. ಕೆ.ಶಿವಕುಮಾರ್, ಜಿಲ್ಲಾಧಿಕಾರಿಗಳಾದ ಲಕ್ಷ್ಮೀಕಾಂತ ರೆಡ್ಡಿ, ನಗರಪಾಲಿಕೆ ಆಯುಕ್ತರಾದ ಶ್ರೀಮತಿ ಸವಿತಾ ಕೆ.ಎಲ್, ಜೆಎಸ್ಎಸ್ ಸಮೂಹ ಸಂಸ್ಥೆಯ ಮುಖ್ಯಸ್ಥರಾದ ಶಲ ಶ್ರೀಹರಿ ದ್ವಾರಕನಾಥ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷರುಗಳಾದ ಅಂಶಿ ಪ್ರಸನ್ನ ಕುಮಾರ್,ಸಿ.ಕೆ. ಮಹೇಂದ್ರ, ಎಸ್.ಟಿ. ರವಿಕುಮಾರ್ ಮೊದಲಾದವರು ಭಾಗವಹಿಸುವರು.

**ಹಿರಿಯ ಪತ್ರಕರ್ತರಿಗೆ ಅಭಿನಂದನೆ :** ಈ ಸಾಲಿನ ಹಿರಿಯ ಪತ್ರಕರ್ತರಾದ ಹಲೋ ಮೈಸೂರ್ ಪತ್ರಿಕೆಯ ಸಂಪಾದಕ ಟಿ. ಗುರುರಾಜ್ (ನಗರ), ಮೈಸೂರು ಮಿತ್ರ ಪತ್ರಿಕೆಯ ಹಿರಿಯ ವರದಿಗಾರ ಪಿ.ಎಸ್. ವೀರೇಶ್ (ಗ್ರಾಮಾಂತರ) ಉಪ- ಸಂಪಾದಕ ವಿಭಾಗದಿಂದ ರಾಜ್ಯಧರ್ಮ ಪತ್ರಿಕೆಯ ಬಿ.ಎಂ.ಲವಕುಮಾರ್, ಛಾಯಾಗ್ರಾಹಕರ ವಿಭಾಗದಿಂದ ಸಿಟಿ ಹೈ ಲೈಟ್ಸ್ ಪತ್ರಿಕೆಯ ಹಂಪಾ ನಾಗರಾಜ್, ವಿದ್ಯುನ್ಮಾನ ಮಾಧ್ಯಮದಿಂದ ಶ್ರೀ ಕನ್ನಡ ಚಾನಲ್ ಸಂಪಾದಕ ಸೂರ್ಯ (ವೈರಮುಡಿ), ವಿಡಿಯೋಗ್ರಾಫರ್ ವಿಭಾಗದಿಂದ ಜೀ ಟಿವಿಯ ಎಂ. ಅರುಣ್ ದೇವ್ ಅವರನ್ನು ಆಯ್ಕೆ ಮಾಡಲಾಗಿದೆ.

**ವಾರ್ಷಿಕ ಪ್ರಶಸ್ತಿಗೆ ಆಯ್ಕೆ :** ವರ್ಷದ ಅತ್ಯುತ್ತಮ ಕನ್ನಡ ವರದಿಗೆ ಉದಯವಾಣಿ ಪತ್ರಿಕೆಯ ವೀರೇಂದ್ರ ಪ್ರಸಾದ್ ಆರ್. ಮತ್ತು ವಿಜಯವಾಣಿ ಪತ್ರಿಕೆಯ ಶ್ರೀ ಅವಿನಾಶ್ ಜೈನಹಳ್ಳಿ ಹಾಗೂ ಅತ್ಯುತ್ತಮ ಇಂಗ್ಲಿಷ್ ವರದಿಗೆ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಶ್ರೀಮತಿ ಪಿ. ಶಿಲ್ಪ ಮತ್ತು ಇಂಡಿಯನ್ ಎಕ್ಸ್ ಪ್ರೆಸ್ ಪತ್ರಿಕೆಯ ಕೆ.ಕೆ. ಕಾರ್ತಿಕ್ ಅವರು ಆಯ್ಕೆಯಾಗಿ ಪ್ರಶಸ್ತಿ ಹಂಚಿಕೊಂಡಿದ್ದಾರೆ.

ಅತ್ಯುತ್ತಮ ಛಾಯಾಚಿತ್ರ ಪ್ರಶಸ್ತಿಯನ್ನು ಸ್ಟಾರ್ ಆಫ್ ಮೈಸೂರ್ ಮತ್ತು ಮೈಸೂರು ಮಿತ್ರ ಪತ್ರಿಕೆಯ ಎಂ.ಎನ್. ಲಕ್ಷ್ಮೀನಾರಾಯಣ ಯಾದವ್ ಹಾಗೂ ವಿದ್ಯುನ್ಮಾನ ಮಾಧ್ಯಮ ವಿಭಾಗದಿಂದ ನ್ಯೂಸ್ -18ನ ಕೆ.ಎಸ್. ಆನಂದ್, ರಾಹುಲ್. ಪಿ. ಅವರು ಅತ್ಯುತ್ತಮ ವರದಿಗಾರಿಕೆ ಪ್ರಶಸ್ತಿ ಪಡೆದಿದ್ದಾರೆ.

## ಕ್ರೀಡಾ ಚಟುವಟಿಕೆಗಳು ವ್ಯಕ್ತಿತ್ವ ವಿಕಸನಕ್ಕೆ ಅಗತ್ಯ: ಪ್ರೊ. ಮೈಸೂರು ಕೃಷ್ಣಮೂರ್ತಿ

**ಚಾಮರಾಜನಗರ:** ಶಿಕ್ಷಣವು ಕೇವಲ ಪಠ್ಯ, ಪರೀಕ್ಷೆ ಹಾಗೂ ಅಂಕಗಳಿಗೆ ಸೀಮಿತವಾಗದೆ, ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿಯೂ ವಿದ್ಯಾರ್ಥಿಗಳು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ವ್ಯಕ್ತಿತ್ವದ ಸರ್ವಾಂಗೀಣ ವಿಕಸನಕ್ಕೆ ಅಗತ್ಯ ಎಂದು ಪ್ರೊ. ಮೈಸೂರು ಕೃಷ್ಣಮೂರ್ತಿ ಅಭಿಪ್ರಾಯಪಟ್ಟರು.

ನಗರದ ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಶಿಕ್ಷಣದಲ್ಲಿ ಪಠ್ಯನಿಷ್ಠ ಹಾಗೂ ಪಠ್ಯೇತರ ಎಂಬ ಎರಡು ಪ್ರಮುಖ ಆಯಾಮಗಳಿವೆ. ಸಿಲಬಸ್ ಹಾಗೂ ಪರೀಕ್ಷಾಧಾರಿತ ಅಧ್ಯಯನದ ಜತೆಗೆ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದರು. ಕೇವಲ ಪರೀಕ್ಷೆ ಬರೆದು ಪದವಿ ಪ್ರಮಾಣಪತ್ರ ಪಡೆಯುವುದಷ್ಟೇ ಶಿಕ್ಷಣದ ಉದ್ದೇಶವಲ್ಲ. ಜೀವನವನ್ನು ಸಮಗ್ರವಾಗಿ ಹಾಗೂ ಅರ್ಥಪೂರ್ಣವಾಗಿ ನಡೆಸಲು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳೆರಡೂ ಅಗತ್ಯ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಸೂಕ್ತ ಮಹತ್ವ ದೊರೆಯದಿರುವುದು, ಅವುಗಳು ವಾಣಿಜ್ಯೀಕರಣಗೊಳ್ಳುತ್ತಿರುವುದು ಕಳವಳಕಾರಿ ಬೆಳವಣಿಗೆ. ಇಡೀ ಬದುಕನ್ನು ವಾಣಿಜ್ಯೀಕರಣಗೊಳಿಸುವುದರಿಂದ ಸಮಾಜದಲ್ಲಿ ದ್ರೋಹ ಮತ್ತು ಅಪನಂಬಿಕೆಯ ವಾತಾವರಣ ನಿರ್ಮಾಣವಾಗಿ, ಮಾನವ ಸಮಾಜ ಹಾಗೂ ಪ್ರಕೃತಿಯ ಅಸ್ತಿತ್ವಕ್ಕೂ ಧಕ್ಕೆಯಾಗಬಹುದು ಎಂದು ಎಚ್ಚರಿಸಿದರು.

ಮಹಾಭಾರತದ ವೀರ ಅಭಿಮನ್ಯುವಿನ ಸಾಹಸ ಮತ್ತು ಛಲವನ್ನು ಉದಾಹರಿಸಿದ ಅವರು, ಯುವಜನತೆ ಸವಾಲುಗಳನ್ನು ಧೈರ್ಯದಿಂದ ಎದುರಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳು ಪಠ್ಯದ ಜತೆಗೆ ಸಾಂಸ್ಕೃತಿಕ ಹಾಗೂ ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತಮ್ಮ ಬದುಕು, ಸಮಾಜ ಮತ್ತು ದೇಶದ ಪ್ರಗತಿಗೆ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಎಂ.ಎನ್. ಜಯಶೀಲ, ಮೈಸೂರಿನ ಅಂತಾರಾಷ್ಟ್ರೀಯ ಕೋಕೋ ಆಟಗಾರ್ತಿ ಮೋನಿಕಾ, ಜೆಎಸ್ಎಸ್ ಮಹಿಳಾ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ದೇವರಾಜ್ ಮೂರ್ತಿ, ಸಾಂಸ್ಕೃತಿಕ ಸಮಿತಿ ಸಂಚಾಲಕಿ ಜಮುನಾ, ದೈಹಿಕ ಶಿಕ್ಷಣ ನಿರ್ದೇಶಕ ಉಮೇಶ್ ಎಸ್. ಹಾಗೂ ಪ್ರಾಂಶುಪಾಲ ಡಾ. ಎಂ. ಪ್ರಭು ಇದ್ದರು.

## ಆ. 29 ರಂದು ಮಂಡ್ಯದಲ್ಲಿ ರಾಷ್ಟ್ರೀಯ ಕ್ರೀಡಾ ದಿನಾಚರಣೆ



**ಮಂಡ್ಯ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತ್,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಮೈ ಭಾರತ್ ಮಂಡ್ಯ ಇವರ ಸಂಯುಕ್ತಾಶ್ರಯದಲ್ಲಿ ಹಾಕಿ ಮಾಂತ್ರಿಕ ಮೇಜರ್ ಧ್ಯಾನ್‌ಚಂದ್ ಅವರ ಜನ್ಮದಿನದ ಅಂಗವಾಗಿ ಆಗಸ್ಟ್ 29 ರಂದು ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಆಚರಿಸಲಾಗುತ್ತಿದ್ದು, ಇದರ ಅಂಗವಾಗಿ ಆಗಸ್ಟ್ 28 ,29 ಮತ್ತು 30 ರಂದು ವಿವಿಧ ಸ್ಪರ್ಧೆಗಳನ್ನು ಮಂಡ್ಯ ನಗರದ ಸರ್. ಎಂ. ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

**ವಿವಿಧ ಸ್ಪರ್ಧೆಗಳ ವಿವರ:** ಆ.28 ರಂದು ಬೆಳಿಗ್ಗೆ 9 ಗಂಟೆಗೆ ಪಾಸ್ ದಿ ಬಾಲ್ (ಪುರುಷರು ಮತ್ತು ಮಹಿಳೆಯರಿಗೆ) ಹಾಗೂ ಲೆಮನ್ ಅಂಡ್ ಸ್ಪೂನ್ (ಮಹಿಳೆಯರಿಗೆ ಮಾತ್ರ) ಸ್ಪರ್ಧೆಗಳಲ್ಲಿ 14 ವರ್ಷ ಮೇಲ್ಪಟ್ಟವರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ.

ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಆ.29 ರಂದು ಬೆಳಿಗ್ಗೆ 6.30 ಗಂಟೆಗೆ ಪುರುಷರು ಮತ್ತು ಮಹಿಳೆಯರಿಗೆ 5 ಕಿ.ಮೀ. ರಸ್ತೆ ಓಟ (ಮ್ಯಾರಥಾನ್) ನಡೆಯಲಿದ್ದು, 14ರಿಂದ 29 ವರ್ಷದೊಳಗಿನವರು ಹಾಗೂ 30 ವರ್ಷ ಮೇಲ್ಪಟ್ಟವರಿಗೆ ಪ್ರತ್ಯೇಕ ವಿಭಾಗಗಳಲ್ಲಿ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಸದರಿ ದಿನದಂದು ಬೆಳಿಗ್ಗೆ 9 ಗಂಟೆಗೆ 10 ಜನರ ತಂಡದ ಪುರುಷರು ಮತ್ತು ಮಹಿಳೆಯರಿಗಾಗಿ ಹಗ್ಗ-ಜಗ್ಗಾಟ ಸ್ಪರ್ಧೆ ನಡೆಯಲಿದ್ದು, ಮೊದಲ 16 ತಂಡಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ.

ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆಯುವವರಿಗೆ ನಗದು ಬಹುಮಾನ ನೀಡಲಾಗುವುದು .

ಆ.30ರಂದು ಬೆಳಿಗ್ಗೆ 7 ಗಂಟೆಗೆ ?ಸಂಡೇಸ್ ಆನ್ ಸೈಕಲ್? ಜಾಥಾ ಆಯೋಜಿಸಲಾಗಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬಹುದು.

ಸ್ಪರ್ಧೆಗಳಲ್ಲಿ ಭಾಗವಹಿಸುವವರು ಹೆಚ್ಚಿನ ಮಾಹಿತಿಗಾಗಿ ದೂ. ಸಂ. 8310970044, 8792544007, 7353097540 ಹಾಗೂ 9739972472 ಅನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಜಿಲ್ಲೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಂಡ್ಯದಲ್ಲಿ ಆ.27ರಂದು ಪ್ರಶಸ್ತಿ ಪ್ರದಾನ, ಪ್ರತಿಭಾ ಪುರಸ್ಕಾರ



**ಮಂಡ್ಯ:** ಭಾರತ ಸೇವಾದಳ, ಮಂಡ್ಯ ಜಿಲ್ಲೆ ಹಾಗೂ ಸೇಂಟ್ ಜಾನ್ ಆಂಬುಲೆನ್ಸ್ ವತಿಯಿಂದ 'ಪ್ರಶಸ್ತಿ ಪ್ರದಾನ' ಮತ್ತು 'ಪ್ರತಿಭಾ ಪುರಸ್ಕಾರ' ಕಾರ್ಯಕ್ರಮವನ್ನು ಆ.27ರ ಗುರುವಾರ ಬೆಳಗ್ಗೆ 11 ಗಂಟೆಗೆ ನಗರದ ಅಶೋಕನಗರದ ಬಾಲಭವನದಲ್ಲಿ ಆಯೋಜಿಸಲಾಗಿದೆ ಎಂದು ಭಾರತ ಸೇವಾದಳದ ಕಾರ್ಯದರ್ಶಿ ಜಿ.ವಿ.ನಾಗರಾಜು ತಿಳಿಸಿದರು.

ಸುದ್ದಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌದರಿ ಉದ್ಘಾಟಿಸಲಿದ್ದು, ಭಾರತ ಸೇವಾದಳ ಅಧ್ಯಕ್ಷ ಬಿ.ಸಿ.ಶಿವಾನಂದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಸ್ವಾತಂತ್ರ?ಯ ಸೇನಾನಿ ಪದ್ಮಭೂಷಣ ಡಾ.ನಾ.ಸು. ಹರ್ಡೀಕರ್ ಪ್ರಶಸ್ತಿಯನ್ನು ಕೆ.ಬಿ.ಚಂದು, ಕಮಲ್ ಕುಮಾರ್ , ಡಾ.ನಾಗಲಕ್ಷ್ಮಿ ಚೌಧರಿ ಅವರಿಗೆ ಹಾಗೂ ಸಮಾಜ ಸೇವಕ ಡಾ.ವೈ.ಎಸ್.ರಾಮರಾವ್ ಪ್ರಶಸ್ತಿಯನ್ನು ಡಾ.ಪ್ರಕಾಶ್ ಗುಪ್ತ, ಶಿವಶಂಕರ್ ಹಾಗೂ ಡಾ.ಎಂ.ಜಿ.ಆರ್.ಅರಸ್ ಅವರಿಗೆ 5000 ರೂ ನಗುವಿನೊಂದಿಗೆ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಇದೇ ವೇದಿಕೆಯಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಸುಮಾರು ಒಂದು ಸಾವಿರ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಹಾಗೂ ಪ್ರಶಸ್ತಿ ನೀಡಲಾಗುವುದು. ಶಾಸಕ ಪಿ.ರವಿಕುಮಾರ್ ಗಣಿಗ ಪ್ರಶಸ್ತಿ ಪ್ರದಾನ ಮಾಡುವರು. ಪ್ರತಿಭಾ ಪುರಸ್ಕಾರಕ್ಕೆ 925 ಅರ್ಜಿಗಳು ಬಂದಿದ್ದು ಶೇಕಡ 90 ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ 300ರೂ. ನಗದು ಮತ್ತು ಪ್ರಶಸ್ತಿ ಫಲಕ ನೀಡಲಾಗುವುದು. ಶೇಕಡ 60 ರಿಂದ 80 ಅಂಗ ಗಳಿಸಿದವರಿಗೆ ಪ್ರತಿಭಾ ಪುರಸ್ಕಾರ ಮಾಡಲಾಗುವುದು ಎಂದು ವಿವರಿಸಿದರು

ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿ.ಜೆ.ಶೋಭಾರಾಣಿ, ನಗರಸಭೆ ಆಯುಕ್ತೆ ಪಂಪಶ್ರೀ, ವಿಜಯಲಕ್ಷ್ಮಿ ರಘುನಂದನ್, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಉಪನಿರ್ದೇಶಕಿ ಗೀತಾಲಕ್ಷ್ಮಿ, ಕಲ್ಯಾಣಾಧಿಕಾರಿ ಕೋಮಲ್‌ಕುಮಾರ್, ಸಮಾಜ ಸೇವಕ ಯೋಗಾನಂದ, ಮಾಜಿ ಸಭಾಧ್ಯಕ್ಷೆ ಅಂಬುಜಮ್ಮ, ವೈ.ಬಿ.ಬಸವರಾಜು, ಬಿ.ಟಿ.ಚಂದ್ರಶೇಖರ್, ಶುಭದಾಯಿನಿ, ವಿನಯಕುಮಾರ್ ಸೇರಿದಂತೆ ಅನೇಕ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಮಾಹಿತಿ ಹಂಚಿಕೊಂಡರು.

ಗೋಷ್ಠಿಯಲ್ಲಿ ಭಾರತ ಸೇವಾ ದಳದ ಖಜಾಂಚಿ ಶಿವಪ್ರಕಾಶ್ ಬಾಬು, ನಿರ್ದೇಶಕ ಜಿ.ವಿ.ಕುಮಾರ್, ಸಿ.ಎಸ್. ಗಣೇಶ್ ಇದ್ದರು.




## ನಾನಾ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಪ್ರತಿಭಟನೆ

**ಮೈಸೂರು:** ಗೌರವ ಧನ ಹೆಚ್ಚಳದ ಆರನೇ ಗ್ಯಾರಂಟಿ ಜಾರಿ ಸೇರಿ ಹಲವು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಎಐಟಿಯುಸಿ ಸಂಯೋಜಿತ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಫೆಡರೇಷನ್ ಜಿಲ್ಲಾ ಸಮಿತಿ ಪ್ರತಿಭಟಿಸಿತು.

ನಗರದ ನೂತನ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟಿಸಿ ನಾನಾ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. 2011ರಿಂದ ನಿವೃತ್ತರಾದವರೆಲ್ಲರಿಗೂ ಗ್ರಾಚ್ಯುಯಿಟಿ ನೀಡುವಂತೆ ಒತ್ತಾಯಿಸಿ ಬಲವಂತವಾಗಿ ಬಿ.ಎಲ್.ಓ ಜವಾಬ್ದಾರಿ ಹೊರೆಸುತ್ತಿರುವುದನ್ನು ವಿರೋಧಿಸಿದರು.

ಅಂಗನವಾಡಿ ಕಾರ್ಯಕರ್ತೆಯರಿಗೆ 15ಸಾವಿರ ರೂ., ಸಹಾಯಕಿಯರಿಗೆ 10ಸಾವಿರ ರೂ. ಗೌರವಧನ ನೀಡಬೇಕು. ಎಸ್ಐಆರ್ ಸಮೀಕ್ಷೆ ಕಾರ್ಯದಲ್ಲಿ ಉಂಟಾಗಿರುವ ಸಮಸ್ಯೆಗಳನ್ನು ಬಗೆಹರಿಸಬೇಕು. ಗೃಹಲಕ್ಷ್ಮಿ ಸರ್ವೇ ಕಾರ್ಯ, ಜಾತಿ ಪ್ರಮಾಣ ಪತ್ರ ವಿತರಣೆ ಕಾರ್ಯದಿಂದ ಬಿಡುಗಡೆಗೊಳಿಸಬೇಕು. ಮೊಟ್ಟೆ ದರ ಏರಿಕೆ ಮಾಡಬೇಕು. ನಿವೃತ್ತ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಪಿಂಚಣಿ ಸೌಲಭ್ಯ ಕಲ್ಪಿಸಬೇಕೆಂದು ಒತ್ತಾಯಿಸಿದರು.

ನೇಮಕಾತಿಯಲ್ಲಿ ವಯೋಮಿತಿ ಸಡಿಲಿಕೆ ಮಾಡಿ, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಬಿಪಿಎಲ್ ಕಾರ್ಡ್ ಕಡಿತ ಕೈ ಬಿಡಬೇಕು. ನಿವೃತ್ತಿ ವಯಸ್ಸು 65ವರ್ಷಕ್ಕೆ ಏರಿಕೆ ಮಾಡಬೇಕು. ಋತುಚಕ್ರ ರಜೆ ಘೋಷಣೆ ಮಾಡಬೇಕು. ಅಂಗನವಾಡಿಗೆ ಗುಣಮಟ್ಟದ ಆಹಾರ ಪೂರೈಕೆ ಮಾಡಬೇಕೆಂಬುದು ಸೇರಿ ಸೇರಿ ತಮ್ಮ ಹಲವು ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿದರು.

ಜಿಲ್ಲಾಸಮಿತಿಯ ಜಿಲ್ಲಾಧ್ಯಕ್ಷೆ ಪಿ.ಎಂ.ಸರೋಜಮ್ಮ, ಜಿಲ್ಲಾ ಕಾರ್ಯದರ್ಶಿ ವೈ.ಮಹದೇವಮ್ಮ, ಖಜಾಂಚಿ ಸಿ.ಗಿರಿಜಾ, ಗೌರವಾಧ್ಯಕ್ಷ ಡಿ.ಜಗನ್ನಾಥ, ಉಪಾಧ್ಯಕ್ಷರಾದ ಜಯಮ್ಮ, ನಜರತ್ ಉನ್ನೀಸಾ, ವನಜಾಕ್ಷಿ, ತಾಲ್ಲೂಕು ಅಧ್ಯಕ್ಷರಾದ ಭುವನೇಶ್ವರಿ, ಸುಮ, ಭಾಗ್ಯ, ನಗರ ಖಜಾಂಚಿ ಗೀತಾ ಇನ್ನಿತರರು ಇದ್ದರು.

## ಸೀಟಿಗಾಗಿ ಬಸ್ನ ಮುಂಭಾಗದ ಬಾಗಿಲಿನಿಂದ ಹತ್ತಿದ ವಿದ್ಯಾರ್ಥಿಗೆ ಹಲ್ಲೆ ಆರೋಪ

### ಪ್ರಕರಣ ದಾಖಲಿಸಿ ವಿದ್ಯಾರ್ಥಿಯ ಭವಿಷ್ಯಕ್ಕೆ ಧಕ್ಕೆ ತರಲಾಗುತ್ತಿದೆ: ಪೋಷಕರು, ಸಂಘಟನೆಗಳ ಮುಖಂಡರ ಆಕ್ರೋಶ



**ಗುಂಡ್ಲುಪೇಟೆ:** ಸೀಟು ಪಡೆಯುವ ಉದ್ದೇಶದಿಂದ ಕೆಎಸ್ಆರ್ಟಿಸಿ ಬಸ್ನ ಮುಂಭಾಗದ ಬಾಗಿಲಿನಿಂದ ಹತ್ತಿದ ವಿದ್ಯಾರ್ಥಿಯ ಮೇಲೆ ಚಾಲಕ ಹಲ್ಲೆ ನಡೆಸಿದ್ದಾರೆ. ಬಳಿಕ ವಿದ್ಯಾರ್ಥಿಯ ವಿರುದ್ಧವೇ ಪ್ರಕರಣ ದಾಖಲಿಸುವ ಮೂಲಕ ಆತನ ಭವಿಷ್ಯಕ್ಕೆ ತೊಂದರೆ ಉಂಟುಮಾಡಲು ಸಾರಿಗೆ ಘಟಕದ ಅಧಿಕಾರಿಗಳು ಮುಂದಾಗಿದ್ದಾರೆ ಎಂದು ವಿದ್ಯಾರ್ಥಿಯ ಪೋಷಕರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಆರೋಪಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆ.24ರಂದು ಬೆಳಗ್ಗೆ ಮೈಸೂರು ಕಡೆ ತೆರಳುತ್ತಿದ್ದ ಬಸ್ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರಿದ್ದ ಕಾರಣ ಸೀಟು ಸಿಗಲೆಂಬ ಉದ್ದೇಶದಿಂದ ವಿದ್ಯಾರ್ಥಿ ಸ್ನೇಹಿತರೊಂದಿಗೆ ಚಾಲಕರ ಬಾಗಿಲಿನ ಮೂಲಕ ಬಸ್ ಹತ್ತಿದ್ದನು. ಇದನ್ನು ಪ್ರಶ್ನಿಸಿದ ಚಾಲಕರು ವಿದ್ಯಾರ್ಥಿಯನ್ನು ಬೈದಿದ್ದು, ತಪ್ಪಾಗಿ ಹತ್ತಿದ್ದೇನೆ, ಕ್ಷಮಿಸಿ ಎಂದು ಕೇಳಿಕೊಂಡರೂ ಕಪಾಲಕ್ಕೆ ಹೊಡೆದಿದ್ದಾರೆ ಎಂದು ಆರೋಪಿಸಿದರು.

ಈ ವೇಳೆ ವಿದ್ಯಾರ್ಥಿಯೂ ಪ್ರತಿಯಾಗಿ ಚಾಲಕರಿಗೆ ಹೊಡೆದಿದ್ದಾನೆ. ಬಳಿಕ ಚಾಲಕರು ಬಸ್ನಲ್ಲಿದ್ದ ರಾಡ್ನಿಂದ ವಿದ್ಯಾರ್ಥಿಯ ಮೇಲೆ ತೀವ್ರವಾಗಿ ಹಲ್ಲೆ ನಡೆಸಿದ್ದಾರೆ ಎಂದು ಪೋಷಕರು ದೂರಿದರು. ಘಟನೆಯಲ್ಲಿ ಗಾಯಗೊಂಡ ವಿದ್ಯಾರ್ಥಿಯನ್ನು ಮೈಸೂರಿನ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಯ ತಂದೆ ಜಬೀವುಲ್ಲಾ ಅವರು ಚಾಲಕರ ಬಳಿ ಕ್ಷಮೆಯಾಚಿಸಿ, ಮಗನ ಭವಿಷ್ಯದ ಹಿತದೃಷ್ಟಿಯಿಂದ ಪ್ರಕರಣ ದಾಖಲಿಸದಂತೆ ಮನವಿ ಮಾಡಿದ್ದರೂ ಪ್ರಯೋಜನವಾಗಿಲ್ಲ. ಚಾಲಕ ಹಾಗೂ ನಿರ್ವಾಹಕರು ಪ್ರಕರಣ ದಾಖಲಿಸದಿರಲು ಒಪ್ಪಿದ್ದರೂ ಡಿಪೋ ವ್ಯವಸ್ಥಾಪಕರು ಒಪ್ಪದೇ ಪ್ರಕರಣ ದಾಖಲಿಸುವಂತೆ ಒತ್ತಡ ಹೇರಿದ್ದಾರೆ ಎಂದು ಅವರು ಆರೋಪಿಸಿದರು.

**ಸೌಜನ್ಯದಿಂದ ವರ್ತಿಸಬೇಕಿತ್ತು:** ಸಾರ್ವಜನಿಕ ಸೇವೆಯಲ್ಲಿರುವ ಸಾರಿಗೆ ಸಿಬ್ಬಂದಿ ಸಣ್ಣಪುಟ್ಟ ಘಟನೆಗಳನ್ನು ಮಾತುಕತೆಯ ಮೂಲಕ ಬಗೆಹರಿಸಬೇಕು. ಪ್ರಯಾಣಿಕರೊಂದಿಗೆ ಸೌಜನ್ಯದಿಂದ ವರ್ತಿಸುವ ಬದಲು ಪ್ರಕರಣ ದಾಖಲಿಸುವುದು ಸರಿಯಲ್ಲ. ಘಟಕದಲ್ಲಿ ಬಸ್ಗಳು ಕೆಟ್ಟು ನಿಲ್ಲುವುದು, ಸಮರ್ಪಕ ಸಾರಿಗೆ ಸೌಲಭ್ಯ ಕೊರತೆ ಸೇರಿದಂತೆ ಹಲವು ಸಮಸ್ಯೆಗಳಿದ್ದರೂ ಅಧಿಕಾರಿಗಳು ಗಮನ ಹರಿಸುತ್ತಿಲ್ಲ. ಆದರೆ ವಿದ್ಯಾರ್ಥಿಯ ಭವಿಷ್ಯಕ್ಕೆ ಧಕ್ಕೆ ಉಂಟುಮಾಡುವ ರೀತಿಯಲ್ಲಿ ಪ್ರಕರಣ ದಾಖಲಿಸಿರುವುದು ಖಂಡನೀಯ ಎಂದು ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ಈ ಹಿಂದೆ ಕೂಡ ಸಾರ್ವಜನಿಕರ ವಿರುದ್ಧ ಪ್ರಕರಣ ದಾಖಲಿಸಿರುವ ಘಟನೆಗಳು ನಡೆದಿವೆ ಎಂದು ಆರೋಪಿಸಿದ ಅವರು, ಕೂಡಲೇ ಡಿಪೋ ವ್ಯವಸ್ಥಾಪಕರ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಕನ್ನಡಪರ ಹಾಗೂ ಪ್ರಗತಿಪರ ಸಂಘಟನೆಗಳನ್ನು ಒಗ್ಗೂಡಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

**ಬಸ್ ನಿಲ್ದಾಣದ ಭದ್ರತೆಗೂ ಒತ್ತಾಯ:** ಗುಂಡ್ಲುಪೇಟೆ ಕೆಎಸ್ಆರ್ಟಿಸಿ ಬಸ್ ನಿಲ್ದಾಣದಲ್ಲಿ ಮೊಬೈಲ್ ಕಳ್ಳತನ ಸೇರಿದಂತೆ ಹಲವು ಸಮಸ್ಯೆಗಳು ಹೆಚ್ಚಾಗುತ್ತಿವೆ. ಪ್ರಯಾಣಿಕರ ಸುರಕ್ಷತೆಗಾಗಿ ಹೋಂಗಾರ್ಡ್ಗಳ ಬದಲಿಗೆ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಬೇಕು ಎಂದು ಮುಖಂಡರು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಾರಕಿಹೊಳಿ ಬ್ರಿಗೇಡ್ ಸಂಸ್ಥಾಪಕ ಗೋವಿಂದರಾಜು, ಹಿರಿಯ ಮುಖಂಡ ಪಾಪಣ್ಣ, ವೈಭವ ಕರ್ನಾಟಕ ಸಂಘಟನೆಯ ನಿಜಾಮುದ್ದೀನ್, ಮುಖಂಡರಾದ ಮುತ್ತಣ್ಣ, ಇಮ್ರಾನ್, ಅಬ್ದುಲ್ ಮಾಲೀಕ್, ರಶೀದ್ ಹಾಗೂ ವಿದ್ಯಾರ್ಥಿಯ ತಂದೆ ಜಬೀವುಲ್ಲಾ ಉಪಸ್ಥಿತರಿದ್ದರು.

## ಗೋಹತ್ಯೆ ಸವಾಲು: ಪುನೀತ್ ಕೆರೆಹಳ್ಳಿ ಪ್ರತಿಭಟನೆ, ಬಂಧನ ಬಿಡುಗಡೆ



**ಮೈಸೂರು:** ಕಸಾಯಿಖಾನೆಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದ ಪುನೀತ್ ಕೆರೆಹಳ್ಳಿ ನೇತೃತ್ವದ ಹಿಂದೂ ಸಂಘಟನೆಗಳ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಬಿಡುಗಡೆಗೊಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಸೇರಿದ ಕಾರ್ಯಕರ್ತರು ಘೋಷಣೆಗಳನ್ನು ಕೂಗಿದರು. ಪುನೀತ್ ಕೆರೆಹಳ್ಳಿಯಲ್ಲಿ ಮಾತನಾಡಿ, ನಾವು ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತೇವೆ. ಆದರೆ, ಜಿಲ್ಲಾಧಿಕಾರಿ ಹಾಗೂ ನಗರ ಪೊಲೀಸ್ ಆಯುಕ್ತರು ಸ್ಥಳಕ್ಕೆ ಆಗಮಿಸಿ ಮೈಸೂರಿನಲ್ಲಿ ನಡೆಯುತ್ತಿರುವ ಕಸಾಯಿಖಾನೆಗಳ ವಿರುದ್ಧ ಯಾವ ರೀತಿಯ ಕ್ರಮವಹಿಸುತ್ತಾರೆ ಎಂದು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

ಎಲ್ಲರೂ ಗುಂಪಾಗಿ ನಿಂತು, "ಯಾರೇ ಬರಲಿ ಒಗ್ಗಟ್ಟಿರಲಿ' ಎಂದು ಘೋಷಣೆ ಕೂಗಿದರು. ನಾವು ಹಿಂದುತ್ವಕ್ಕಾಗಿ ಸಾಯಲು ಸಿದ್ಧ, ಬಂಧನಕ್ಕೆ ಹೆದರುವುದಿಲ್ಲ ಎಂದರು. ಈ ವೇಳೆ ಪೊಲೀಸರು ಪ್ರದೀಪ್ ಕೆರೆಹಳ್ಳಿಯನ್ನು ಬಂಧಿಸಲು ಮುಂದಾದರು. ಹಿಂದೂತ್ವ ಕಾರ್ಯಕರ್ತರು ಪುನೀತ್ ಕೆರೆಹಳ್ಳಿಯಲ್ಲಿ ಸುತ್ತುವರಿದು ಬಂಧಿಸಲು ಬಿಡಲಿಲ್ಲ. ಸ್ಥಳದಲ್ಲೇ ಮಲಗಿ ಆಕ್ರೋಶ ವ್ಯಕ್ತಪಡಿಸಿದರು. ವಂದೇ ಮಾತರಂ, ಪೊಲೀಸ್ ದೌರ್ಜನ್ಯಕ್ಕೆ ಧಿಕ್ಕಾರ ಘೋಷಣೆ ಕೂಗಿದರು. ಪೊಲೀಸರು ಒಬ್ಬೊಬ್ಬರನ್ನೇ ಎಳೆದೊಯ್ದರು. ಈ ವೇಳೆ ನೂಕಾಟ ತಳ್ಳಾಟ ನಡೆಯಿತು.

ಪುನೀತ್ ಕೆರೆಹಳ್ಳಿ ಮಾತನಾಡಿ, ಶಾಂತಿಯುತವಾಗಿ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ಆಯುಕ್ತರಿಗೆ ಮನವಿ ನೀಡಲು ಬಂದವರನ್ನು ಯಾವುದೇ ಮಾತುಕತೆ ನಡೆಸದೆ ವಶಕ್ಕೆ ಪಡೆದಿದ್ದಾರೆ. ನಮಗೆ ಕರೆ ಹಾಕಿ ಸವಾಲು ಹಾಕಿದವನ ವಿರುದ್ಧ ಕ್ರಮವಹಿಸಿಲ್ಲ. ಮುಂದಿನ ದಿನಗಳಲ್ಲಿ ಮೈಸೂರಿಗೆ ಸಹಸ್ರಾರು ಕಾರ್ಯಕರ್ತರೊಂದಿಗೆ ಆಗಮಿಸುತ್ತೇವೆ. ಮೈಸೂರು ಭಾಗದಿಂದ ವ್ಯಕ್ತಿಯೊಬ್ಬ ಕರೆಮಾಡಿ ಗೋಹತ್ಯೆ ಕುರಿತು ಪ್ರಚೋದನಾಕಾರಿ ಹೇಳಿಕೆ ನೀಡಿದ್ದಾರೆ. ಈ ಬಗ್ಗೆ ಅಧಿಕಾರಿಗಳು ನಮ್ಮ ಮನವಿ ಪಡೆದು, ಸ್ಪಷ್ಟನೆ ನೀಡದಿದ್ದರೆ ನಾವು ಮೈಸೂರು ಬಿಟ್ಟು ತೆರಳುವುದಿಲ್ಲ. ಮಂಡಿಮೊಹಲ್ಲಾದಲ್ಲಿರುವ ಖಾಸಾಯಿಖಾನೆ ಸ್ಥಳಾಂತರಕ್ಕೆ ಈ ಭಾಗದ ಶಾಸಕರು ಸ್ಪಂದಿಸುತ್ತಿಲ್ಲ ಎಂಬ ಆರೋಪವಿದೆ. ಹಿಂದೂ ಕಾರ್ಯಕರ್ತರ ಭಾವನೆಗೆ ಬೆಲೆ ಕೊಡುವ ಕೆಲಸ ಮಾಡಬೇಕೆಂದು ಆಗ್ರಹಿಸಿದರು.

## ಭಾವೈಕ್ಯತೆ ಕದಡುವ ಕೆಲಸ ಬೇಡ: ಇಕ್ಬಾಲ್ ಎಚ್ಚರಿಕೆ



**ಮೈಸೂರು:** ನರಸಿಂಹ ರಾಜಕ್ಷೇತ್ರದಲ್ಲಿ ಹಿಂದೂ-ಮುಸ್ಲಿಂ ಸಮುದಾಯ ಅಣ್ಣ-ತಮ್ಮಂದಿರಂತೆ ಸಹಬಾಳ್ವೆಯಿಂದ ಬದುಕುತ್ತಿದ್ದು ಇಲ್ಲಿ ಸಮಾಜದ ಸ್ವಾಸ್ಥ್ಯ ಕದಡುವ ಕೆಲಸ ಬೇಡ ಎಂದು ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಇಕ್ಬಾಲ್ ಎಚ್ಚರಿಸಿದರು.

ಮೈಸೂರಿನಲ್ಲಿ ಹಿಂದೂಪರ ಕಾರ್ಯಕರ್ತ ಪುನೀತ್ ಕೆರೆಹಳ್ಳಿ ಪ್ರತಿಭಟನೆ ವೇಳೆ ಸ್ಥಳೀಯ ಶಾಸಕ ತನ್ವೀರ್ ಸೇಠ್ ಕುರಿತು ಹೇಳಿಕೆ ಕುರಿತು ಪ್ರತಿಕ್ರಯಿಸಿದ ಅವರು, ಶಾಸಕರ ಸ್ಥಾನಕ್ಕೆ ಚ್ಯುತಿ ತರುವ ನಿಟ್ಟಿನಲ್ಲಿ ಮಾತನಾಡುವುದು ಸರಿಯಲ್ಲ. ಅವರ ಬಗ್ಗೆ ಮಾತನಾಡುವ ಯೋಗ್ಯತೆ ಪುನೀತ್ ಕೆರೆಹಳ್ಳಿಗೆ ಇಲ್ಲ. ಅವರಿಗೆ ಕರೆ ಮಾಡಿ ಸವಾಲು ಹಾಕಿದ ವ್ಯಕ್ತಿ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲಿ. ಅದನ್ನು ಬಿಟ್ಟು ಜನಪ್ರತಿನಿಧಿಗಳು, ಅಧಿಕಾರಿಗಳನ್ನು ಏಕವಚನದಲ್ಲಿ ನಿಂದಿಸಿ ಈ ಭಾಗದಲ್ಲಿ ಶಾಂತಿ ಕದಡುವ ಕೆಲಸ ಯಾರು ಸಹ ಮಾಡಬಾರದು. ಪುನೀತ್ ಕೆರೆಹಳ್ಳಿ ಓರ್ವ ಬ್ಲಾಕ್ ಮೇಲರ್ ಆಗಿದ್ದು, ಆತನಿಂದ ನೊಂದವರು ಹೀಗೆ ಕರೆ ಮಾಡಿರಬಹುದು. ಅದನ್ನು ಕಾನೂನು ಚೌಕಟ್ಟಿನಲ್ಲಿ ಪೊಲೀಸರು ಕ್ರಮ ಜರುಗಿಸುತ್ತಾರೆ. ಹೀಗಿರುವಾಗಿ ಶಾಸಕರನ್ನು ಮತ್ತೊಮ್ಮೆ ನಿಂದಿಸಿದರೆ ಪುನೀತ್ ವಿರುದ್ಧವೇ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು. ಕಾಂಗ್ರೆಸ್ ಮುಖಂಡ ಅಫ್ರೋಜ್ ಇದ್ದರು.

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ



**ಕೆ.ಆರ್.ನಗರ:** ಪಟ್ಟಣದ ಗ್ರಾಮೀಣ ನಿಧಿ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ ವತಿಯಿಂದ ಸೊಸೈಟಿಯ ಸದಸ್ಯರುಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಸೊಸೈಟಿಯ ಅಧ್ಯಕ್ಷ ಕೆ.ಆರ್.ಶ್ಯಾಮ್‌ಸುಂದರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆ.25ರಂದು ಸಾಲಿಗ್ರಾಮ ಪಟ್ಟಣದ ಸೊಸೈಟಿಯ ಆವರಣದಲ್ಲಿ ನಡೆಯುವ 2025-26ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಂಗವಾಗಿ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ.80ರಷ್ಟು ಅಂಕ ಪಡೆದ ಸೊಸೈಟಿಯ ಸದಸ್ಯರುಗಳ ಪ್ರತಿಭಾವಂತ ಮಕ್ಕಳುಗಳು ಅರ್ಜಿ ಸಲ್ಲಿಸಬಹುದಾಗಿದೆ. ವಿದ್ಯಾರ್ಥಿಗಳು ಸೆ.15 ರೊಳಗೆ ಅರ್ಜಿಗಳನ್ನು ಸೊಸೈಟಿಯ ಸಾಲಿಗ್ರಾಮ ಅಥವಾ ಕೆ.ಆರ್.ನಗರ ಶಾಖಾ ಕಚೇರಿಗಳಿಗೆ ಸಲ್ಲಿಸಬಹುದು.

ಒಂದು ವೇಳೆ ಕಾರಣಾಂತರಗಳಿಂದ ಈ ಸಭೆಯ ನೋಟೀಸು ತಲುಪದೇ ಇದ್ದಲ್ಲಿ ಅರ್ಹ ಸದಸ್ಯರು ಈ ಪ್ರಕಟಣೆಯನ್ನೇ ನೋಟೀಸು ಎಂದು ಪರಿಗಣಿಸಿ ಸಭೆಯಲ್ಲಿ ಹಾಜರಿರಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಸೊಸೈಟಿಯ ಅಧ್ಯಕ್ಷ ಕೆ.ಆರ್.ಶ್ಯಾಮಸುಂದರ್ ಮೊ.9986615961 ಸಂಪರ್ಕಿಸಬಹುದಾಗಿದೆ.

## ಮಡಿವಾಳರ ಸೇವಾ ಸಂಘಕ್ಕೆ ಪದಾಧಿಕಾರಿಗಳ ನೇಮಕ

# ಮೈಸೂರು ಜಿಲ್ಲಾ ಅಧ್ಯಕ್ಷರಾಗಿ ಸಿದ್ದನಕೊಪ್ಪಲು ಕುಮಾರ್ ಅವಿರೋಧ ಆಯ್ಕೆ



**ಮೈಸೂರು :** ಕರ್ನಾಟಕ ರಾಜ್ಯ ಮಡಿವಾಳರ ಸೇವಾ ಸಂಘಕ್ಕೆ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು.
ಮಂಗಳವಾರ ನಗರದ ಜಲದರ್ಶಿನಿ ಅತಿಥಿಗೃಹದಲ್ಲಿ ಸಂಘದ ರಾಜ್ಯಾಧ್ಯಕ್ಷರಾದ ಸತ್ಯನಾರಾಯಣ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ

ಮೊದಲಿಗೆ ಮೈಸೂರು ಜಿಲ್ಲಾ ವೀರ ಮಡಿವಾಳರ ಸಂಘದ ಅಧ್ಯಕ್ಷರಾಗಿ ವಕೀಲರಾದ ಸಿದ್ದನಕೊಪ್ಪಲು ಕುಮಾರ್ ಅವರನ್ನು ಸಹ ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಈ ಹಿಂದೆ ಇದೇ ಸಂಘಕ್ಕೆ ಸತ್ಯನಾರಾಯಣ ಅವರು ಅಧ್ಯಕ್ಷರಾಗಿದ್ದರು, ಇತ್ತೀಚೆಗೆ ಅವರು ರಾಜ್ಯ ಸಂಘಟನೆಗೆ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಈ ಸ್ಥಾನ ತೆರವಾಗಿತ್ತು. ಮಂಗಳವಾರ ನಡೆದ ಸಂಘದ ಪದಾಧಿಕಾರಿಗಳ ಸಭೆಯಲ್ಲಿ ಈ ಹಿಂದೆ ಕೆ.ಆರ್.ನಗರ ತಾಲ್ಲೂಕು ಅಧ್ಯಕ್ಷರಾಗಿದ್ದ ಸಿದ್ದನಕೊಪ್ಪಲು ಕುಮಾರ್ ಅವರನ್ನು ಮೈಸೂರು ಜಿಲ್ಲಾ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಸತ್ಯನಾರಾಯಣ ಅವರ ಅಧ್ಯಕ್ಷತೆಯಲ್ಲಿ ರಾಜ್ಯ ಸಮಿತಿಗೂ ಆಯ್ಕೆ ನಡೆಯಿತು. ಗೌರವಾಧ್ಯಕ್ಷರಾಗಿ ಟಿ.ನರಸೀಪುರ ರಾಜು, ಗೌರವ ಸಲಹೆಗಾರರಾಗಿ ಕೆ.ಆರ್.ನಗರ ಪುರುಷೋತ್ತಮ, ಕಾರ್ಯಾಧ್ಯಕ್ಷರಾಗಿ ಚಾಮರಾಜನಗರ ಚೇತನ್, ಮಡಿಕೇರಿ ಸತೀಶ್, ಹಾಸನ ಜಯಣ್ಣ, ಚಿಕ್ಕಮಗಳೂರು ಹರ್ಷ, ಎನ್.ಜಗದೀಶ್ ಕುಮಾರ್, ಉಪಾಧ್ಯಕ್ಷರಾಗಿ ಗೋಣಿಗೊಪ್ಪ ರಮೇಶ್(ವಿನು), ಮೈಸೂರು ಲಿಂಗರಾಜು, ಬೆಂಗಳೂರು ಕೃಷ್ಣಪ್ಪ, ರಾಜಶೇಖರ್, ಸಂಘಟನಾ ಕಾರ್ಯದರ್ಶಿಯಾಗಿ ಸೋಮವಾರಪೇಟೆ ಹರ್ಷವರ್ಧನ್, ಪ್ರಧಾನ ಕಾರ್ಯದರ್ಶಿಯಾಗಿ ಶ್ರೀರಂಗಪಟ್ಟಣ ಚಂದ್ರು, ಸಂಚಾಲಕರಾಗಿ ಮೇಲುಕೋಟೆ ಶಿವಮಾದು, ಸಹ ಕಾರ್ಯದರ್ಶಿಯಾಗಿ ಹೆಚ್.ಡಿ.ಕೋಟೆ ಕೆಂಪಶೆಟ್ಟಿ, ರಾಜ್ಯ ಮಹಿಳಾ ಉಪಾಧ್ಯಕ್ಷರಾಗಿ ಬೆಂಗಳೂರು ಹೊಸಕೋಟೆ ಮಂಜುಳ, ಸಂಘಟನಾ ಕಾರ್ಯದರ್ಶಿಯಾಗಿ ಕಡೂರು ನಟರಾಜು, ಉಪಾಧ್ಯಕ್ಷರಾಗಿ ರವಿ ಚಿಲ್ಕುಂದ, ನಂಜನಗೂಡು ಚಂದ್ರು, ಆಡಗೋಡಿ ರಾಜಶೇಖರ್, ಸಂಚಾಲಕರಾಗಿ ನಂಜನಗೂಡು ಶ್ರೀರಾಮ್, ಹಾಸನ ಅಂದಾಲೆ, ಸಂಘಟನಾ ಕಾರ್ಯದರ್ಶಿಯಾಗಿ ಸಾಲಿಗ್ರಾಮ ಹರ್ಷವರ್ಧನ್, ಕಾರ್ಯಾಧ್ಯಕ್ಷರಾಗಿ ಕೆ.ಆರ್.ನಗರ ಬೋರಶೆಟ್ಟಿ, ನಿರ್ದೇಶಕರಾಗಿ ಕೆಂಗೇರಿ ಶಿವಕುಮಾರ್, ಮಂಡ್ಯ ಪ್ರಿಯಾ ರಮೇಶ್, ರಾಂಪುರ ಮಹೇಶ್ ಅವರನ್ನು ನೇಮಕ ಮಾಡಲಾಯಿತು.

ಈ ಸಂದರ್ಭದಲ್ಲಿ ರಾಜ್ಯಾಧ್ಯಕ್ಷರಾದ ಸತ್ಯನಾರಾಯಣ ಅವರು ಮಾತನಾಡಿ, ರಾಜ್ಯದಲ್ಲಿ ಮಡಿವಾಳ ಸಮುದಾಯ ದನಿ ಇಲ್ಲದ ಸಮುದಾಯವಾಗಿದೆ, ನಮ್ಮ ಸಮುದಾಯದಲ್ಲಿ ಸಂಘಟನೆಯ ಕೊರತೆ ಇದೆ, ಈ ಕಾರಣಕ್ಕಾಗಿ ರಾಜ್ಯಾದ್ಯಂತ ಸಮುದಾಯದ ಸಂಘಟನೆಗೆ ಮುಂದಾಗಿದ್ದೇವೆ, ಪ್ರಥಮವಾಗಿ ಮೈಸೂರು ಭಾಗದಲ್ಲಿ ನಮ್ಮ ಸಂಘಟನೆ ಬಲಿಷ್ಠವಾದ ನಂತರ ರಾಜ್ಯ ಪ್ರವಾಸ ಮಾಡುವ ಮೂಲಕ ರಾಜ್ಯಾದ್ಯಂತ ನಮ್ಮ ಸಂಘಟನೆಯನ್ನು ವಿಸ್ತಾರ ಮಾಡಲಾಗುವುದು ಎಂದು ಹೇಳಿದರು.

ಮೈಸೂರು ಜಿಲ್ಲಾ ವೀರ ಮಡಿವಾಲರ ಸಂಘದ ನೂತನ ಅಧ್ಯಕ್ಷರಾದ ಸಿದ್ದನಕೊಪ್ಪಲು ಕುಮಾರ್ ಮಾತನಾಡಿ, ಮೈಸೂರು ಜಿಲ್ಲಾ ಅಧ್ಯಕ್ಷ ಸ್ಥಾನ ನನಗೆ ಅನಿರೀಕ್ಷಿತವಾಗಿ ದೊರಕಿದೆ, ಇದರಿಂದ ನನ್ನ ಜವಾಬ್ದಾರಿ ಹೆಚ್ಚಾಗಿದ್ದು, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಉತ್ತಮವಾಗಿ ಸಂಘಟನೆ ಮಾಡುವ ಮೂಲಕ ಸಮುದಾಯವನ್ನು ಪ್ರಗತಿಯತ್ತ ಕೊಂಡೊಯ್ಯಲು ಪ್ರಯತ್ನಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಮಡಿವಾಳರ ಸಂಘದ ಮಾಜಿ ಅಧ್ಯಕ್ಷರಾದ ರಾಜು, ಸೇರಿದಂತೆ ಸಮುದಾಯದ ಹಿರಿಯ ಮುಖಂಡರು ಇದ್ದರು.

# ಗಾನ ಗಾರುಡಿಗ ಪಿಬಿಎಸ್ ನೆನಪಿನ ಕಾರ್ಯಕ್ರಮ

**ಮೈಸೂರು:** ಗಾನ ನಂದನ ಹಾಗೂ ಅಲೆಯನ್ಸ್ ಕ್ಲಬ್ ಆಫ್ ಮೈಸೂರು ನಾಲ್ವಡಿ ವತಿಯಿಂದ ನಗರದ ಜೆಎಲ್ಬಿ ರಸ್ತೆಯ ನಾದಬ್ರಹ್ಮ ಸಂಗೀತಸಭಾದಲ್ಲಿ 'ಆಹಾ ಮೈಸೂರು ಮಲ್ಲಿಗೆ'- ಗಾನ ಗಾರುಡಿಗ ಪಿ.ಬಿ. ಶ್ರೀನಿವಾಸ್ ನೆನಪಿನ ಕಾರ್ಯಕ್ರಮವನ್ನು ಮಂಗಳವಾರ ಏರ್ಪಡಿಸಲಾಗಿತ್ತು

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಒ ಡಾ.ಕೆ.ರುದ್ರೇಶ್ ಉದ್ಘಾಟಿಸಿ ಮಾತನಾಡಿ, ಪಿ.ಬಿ.ಶ್ರೀನಿವಾಸ್ ಅವರು ಸಹಸ್ರಾರು ಗೀತೆಗಳನ್ನು ಹಾಡಿದ್ದಾರೆ. ಅಂಥವರನ್ನು ನೆನಪಿಸಿಕೊಂಡು ಕಾರ್ಯಕ್ರಮ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಇನ್ನೇನು ದಸರಾ ಮಹೋತ್ಸವ ಆರಂಭವಾಗಲಿದ್ದು, ವಸ್ತು ಪ್ರದರ್ಶನ ಮೂರು ತಿಂಗಳು ನಡೆಯುತ್ತದೆ. ಗಾನ ನಂದನ ಸೇರಿದಂತೆ ಮೈಸೂರಿನ ಆಸಕ್ತ ತಂಡಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಲು ಅವಕಾಶ ಮಾಡಿಕೊಡುವುದಾಗಿ ಭರವಸೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ.ಬೈರಿ ಮಾತನಾಡಿ, ಗಾನ ನಂದನ ತಂಡ ನಿರಂತರವಾಗಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತೇನೆ. ಇದೀಗ 26 ನೇ ಕಾರ್ಯಕ್ರಮವನ್ನು ಪಿ.ಬಿ. ಶ್ರೀನಿವಾಸ್ ಅವರ ನೆನಪಿನಲ್ಲಿ ನಡೆಸುತ್ತಿದೆ. ಪಿಬಿಎಸ್ ಹಾಡಿರುವ ಗೀತೆಗಳು ಸದಾ ಜನರಿಗೆ ಮುದ ನೀಡುತ್ತವೆ ಎಂದರು.




ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಎಸ್.ಟಿ. ರವಿಕುಮಾರ್ ಮಾತನಾಡಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ಮೈಸೂರು ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆ ಅಧ್ಯಕ್ಷ ಡಾ.ಕೆ.ಬಿ. ಲಿಂಗರಾಜು, ಮೈವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ. ನಿಂಗರಾಜ್ ಗೌಡ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮುಖ್ಯ ಅತಿಥಿಗಳಾಗಿದ್ದರು. ನಂತರ ಎನ್. ಬೆಟ್ಟೇಗೌಡರ ಗಾನ ಸಾರಥ್ಯದಲ್ಲಿ ಡಾ,ಟಿ. ರವಿಕುಮಾರ್, ನಾಗೇಂದ್ರ ಚೌಕಿದಾರ್, ಡಾ.ಚನ್ನನಾಗಪ್ಪ, ಡಾ.ಎ.ಎಸ್. ಪೂರ್ಣಿಮಾ, ಶ್ರೀಲತಾ ಮನೋಹರ್, ಸಿ.ಎಸ್. ವಾಣಿ ಗಾಯನ ಪ್ರಸ್ತುತಪಡಿಸಿದರು. ಎಡೆಯೂರು ಸಮೀವುಲ್ಲಾ ಕಾರ್ಯಕ್ರಮ ನಿರೂಪಿಸಿದರು. ಲತಾ ಬಾಲಕೃಷ್ಣ ಇದ್ದರು.

# ಚಿರನೆನಪ ಪ್ರಜ್ಯೋತಿ ಪರಮಪೂಜ್ಯ ಗುರುವು



**| ಡಾ. ಪ್ರದೀಪ ಕುಮಾರ ಹೆಬ್ರಿ**

ಪರಮಪೂಜ್ಯ ಶ್ರೀ ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಸದಾ ನಮ್ಮ ಮನಸ್ಸಿನಲ್ಲಿ ರಾರಾಜಿಸುತ್ತಿರುವವರು. ನಮಗೆ ನಿತ್ಯ ಮಾರ್ಗದರ್ಶನ ಮಾಡುವವರು ಎಂಬ ನಂಬಿಕೆಯ ಸುರಕೀರ್ತಿ ಪರುಷರು. ಪೂಜ್ಯರು ಗುರುಭಕ್ತಿ, ದೈವ ಶಕ್ತಿಗಳ ಸಂಗಮದಂತಿದ್ದವರು. ತಮ್ಮ ದೀಕ್ಷಾ ಗುರುಗಳ ಹಾದಿಯಲ್ಲಿ ಜ್ಞಾನಾನ್ನ ದಾಸೋಹದ ಮೂಲಕ ತಮ್ಮ ಸಮಕಾಲೀನ ಜಗದ ಲಕ್ಷ ಲಕ್ಷ ಅಸಹಾಯಕರ, ಬಡವರ ಬದುಕು ಉನ್ನತಿಗೆ ಏರುವಲ್ಲಿ ಮಾರ್ಗದರ್ಶಕರಾಗಿ, ಹಿತ ಚಿಂತಕರಾಗಿ, ಮಾನವರೂಪಿ ದೇವರಾಗಿ ಕಾರ್ಯ ನಿರತರಾಗಿದ್ದವರು. ಬಸವಣ್ಣನವರ, ' ಸಕಲ ಜೀವಾತ್ಮರಿಗೆ ಲೇಸನೇ ಬಯಸು ' ಮಾತಿನಂತೆ ನಡೆದವರು, ಎಲ್ಲರನ್ನು ನಡೆಸಿದವರು. ತಮ್ಮ ಕೃಪಾಕಟಾಕ್ಷಕ್ಕೆ ಒಳಗಾದವರ ಬದುಕ ಉನ್ನತಿಗೆ ನಿರಂತರ ಶ್ರಮಿಸಿದವರು. ' ಗುರುವಿನಿಂದಲೇ ಕೈವಲ್ಯ ' ಎಂಬುದನ್ನು ಸಾರಿ ತೋರಿದವರು. ನಿಶ್ಚಿತವಾಗಿ ನಮ್ಮೆಲ್ಲರ ಎದೆ ದೈವವಾಗಿ ಕಂಗೊಳಿಸುತ್ತಿರುವವರು ಪೂಜ್ಯ ಶ್ರೀಗಳು.

ಪರಮಪೂಜ್ಯ ಶ್ರೀ ರಾಜೇಂದ್ರ ಗುರುವರರು ಹತ್ತಾರು ಕ್ಷೇತ್ರಗಳಲ್ಲಿ ಅಸಾಧಾರಣ, ಅನುಪಮ ಸೇವೆಯನ್ನು ಸಲ್ಲಿಸಿದವರು. ' ಗುರುವಿನ ಗುಲಾಮನಾಗದೆ ದೊರೆಯದಣ್ಣ ಮುಕುತಿ ' ಮಾತಿನನುಸಾರ ವರ ಗುರುಗಳಾಗಿ ಪೊರೆದವರು. ಹರಸಿದವರು. ಆನಂದ ತುಂಬಿದವರು. ಅಪರೂಪದಲ್ಲಿ ಬಹು ಅಪರೂಪದ ವ್ಯಕ್ತಿತ್ವ ಹೊಂದಿದ ಸುರ ತೇಜಮಯ ಧೀಶಕ್ತಿಯ ಪೂಜ್ಯಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ನೆನೆಯುವುದೆಂದರೆ ಬದುಕಿನ ಸಾರ್ಥಕತೆಯನ್ನು ಮೈಗೂಡಿಸಿಕೊಂಡಂತೆ. ' ಗುರುಬಸವ ಲಿಂಗಾಯ ನಮಃ' ಮಾತಿಗೆ ಸರಿ ಜೋಡಿಯಾಗಿ ನಾವು ' ಗುರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ನಮಃ ' ಎಂದುಲಿದರೆ ನಿಶ್ಚಿತವಾಗಿ ನಮ್ಮ ಬದುಕು ಪರಿಪೂರ್ಣತೆಯ ಬಿತ್ತರದಲ್ಲಿ ಕಂಗೊಳಿಸುತ್ತದೆ.

ಪರಮ ಪೂಜ್ಯ ಗುರುಗಳು ಎಂದೂ ಐಹಿಕ ಆಸೆ ಆಕಾಂಕ್ಷೆಗಳಿಗೆ ಮನಸೋತವರಲ್ಲ. ಹಲವಾರು ಕಷ್ಟ, ನಷ್ಟ, ಸಂಕಷ್ಟಗಳನ್ನು ಎದುರಿಸಿದರೂ ಧನಾತ್ಮಕ ನಿಲುವಿನಲ್ಲಿ ಅವುಗಳನ್ನು ಸ್ವೀಕರಿಸಿ ಹಿಮಾಲಯದ ಎತ್ತರಕ್ಕೆ ಸುತ್ತೂರು ಶ್ರೀಮಠವು ಬೆಳೆಯುವಂತೆ ಶ್ರಮಿಸಿದವರು. ' ಎದೆ ಪ್ರೀತಿ ' ಎಂಬುದನ್ನು ನಿತ್ಯ ಹಸಿರಾಗಿಸಿದವರು. ಅಜ್ಞಾನವನ್ನು ಹೊರದೂಡಿ ಸುಜ್ಞಾನವನ್ನು ಅಂತರಂಗದ ಆಲಾಪವಾಗಿಸಲು ನಿತ್ಯ ಶ್ರಮಿಸಿದವರು. ತಮ್ಮ ಸುಖವನ್ನು ಬದಿಗಿಟ್ಟು,' ಪರಸೇವೆಯೇ ಪರಮಾತ್ಮನ ಸೇವೆ ' ಮನೋಭಾವದಲ್ಲಿ ನಿರಂತರ ಶ್ರಮಭರಿತ ಬದುಕಿನ ಪಯಣದಲ್ಲಿ ಜ್ಞಾನೋಪದೇಶದ ಹರಿಕಾರರಾಗಿ ಜನಸಾಮಾನ್ಯರ ಬದುಕಿನ ಉದ್ಧಾರಕ್ಕೆ ಓಂಕಾರ ಬರೆದವರು. ಪೂಜ್ಯರ ಬಗ್ಗೆ ಹೇಳ ಹೊರಟರೆ ನಿಲ್ಲಿಸಲು ಸಾಧ್ಯವಾಗದು. ಅವರ ಜನುಮದಿನದ ಸವಿ ನೆನಪಿಗಾಗಿ ಓದಿ, ಕೇಳಿ ಮನ ತುಂಬಿಕೊಂಡ ವಿಷಯಗಳನ್ನು ನೆನೆಯುವುದೆಂದರೆ ಅದೇ ಪೂಜ್ಯ ಗುರುಗಳಿಗೆ ನನ್ನ ಪ್ರೀತಿಯ ಎದೆನಮನ ಎಂದುಕೊಂಡಿರುವೆ.



ಪೂಜ್ಯ ಗುರು ರಾಜೇಂದ್ರ ಶ್ರೀಗಳು ತಮ್ಮ ಎಳವೆಯಿಂದಲೇ ತಾವು ವಿದ್ಯಾವಂತರು, ಬುದ್ಧಿವಂತರು, ಸರ್ವಜ್ಞಾನಿಗಳು, ಸರ್ವತೋಮುಖ ಅಭಿವೃದ್ಧಿಯ ಹರಿಕಾರರು ಆಗಬೇಕೆಂದು ಆಶಿಸಿದವರು. ಶ್ರಮಿಸಿದವರು. ಅದಕ್ಕಾಗಿ ಯಾರ ಅರಿವಿಗೂ ಬರದಂತೆ ಮೈಸೂರಿನಿಂದ ವಾರಣಾಸಿಗೆ ಪಯಣ ಬೆಳೆಸಿದರು. ಅಲ್ಲಿದ್ದ ಗೌರಿಶಂಕರದೆತ್ತರದ ಪೂಜ್ಯ ಗೌರಿಶಂಕರ ಸ್ವಾಮಿಗಳನ್ನು ಕಂಡರು. ಆದರೆ ತಮ್ಮನ್ನು ಹುಡುಕುತ್ತಾ ತಮ್ಮ ಗುರುಗಳು ಬಂದದ್ದರಿಂದ ಅವರಲ್ಲಿ ವಿದ್ಯಾಭ್ಯಾಸ ಮಾಡುವಲ್ಲಿ ವಿಫಲರಾದರು. ಆದರೂ ಸದಾ ಪೂಜ್ಯ ರಾಜೇಂದ್ರ ಶ್ರೀಗಳ ಮನದಲ್ಲಿ ಶ್ರೀ ಗೌರಿಶಂಕರ ಸ್ವಾಮಿಗಳು ಆಡಿದ ಮಾತುಗಳಾದ," ನೀವು ಸದಾ ಬಡ ಮಕ್ಕಳಿಗೆ ಜ್ಞಾನಾನ್ನ ದಾಸೋಹವೆಸಗಿ ಅವರ ಬಾಳನ್ನು ಹಸನು ಮಾಡಬೇಕು. ಜಗತ್ತಿನತ್ತ ದೃಷ್ಟಿ ಹರಿಸಬೇಕು. ನಿಮ್ಮ ವೈಯುಕ್ತಿಕ ಆಸೆಗಳತ್ತ ಗಮನ ಹರಿಸದೆ ದೇಶದ ಜನರೆಲ್ಲರೂ ವಿದ್ಯಾವಂತರಾಗುವಲ್ಲಿ ಶ್ರಮಿಸಬೇಕು " ಎಂಬುದು ನಿತ್ಯ ರಿಂಗಣಿಸುತ್ತಿತ್ತು.



ಮಾನವರಲ್ಲಿ ಕುಲ, ಜಾತಿ, ಧರ್ಮ, ಲಿಂಗ ಭೇದಗಳನ್ನು ಗಮನಿಸಬಾರದು ಎಂಬ ಮನೋಭಾವದಿಂದ ಪೂಜ್ಯರು ಸುಮಾರು ನಾಲ್ಕು ದಶಕಗಳ ಕಾಲ ನಿರಂತರವಾಗಿ ದುಡಿದರು. ಬಡತನದಲ್ಲಿಯೇ ಹುಟ್ಟಿ, ಬಡತನದಲ್ಲಿಯೇ ಬೆಳೆದು, ಬಡತನದಲ್ಲೇ ಮರಣ ಹೊಂದುವ ಅದೆಷ್ಟೋ ಚೇತನಗಳನ್ನು ಪ್ರೋತ್ಸಾಹಿಸಿ, ವಿದ್ಯಾವಂತರನ್ನಾಗಿಸಿ, ಸ್ವಾವಲಂಬಿಗಳಾಗಿ ಬದುಕುವತ್ತ ಮುನ್ನಡೆಸಿದ ತ್ರಿಕರಣ ಶುದ್ಧದ ನಿತ್ಯ ದಾಸೋಹಿ ನಮ್ಮ ಪೂಜ್ಯ ಗುರುವರ್ಯರು. ಪೂಜ್ಯರ ನೆನಪೇ ಬದುಕ ನಂದಾದೀಪ.

ಹಳ್ಳಿ ನಗರಗಳೆನ್ನದೆ, ಪೇಟೆ ಬೀದಿಗಳೆನ್ನದೆ ಎಲ್ಲೆಲ್ಲಿಯೂ ವಿದ್ಯಾರ್ಥಿನಿಲಯ ಹಾಗೂ ಶಾಲೆಗಳನ್ನು ಪ್ರಾರಂಭಿಸಿದ ಪೂಜ್ಯರು ಜನಸಾಮಾನ್ಯರ ಜ್ಞಾನಭಾಗ್ಯ ಬದುಕನ್ನು ಸಿಂಗರಿಸುವಂತೆ ಮಾಡಿದರು. ಸಮಾಜದ ಸರ್ವ ಜನತೆಗೆ ಅನ್ನ, ವಿದ್ಯೆ, ಅರಿವು, ಅನುಭವ, ಅನುಭೂತಿಯ ಪ್ರಾಣವನ್ನು ನೀಡಿ ಬಹು ಬಗೆಯ ಬಡತನದಿಂದ ಬಳಲುತ್ತಿದ್ದವರನ್ನು ನಿತ್ಯ ಚೇತನಿಗಳಾಗಿ ಕಂಗಳಿಸುವಂತೆ ಮಾಡಿದ ಸುರಕೀರ್ತಿಯ ವರಗುರುಗಳಿವರು. ಪ್ರಾರಂಭಿಕ ಶಿಶುವಿಹಾರದಿಂದ ಅತ್ಯುನ್ನತ ಪದವಿಗಳನ್ನು ಪಡೆಯುವ ಶಿಕ್ಷಣ ಸಂಸ್ಥೆಗಳನ್ನು ದೇಶ ವಿದೇಶಗಳಲ್ಲಿ ಸ್ಥಾಪಿಸಿ ಆಸಕ್ತ ಜನರು ಸರ್ವಾಂಗೀಣ ಶಿಕ್ಷಣ ಪಡೆಯುವಂತೆ ಮಾಡಿ ಬದುಕನ್ನು ಸಿರಿವಂತವಾಗಿಸಿದರು. ಜೊತೆಯಲ್ಲಿ ಸಾಹಿತ್ಯಕ್ಕೆ, ಲಲಿತ ಕಲೆಗಳಿಗೆ, ಆರೋಗ್ಯವಂತಿಕೆಗೆ, ಗ್ರಾಮೀಣಾಭಿವೃದ್ಧಿಗೆ, ಶ್ರೀಸಾಮಾನ್ಯರ ಸ್ವಾವಲಂಬಿ ಬದುಕಿಗೆ, ಉಚಿತ ಪಾಠಶಾಲೆಗಳಿಗೆ ಅತ್ಯುನ್ನತ ಹಿರಿತನದ ನೆರವು ಹಾಗೂ ಪ್ರೋತ್ಸಾಹವನ್ನು ನೀಡಿ ಎಲ್ಲರೂ ನಿತ್ಯ ನೆನೆಯುವಂತೆ ಮಾಡಿದ ಯುಗಪುರುಷ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ನೂರ ಹತ್ತನೇ ಜನುಮದಿನದ ಈ ಶುಭ ಸಂದರ್ಭದಲ್ಲಿ ಆಶೀರ್ವಾದ ಬೇಡುತ್ತ ಸಾಷ್ಟಾಂಗ ನಮನ ಸಲ್ಲಿಸುತ್ತ ನಿತ್ಯ ನಿರಂತರ ನಮ್ಮ ಮನದಲ್ಲಿ ಚಿರವಾಗಿ ನೆಲೆಸಿ ಹರಸುತ್ತಿರಲಿ ಎಂದು ಪ್ರಾರ್ಥಿಸುವೆ.

# ಯಜ್ಞೋಪವೀತ ಪರಮಪವಿತ್ರ





**| ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.**

ಯಜ್ಞೋಪವೀತಕ್ಕೆ ಉಪವೀತ,ಯಜ್ಞಸೂತ್ರ, ವ್ರತಬಂಧ, ಬಲಬಂಧ, ಹಾಗೂ ಬ್ರಹ್ಮಸೂತ್ರವೆಂಬ ಹಲವಾರು ಹೆಸರುಗಳಿವೆ. ಕನ್ನಡದಲ್ಲಿ ಯಜ್ಞೋಪವೀತಕ್ಕೆ ಜನಿವಾರವೆಂದು ಕರೆಯುತ್ತಾರೆ. ಜನಿವಾರ ಧರಿಸುವ ಪರಂಪರೆ ಬಹಳ ಪ್ರಾಚೀನವಾದದ್ದು. ಗಂಡುಮಕ್ಕಳಿಗೆ ಉಪನಯನದ ನಂತರ ಯಜ್ಞೋಪವೀತ ಧರಿಸಲಾಗುತ್ತದೆ.

ಹಿಂದೂ ಧರ್ಮದ ಷೋಡಶ ಸಂಸ್ಕಾರಗಳಲ್ಲಿ ಉಪನಯನ ಒಂದಾಗಿದೆ. ಉಪನಯನ ಸಂಸ್ಕಾರದಲ್ಲಿ ಜನಿವಾರದ ಧಾರಣೆಯಾಗುತ್ತದೆ. ಒಂದು ಸಲ ಜನಿವಾರ ಧರಿಸಿದ ಮೇಲೆ ಧರಿಸಿದ ವ್ಯಕ್ತಿ ಕೆಲವು ನಿಯಮ ಪಾಲಿಸಬೇಕಾಗುತ್ತದೆ. ಜನಿವಾರ ಹಳೆಯದಾದರೆ, ತುಂಡಾದರೆ, ಗ್ರಹಣದ ನಂತರ, ಸೂತಕದ ನಂತರ, ಜನಿವಾರ ಬದಲಿಸಿ ಧಾರಣೆಮಾಡಬೇಕಾಗುತ್ತದೆ. ಬ್ರಹ್ಮಚಾರಿ 9 ಎಳೆಯ ಒಂದು ಜನಿವಾರ ಧಾರಣೆ ಮಾಡಿದರ ಗೃಹಸ್ಥ 9 ಎಳೆಯ 2 ಜನಿವಾರ ಧರಿಸಬೇಕೆಂದು ಶಾಸ್ತ್ರಗಳು ಹೇಳಿವೆ. ಗ್ರಹಸ್ಥನ ಒಂದು ಜನಿವಾರ ಮಡದಿಗೆ ಮುಡಿಪಾಗಿರುತ್ತದೆ.

ಜನಿವಾರದಲ್ಲಿರುವ ಬ್ರಹ್ಮಗಂಟು 5 ಗಂಟುಗಳಿಂದ ಕೂಡಿರುತ್ತದೆ. 5 ಗಂಟುಗಳು ಬ್ರಹ್ಮಜ್ಞಾನ, ಧರ್ಮ,ಅರ್ಥ, ಕಾಮ,ಮೋಕ್ಷದ ಪ್ರತೀಕವಾಗಿದೆ. ಹಾಗೆ ಪಂಚ ಯಜ್ಞ, ಪಂಚ ಜ್ಞಾನೇಂದ್ರಿಯ, ಪಂಚ ಕಾರ್ಯಗಳನ್ನು ಪ್ರತಿನಿಧಿಸುತ್ತದೆ. ಜನಿವಾರದ ಧಾರಣೆ ಗಾಯಿತ್ರಿಮಂತ್ರದಿಂದಾಗಿರುತ್ತದೆ. ಗಾಯಿತ್ರಿ ಮಂತ್ರ ಯಜ್ಞೋಪವೀತದ ಸಮ್ಮಿಳನವೇ ದ್ವಿಜತ್ವ,ಜನಿವಾರದಲ್ಲಿ ಮೂರು ಎಳೆಗಳಿರುತ್ತವೆ. ಮಂತ್ರದಲ್ಲಿ ಮೂರುಚರಣಗಳಿವೆ.

"ತತ್ಸವಿತುರ್ವರೇಣ್ಯಮ್" ಮೊದಲ ಚರಣ, ಭರ್ಗೋದೇವಸ್ಯ ಧೀಮಹೀ ಎರಡನೇಯ ಚರಣ

"ಧಿಯೋಯೋನಃ ಪ್ರಚೋದಯಾತ್" ಮೂರನೇಯ ಚರಣ .

**ಜನಿವಾರ ಧರಿಸುವಾಗ ಹೇಳುವ ಮಂತ್ರ- ಯಜ್ಞೋಪವೀತಂ ಪರಮಂ ಪವಿತ್ರಂ ಪ್ರಜಾಪತೇರ್ಯತ್ಸಹಜಂಪುರಸ್ತಾತ್। ಆಯುಷ್ಯಮಗ್ರ್ಯಂ ಪ್ರತಿಮುಂಚ ಶುಭ್ರಂ ಯಜ್ಞೋಪವೀತಂ ಬಲಮಸ್ತು ತೇಜಃ॥**

**ಅರ್ಥ-** ಯಜ್ಞೋಪವೀತ ಪರಮ ಪವಿತ್ರವಾದದ್ದು ,ಬ್ರಹ್ಮನಿಗಿಂತ ಮೊದಲೇ ಉತ್ಪನ್ನಗೊಂಡಿದ್ದು, ಆಯುಷ್ಯವನ್ನು ಹೆಚ್ಚಿಸಿ ,ಮನುಷ್ಯನನ್ನು ಶುಭ್ರಮಾಡುವಂಥಹದು ,ನಮ್ಮ ಮಾನಸಿಕ ಬಲ ಹಾಗೂ ತೇಜಸ್ಸನ್ನು ಹೆಚ್ಚಿಸಿಕೊಳ್ಳುವಂಥಹದು.ಹಾಗಾಗಿ ಜನಿವಾರ ಧಾರಣೆಗೆ ನಮ್ಮ ಸಂಸ್ಕೃತಿಯಲ್ಲಿ ವಿಶೇಷ ಮಹತ್ವ ನೀಡಲಾಗಿದೆ.

ಮೊದಲನೇಯ ಜನಿವಾರದ ಎಳೆ ದೇವ ಋಣ ,ಎರಡನೇಯ ಎಳೆ ಸತ್ವಗುಣ, ರಜೋಗುಣ,ತಮೋಗುಣಗಳ ಪ್ರತೀಕವಾಗಿದೆ. ಒಟ್ಟು ಯಜ್ಞೋಪವೀತದಲ್ಲಿ 9 ಎಳೆ. ಮನುಷ್ಯ 2 ಕಣ್ಣು, 2 ಕಿವಿಗಳು, ಮಲಹಾಗೂ ಮೂತ್ರದ್ವಾರಗಳಿಂದ ಒಂದು ಶರೀರ ರಚನೆಯಾಗಿರುವಂತೆ ಜನಿವಾರ ಕೂಡ 9 ಎಳೆಗಳಿಂದ ಜೀವಾತ್ಮನನ್ನು ಪ್ರತಿನಿಧಿಸುತ್ತದೆ. ಹಾಗೇಯೇ ಬಾಯಿಯಿಂದ ಒಳ್ಳೆಯ ಮಾತು, ಒಳ್ಳೆಯ ಆಹಾರ, ಕಣ್ಣಿನಿಂದ ಒಳ್ಳೆಯ ವಿಷಯ, ಬಾಯಿಯಿಂದ ಒಳ್ಳೆಯ ಮಾತು ,ಒಳ್ಳೆಯ ಆಹಾರ ,ಕಿವಿಯಿಂದ ಒಳ್ಳೆಯ ವಿಷಯ ಕೇಳಬೇಕೆಂಬ ತತ್ವವನ್ನು ಯಜ್ಞೋಪವೀತ ಸಾರುತ್ತದೆ.

ಇದರ ಉದ್ದಗಲ 96 ಇಂಚುಗಳಿರಬೇಕು. ಧರಿಸಿದ ವ್ಯಕ್ತಿಗೆ 64 ಕಲೆಗಳನ್ನು 32 ವಿದ್ಯೆಗಳನ್ನು ಕಲಿಯುವ ಹಂಬಲವಿರಬೇಕು. 4ವೇದಗಳು,4ಉಪವೇದಗಳು, 6 ಅಂಗಗಳು, 6 ದರ್ಶನಗಳು, 3 ಸೂತ್ರ ಗ್ರಂಥಗಳು 9 ಅರಣ್ಯಕಗಳನ್ನು ಸೇರಿಸಿದರೆ 32 ವಿದ್ಯೆ ಆಗುತ್ತವೆ. ವಾಸ್ತುನಿರ್ಮಾಣ, ಚಿತ್ರಕಲೆ, ಸಾಹಿತ್ಯ,ಯಂತ್ರನಿರ್ಮಾಣ, ಆಭರಣ ತಯಾರಿಕೆ, ಕೃಷಿ,ಜ್ಞಾನ ಮುಂತಾದವು. ಜನಿವಾರ ಧರಿಸಿದ ವ್ಯಕ್ತಿ ಈ ವಿದ್ಯೆ ಕಲಿಯಲು ಪ್ರಯತ್ನಿಸಬೇಕೆಂದು ಶಾಸ್ತ್ರಗಳು ತಿಳಿಸುತ್ತವೆ.



ವೈಜ್ಞಾನಿಕ ಮಹತ್ವ- ಜನಿವಾರ ಧರಿಸಿದ ವ್ಯಕ್ತಿ ನಿಯಮಗಳಿಂದ ಬಂಧಿತನಾಗುತ್ತಾನೆ. ಧರಿಸಿದ ಪ್ರತಿ ವ್ಯಕ್ತಿ ಸಾತ್ವಿಕ ಜೀವನದತ್ತ ಕೊಂಡೊಯ್ಯುತ್ತದೆ. ಸಾತ್ವಿಕ ಆಹಾರ, ಜೀವನ ನಡೆಸುವದರಿಂದ ವ್ಯಕ್ತಿ ದೈಹಿಕ ಆರೋಗ್ಯ ಪಡೆದು ದೀರ್ಘಾಯುಷ್ಯ ಪಡೆಯುತ್ತಾನೆ. ಇದನ್ನು ಧರಿಸಿದ ವ್ಯಕ್ತಿಗೆ ಭಯ, ಹಾಗೂ ದುಸ್ವಪ್ನಗಳ ಸಮಸ್ಯೆ ಕಾಣುವದಿಲ್ಲ. ದೇಹದಲ್ಲಿರುವ ಸೂರ್ಯನಾಡಿ ಜಾಗೃತವಾಗಿರುತ್ತದೆ. ವ್ಯಕ್ತಿಯನ್ನು ಅನ್ಯಾಯ, ಅನೀತಿ ,ಭ್ರಷ್ಟಾಚಾರದಿಂದ ದೂರವಿರಿಸುತ್ತದೆ. ಹೀಗೆ ಯಜ್ಞೋಪವೀತ ಸಂಸ್ಕಾರವೆಂಬುದು ಪರಮ ಪವಿತ್ರ, ವೈಜ್ಞಾನಿಕ ಹಿನ್ನಲೆ ಇರುವ ಸಂಸ್ಕಾರ. ಇದರ ಧಾರಣೆ ಪ್ರತಿಯೊಬ್ಬ ಹಿಂದುವಿನ ಕರ್ತವ್ಯ ಇದರಿಂದ ವ್ಯಕ್ತಿಯ ಶಾರೀರಿಕ ಹಾಗೂ ಮಾನಸಿಕ ಆರೋಗ್ಯ ಸಾಧ್ಯವಾಗುವದು.

**ಹಬ್ಬದ ಮಹತ್ವವರಿತು ಸಂಭ್ರಮದಿಂದ ಆಚರಿಸಿ ಆರೋಗ್ಯದಿಂದ ಬಾಳೋಣ**

# ಅಕಾಲಿಕ ಸಾವಿಗೆ ತಡೆಗೋಡೆ: ನಿಮ್ಮ ವ್ಯಾಯಾಮ



ಹೃದಯ ಬಡಿತವನ್ನು ಹೆಚ್ಚಿಸುವ ಪ್ರತಿ ಹೆಜ್ಜೆಯೂ ಅಕಾಲಿಕ ಸಾವಿನ ಎದುರು ನಿಲ್ಲುವ ಗಟ್ಟಿ ಗೋಡೆಯಿದ್ದಂತೆ. ದಿನಕ್ಕೆ ಏಳು ಸಾವಿರ ಹೆಜ್ಜೆ ನಡೆಯುವವರಲ್ಲಿ ಹೃದಯಾಘಾತದ ಅಪಾಯ ಅರ್ಧದಷ್ಟು ಕಡಿಮೆಯಾಗುತ್ತದೆ ಎಂದು ವೈದ್ಯರ ಅಧ್ಯಯನ ಹೇಳುತ್ತದೆ. ವೇಗದ ನಡಿಗೆಯಿಂದ ರಕ್ತನಾಳಗಳು ಅಗಲವಾಗಿ ರಕ್ತದೊತ್ತಡ ಕಡಿಮೆಯಾಗುತ್ತದೆ. ವ್ಯಾಯಾಮದಿಂದ ಬರುವ ವಿಶೇಷ ಹಾರ್ಮೋನು ಯಕೃತ್ತಿನ ಕೊಬ್ಬನ್ನು ಕರಗಿಸಿ ಕ್ಯಾನ್ಸರ್ ಬರದಂತೆ ತಡೆಯುತ್ತದೆ.

ಬೆಳಗಿನ ಪಾರ್ಕಿನ ನಗು ಕ್ಲಬ್, ಸಂಜೆಯ ಮೈದಾನದ ಕಬಡ್ಡಿ-ವಾಲಿಬಾಲ್ ತಂಡಗಳು ಕೇವಲ ಆಟವಲ್ಲ, ಅವು ಒಂಟಿತನವನ್ನು ಓಡಿಸುವ ಸ್ನೇಹದ ಸೇತುವೆ. ಮನೆಯ ಹಿರಿಯರನ್ನು ವಾಕಿಂಗ್ ಕರೆದೊಯ್ಯುವುದು, ಬಡಾವಣೆಯ ಮಕ್ಕಳಿಗೆ ಯೋಗ ಕಲಿಸುವುದು ಆರೋಗ್ಯದ ಜೊತೆಗೆ ಒಳ್ಳೆಯತನವನ್ನೂ ಹೆಚ್ಚಿಸುತ್ತದೆ. ಜೊತೆಯಾಗಿ ಬೆವರು ಸುರಿಸಿದಾಗ ಜಾತಿ-ವಯಸ್ಸಿನ ಭೇದ ಮರೆತು ಮನುಷ್ಯತ್ವ ಅರಳುತ್ತದೆ.

ಆರೋಗ್ಯದ ದಾರಿ ಬಹಳ ಸರಳ. ವಾರದಲ್ಲಿ ಐದು ದಿನ, ದಿನಕ್ಕೆ ಮೂವತ್ತು ನಿಮಿಷ ಮಾತನಾಡುತ್ತ ನಡೆಯುವಷ್ಟು ವೇಗದಲ್ಲಿ ನಡೆಯಿರಿ. ಎರಡು ದಿನ ಕುರ್ಚಿ ಮತ್ತು ನೀರಿನ ಬಾಟಲಿ ಬಳಸಿ ಭಾರ ಎತ್ತುವ ವ್ಯಾಯಾಮ ಮಾಡಿ. ಮೆಟ್ಟಿಲು ಹತ್ತುವಾಗ ಎರಡೆರಡು ಮೆಟ್ಟಿಲು ಹತ್ತಿ ಕಾಲಿಗೆ ಬಲ ತುಂಬಿ. ಟಿವಿ ಜಾಹೀರಾತು ಬಂದಾಗ ಸ್ಕ್ವಾಟ್, ಪುಶ್‌ಅಪ್ ಮಾಡಿ.

ರಾತ್ರಿ ಊಟದ ನಂತರ ನೂರು ಹೆಜ್ಜೆ ನಡೆದರೆ ಅಜೀರ್ಣ ಹೋಗುತ್ತದೆ. ವ್ಯಾಯಾಮವನ್ನು ಕಹಿ ಮಾತ್ರೆಯಂತೆ ನುಂಗಬೇಡಿ, ಹಬ್ಬದಂತೆ ಆಚರಿಸಿ. ದೇಹ ಚುರುಕಾದರೆ ಮನಸ್ಸು ಹಗುರವಾಗುತ್ತದೆ. ಆಗ ಅಕಾಲ ಮರಣ ನಿಮ್ಮ ಮನೆಯನ್ನು ಮರೆತುಬಿಡುತ್ತದೆ. ಶ್ರಮವೇ ನಮ್ಮ ಆಯುಷ್ಯವನ್ನು ಕಾಪಾಡುವ ದೊಡ್ಡ ಶಕ್ತಿ.

**ಅಂಕಣ-05**
**ಸಾವು ಸಂಕಟಪಡುವ ಸಂಗತಿಗಳು..!**



**|ಡಾ.ಸುಧಾಕರ.ಜಿ.ಲಕ್ಕವಳ್ಳಿ**

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,